
ಕಲ್ಯಾಣ ಕಿರಣ



ಕಲ್ಯಾಣ ಕಿರಣ

ಮಾಸಪತ್ರಿಕೆ

ಬಿಡಿ ಪ್ರತಿ — ವಾರ್ಷಿಕ ಚಂದಾ

ಒಂದು ರೂಪಾಯಿ — ಹನ್ನೆರಡು ರೂಪಾಯಿ

ಸಂಪುಟ ೪ — ಬಸವಶಕೆ ೮೭೨

ಸಂಚಿಕೆ ೩ — ಜುಲೈ ೧೯೭೮

ಈ ಬೆಳಕಿನಲ್ಲಿ ಸುಳಿದಾಡಿದಾಗ?

ಮುಖಪುಟ : ಕನ್ನಡ ಸಾಹಿತ್ಯ ಪರಿಷತ್ತಿನ ಪುಣ್ಯಮೂರ್ತಿ ಶ್ರೀ ಜಿ. ನಾರಾಯಣ

ಹಿಂಬದಿಯ ಹೊದಿಕೆ : ಪೂಜ್ಯ ಮಾತಾಜಿ ಮತ್ತು ಪೂಜ್ಯ ಮಾಯೋರ್ಶಕ್ತಿ ಅವರಿಗೆ ಲಂಡನ್

ಕಲ್ಯಾಣ ಕಿರಣ

ತಲಕಾವೇರಿ

ನುಡಿ-ನೈವೇದ್ಯ

ನಳನಳಿಸುತ್ತಿ ಪೆ ಕಾವೇರಿಯ ಮನೆ
ಮೇಳೈಸಿಕೊಂಡು ಪರಶಿವ ಚೆಲುವನು ॥ ಪ ॥

ಮುಗಿಲನು ಮುಟ್ಟುವ ಗಿರಿಶೃಂಗಗಳಿಂ ಸೊ
ಬಗಿನಿಂ ಚುಂಬಿಪ ಮೇಘಾಳಿಗಳಿಂ ॥ಅ. ಪ॥

ಸುಯ್ಯನೆ ತಾಡಿಸಿ ಗಿರಿಗಳ ಭೇರಿಯ
ರೊಯ್ಯನೆ ಬಡಿದು ನಾದವ ಮಿಡಿಸುವ
ತಣ್ಣನೆ ಬೀಸುತ ತಂಪನ್ನೆರೆಯುವ
ಸುಣ್ಣನೆ ಅಲೆಯುವ ಕುಳಿರ್ಗಾಳಿಗಳಿಂ ॥ ೧ ॥


ಗಿರಿದ್ವಯ ಮಧ್ಯದ ಇಳಿಜಾರಿನಲಿ, ಒ
ಯ್ಯಾರದಿ ಬಳಕುವ ಸುಂದರ ಝುರಿಗಳು
ಜುಳುಜುಳು ಮಿಡಿವ ಶೃತಿಯು ಹಿನ್ನೆಲೆಯಲಿ
ಚಿಲಿಪಿಲಿ ಹಾಡುವ ಹಕ್ಕಿಯ ಗಾನದಿಂ ॥ ೨ ॥

ಧೂಪದ ಹೊಗೆಯೊಲು ತೆರೆತೆರೆಯಾಗಿ
ಸೋಪಿನಿಂ ತೇಲುತ ಬೆಟ್ಟವ ಬಳಸುವ
ತಿಳಿ ಬಿಳಿ ಮಂಜಿನ ಸುಂದರ ಸೆರಗು
ಮೊಗವನು ಮುಚ್ಚುವ ಮುಸುಕಾಗಿರಲು ॥ ೩ ॥

ಸೊಂಪಾದ ಹಸುರಿನ ಪತ್ತಲ ಉಟ್ಟು
ಕೆಂಪಾದ ಸೂರ್ಯನ ಹಣೆಬೊಟ್ಟನಿಟ್ಟು
ಸಚ್ಚಿದಾನಂದನ ವರಿಸಲು
ಮುಚ್ಚಿನಿಂ ನಿಂದಿಹಳು ಕನ್ನೆ ಕಾವೇರಿ ॥ ೪ ॥

—ಮಾತಾಜಿ

ನಿಮ್ಮ ಅನಿಸಿಕೆ



ಪೂಜ್ಯ ಶ್ರೀ ಜಗದ್ಗುರು ಮಾತೆಯವರ ಸನ್ನಿಧಿಗೆ ಹೃತ್ಪೂರ್ವಕ ವಂದನೆಗಳು.

ಕಳೆದ ತಿಂಗಳ ಕಲ್ಯಾಣ ಕಿರಣ ಕೈ ಸೇರಿದೊಡನೆಯೇ ತುಂಬ ಸಂತೋಷವೆನಿಸಿ, ತಮಗೆ ಅಭಿನಂದನೆ ಸಲ್ಲಿಸುತ್ತಿರುವೆ. ತಾವು ಕಲ್ಯಾಣ ಕಿರಣದಲ್ಲಿ ವೀರಶೈವ ಮಹಾ ಭಕ್ತರಲ್ಲಿ ಎಂದೂ ಪ್ರಸಿದ್ಧನಾಗಿರುವ ಶ್ರೀ ಹರಿಹರ ಮಹಾಕವಿಯ ವಿಷಯವಾಗಿ ಬರೆದಿರುವ ಸತ್ಯವಾದ, ಸತ್ವಯುತವಾದ, ದಿಟ್ಟತನದ ಲೇಖನವನ್ನು ಓದಿ ಹರ್ಷ ವಾಯಿತು. ಇಂದು ಒಬ್ಬನು ದೊಡ್ಡ ಕವಿ ಎಂದೊಡನೆಯೇ ಕಣ್ಣು ಮುಚ್ಚಿ "ಉಘೋ ಉಘೋ" ಎನ್ನುವವರೇ ವಿಶೇಷ! ಹರಿಹರನ ಐತಿಹಾಸಿಕ ಪ್ರಜ್ಞೆಯ ಕೊರತೆ ಅನೇಕ ಅಸಂಬದ್ಧ, ಅಸಮರ್ಪಕ, ತರ್ಕ ಗಳಿಗೆ ಕಾರಣವಾಗಿದೆ. ತಾವು ಹರಿಹರನ ಅಸತ್ಯ, ಕಾಲ್ಪನಿಕ, ಅಸಂಬದ್ಧ ವಿಚಾರ ಗಳನ್ನು ತಿಳಿಯಪಡಿಸಿ ಸಾಂಪ್ರದಾಯಿಕ ವಿಚಾರದ ಜನರಿಗೆ ಮಾರ್ಗದರ್ಶನ ಮಾಡಿರುವಿರಿ. ತಮ್ಮ ಸತ್ಯ-ನಿಷ್ಠುರ ವಿಚಾರ-ಪ್ರಚಾರ ಕಾರ್ಯಗಳಿಗೆ ನನ್ನ ಸ್ವಾಗತ ಹಾಗು ಅಭಿನಂದನೆ.


ಹುಬ್ಬಳ್ಳಿ —ಬಸವಾನಂದರು

[illegible]ತಿ,ಸಮಾಧಾನ, ಸಂತೃಪ್ತಿ, ಸಾಕ್ಷಾತ್ಕಾ[illegible] ಜ್ಞಾನೋದಯ ಇವು ಎಲ್ಲರ ಪಾ[illegible] ಶಾಶ್ವತವಾಗಿ ಲಭಿಸತಕ್ಕಂತಹ ವಲ್ಲ. ಶ್ರೀ ವೀರಭದ್ರಾರಾಧ್ಯರ ಕವನ ಅನ್ವೇಷಣೆ - ಅರಿವು - ಅನುಭಾವಗಳ ಚಿತ್ರಣ. ಅವರ ಮಾತಿನಲ್ಲೇ ಹೇಳುವು ದಾದರೆ ಅದು ಒಂದು ಕಷ್ಟ ಸಾಧ್ಯವಾದ ಮಾರ್ಗ. ಕಗ್ಗತ್ತಲೆಯ ಕಂದರ, ದುರ್ನಾ ತದ ಮಂದಿರ. ಕವನ ಬಹಳ ಅರ್ಥ ಪೂರ್ಣವಾಗಿದೆ ಎಂದೆಂದಿಗೂ ಯಾವ ಕಾಲಕ್ಕೂ ಮಾಸದ ಭಾವಾರ್ಥವನ್ನು ಹೊಂದಿದೆ.

ಬೆಂಗಳೂರು —ಎ. ಭಾಸ್ಕರ್

ಕಲ್ಯಾಣ ಕಿರಣ ಮಾಸ ಪತ್ರಿಕೆ ನಮ್ಮ ನಾಡಿಗೆ ಆಧ್ಯಾತ್ಮ ಮತ್ತು ಭಕ್ತಿರಸದ ಅರಿವನ್ನುಂಟು ಮಾಡುವ ಅಪೂರ್ವ ಶಕ್ತಿ ಯನ್ನು ಹೊತ್ತು ತರುವ ಪತ್ರಿಕೆಯಾಗಿದೆ. ಒಮ್ಮೆ ಓದಲು ಪ್ರಾರಂಭಿಸಿದ ಮೇಲೆ ಪೂರ್ತಿ ಓದಿ ಮುಗಿಸುವವರೆಗೂ ಸಮಾಧಾನ ವಿರುವುದಿಲ್ಲ. ಅಷ್ಟು ಕಾಲವೂ ನಾವು ಹೊರ ಜಗತ್ತನ್ನೆ ಮರೆತು ಅದರ ಜ್ಞಾನ ಪೂರ್ಣ ವಿಚಾರಗಳಲ್ಲಿ ಮತ್ತು ಭಕ್ತಿರಸ ದಲ್ಲಿ ಮಿಂದು ಬಂದಂತಾಗುತ್ತದೆ. ಲಿಂಗ ಪೂಜೆ, ಬಸವಣ್ಣ, ಅಕ್ಕಮಹಾದೇವಿಯರ ತತ್ವ ಸಂದೇಶಗಳ ಹಿರಿಮೆಯ ಬಗ್ಗೆ ಈಗಿನ ಜನ ಸಮುದಾಯಕ್ಕೆ ಅರಿವನ್ನುಂಟು ಮಾಡಿ ತಮ್ಮ ಆತ್ಮೋದ್ಧಾರ ಮಾಡಿಕೊಳ್ಳಲು ಕಲ್ಯಾಣ ಕಿರಣ ದಾರಿ ದೀಪದಂತಿದೆ. ಕನ್ನಡ ನಾಡಿನ ಪ್ರತಿಯೊಬ್ಬರ ಮನೆ ಯಲ್ಲೂ ಇದನ್ನು ಓದಿ ಅರ್ಥ ಮಾಡಿ ಕೊಂಡು ಅನುಷ್ಠಾನಗೊಳಿಸಿಕೊಂಡರೆ ಇದು ನಮಗೂ ಮತ್ತು ನಾಡಿಗೂ ಕಲ್ಯಾಣ ವನ್ನುಂಟು ಮಾಡಿದಂತಾಗುತ್ತದೆ.

—ಎಸ್. ಪರಮಶಿವಯ್ಯ



ಕ್ರೈಸ್ತ ಶಾಲಾ ಶಿಕ್ಷಣ ಮತ್ತು ಸಂಸ್ಕೃತಿ ಪತನ

ಮಕ್ಕಳನ್ನು ಶಾಲೆಗೆ ಸೇರಿಸಲು ತಾಯಿ ತಂದೆಗಳು ಆತುರಗೊಳ್ಳುವ ಸಮಯ ವಿದು. ಅಂತೆಯೇ ವಿದ್ಯಾದಾನವನ್ನು ಒಂದು ಲಾಭದಾಯಕ ಉದ್ಯಮವನ್ನಾಗಿ ಮಾಡಿ ಕೊಂಡವರಿಗೆ ಒಳ್ಳೇ ಸೀಸನ್. ನಗರದ ಸುಪ್ರಸಿದ್ಧ ಕಾನ್ವೆಂಟೊಂದರಲ್ಲಿ ನರ್ಸರಿ ತರಗತಿಗೆ ಸೇರಿಸಲು ಮಂತ್ರಿಮಹೋದಯರ ಮಟ್ಟದಿಂದ ಶಿಫಾರಸು ತರಬೇಕಾಯಿ ತೆಂದು ಓರ್ವರು ಹೆಮ್ಮೆಯಿಂದ ಬೀಗುತ್ತಿದ್ದರು. ಒಂದನೆ ತರಗತಿಗೆ ಸೇರಿಸಲು ಒಳಗೆ ಹೋದ ತಂದೆಯೊಬ್ಬರು ಅಡ್ಮಿಷನ್, ಡೊನೇಶನ್, ಬಿಲ್ಡಿಂಗ್ ಫಂಡು, ಅದೂ ಇದು ಎಂದು ಒಂದು ಸಾವಿರ ತೆತ್ತು ಹೊರಬರಬೇಕಾಯಿತಂತೆ. ಅತ್ಯಂತ ಪವಿತ್ರವಾದ ಸರಸ್ವತಿಯ ಗದ್ದುಗೆ, ಮತಿವಂತಿಕೆ-ಶ್ರದ್ಧೆಗಳುಳ್ಳವರ ಸೊತ್ತಾಗಬೇ ಕಾದುದು ಇಂದು ಲಕ್ಷ್ಮೀಪತಿಗಳ ಸೊತ್ತಾಗುವ ಪರಿಸ್ಥಿತಿಗೆ ಬಂದಿದೆಯಲ್ಲಾ ಎಂದು ವಿಷಾದವೆನಿಸಿತು ನನಗೆ. "ಇಷ್ಟು ಹಣದಲ್ಲಿ ಅಂದರೆ ಶ್ರೀಮಂತ ಕಾನ್ವೆಂಟುಗಳಲ್ಲಿ ಎರಡನೆ ತರಗತಿಗೆ ವ್ಯಯಿಸುವ ಹಣದಲ್ಲಿ ನಾವು ಬಿ.ಎ. ಎಂ.ಎ. ಮುಗಿಸುತ್ತಿದ್ದೆವು...." ಎಂದರು ಓರ್ವರು ಬಡತನದಲ್ಲಿ ಹೋರಾಡಿ ಉನ್ನತ ಮಟ್ಟದ ಪ್ರತಿಭಾವಂತರಾದವರು.

ಕಾನ್ವೆಂಟು ಶಿಕ್ಷಣದ ಮೋಹ ಎಷ್ಟು ಅಧಿಕಧಿಕವಾಗುತ್ತಿದೆ ಎಂದರೆ ನಮ್ಮ ಮಕ್ಕಳು ಅಲ್ಲಿ ಶಿಕ್ಷಣ ಪಡೆದರೇನೇ ಬಾಳಿನ ಸಾರ್ಥಕ್ಯ ಎಂಬ ನಂಬುಗೆ ತಾಯಿ ತಂದೆಯರಲ್ಲಿ. ಹೋಗಲಿ ಒಂದು ವ್ಯಾಪಾರವೆಂದೇ ಅವರು ಮಾಡಿಕೊಳ್ಳುತ್ತಾರೆ ಎಂದು ಭಾವಿಸೋಣ, ಆದರೆ ಅದರಲ್ಲಿ ಅಭ್ಯಸಿಸಿ ಮಾತೃ ಧರ್ಮ ಸಂಸ್ಕೃತಿಯನ್ನು ಮಕ್ಕಳು ತೊರೆಯುವಂತಾಗುವಲ್ಲಿ ಎಷ್ಟು ವಿಷಾದನೀಯ ಪ್ರತಿಫಲ ಪಡೆದಂತಾಯ್ತು. ಕೆಲವು ಕ್ರೈಸ್ತ ಶಾಲೆಗಳಿಗೆ ಬರುವ ಮಕ್ಕಳು 'ಬಳೆಗಳನ್ನು ಹಾಕ ಕೂಡದು, ಹೂವು

ಗಳನ್ನು ಮುಡಿಯಕೂಡದು; ಕುಂಕುಮ ಹಣೆಯನ್ನು ಸೋಂಕಬಾರದು, ಎಂಬ ನಿಯಮಕ್ಕೆ ಒಳಗಾಗುವರು.

ಅಂಥ ಓರ್ವ ಲಿಂಗಾಯಿತ ಹುಡುಗಿಯನ್ನು ನಾನು ಉದ್ದೇಶ ಪೂರ್ವಕವಾಗಿ ಕೇಳಿದೆ: "ನೀನು ಕ್ರೈಸ್ತಳೋ, ಮುಸ್ಲಿಮಳೋ" ಎಂದು. "ಅದೇಕೆ ಮಾತಾಜಿ ಹಾಗೆ ಕೇಳುವಿರಿ. ' ನಾನು ಲಿಂಗಾಯಿತಳಲ್ಲವೆ?" ಎಂದು ನುಡಿದಳು.

"ಹೌದು ನಿನ್ನ ಹಣೆಯಲ್ಲಿ ಕುಂಕುಮವಿಲ್ಲ, ಕೈಯಲ್ಲಿ ಬಳೆ ಇಲ್ಲ. ಹೇಗೆ ತಿಳಿಯುವುದು." "ನಮ್ಮ ಶಾಲೆಯಲ್ಲಿ ಇದು ಕಡ್ಡಾಯ" ಎಂದಳು. "ಕಡ್ಡಾಯ ವೇಕೆ?"

"ವಿದ್ಯಾರ್ಥಿಗಳು ತಾವು ಯಾವ ಯಾವ ಧರ್ಮದವರು ಎಂಬುದನ್ನು ತೋರಿಸಿ ಕೊಳ್ಳಬಾರದೆಂಬುದೇ ಉದ್ದೇಶ...."

"ಆದರೆ ಈ ಎಲ್ಲವನ್ನು ವರ್ಜಿಸಿದಾಗ ನೀವು ಕ್ರೈಸ್ತರಂತೆಯೇ ಕಾಣುತ್ತೀರಿ ಆಗ ನೀವು ಕ್ರೈಸ್ತ ಸಂಸ್ಕೃತಿಯ ದೂತರಂತೆ ತೋರುವಿರಿ. ನಿಮ್ಮನ್ನು Simple ಮಾಡುತ್ತೇವೆ ಎಂಬ ನೆಪದಲ್ಲಿ ಎಂಥಾ ಸಂಸ್ಕೃತಿಯ ವಿನಾಶ ಮಾಡುತ್ತಿದ್ದಾರೆ ಎಂಬುದು ಅರಿವುಂಟೆ?"

ನನಗೆ ಒಂದು ಆಶ್ಚರ್ಯವೇನೆಂದರೆ ನಮ್ಮ ಹಿಂದೂ ಸಮಾಜದ ಹಣದಲ್ಲಿ ಹಿಂದೂ ಮಕ್ಕಳಿಗೆ ಕ್ರೈಸ್ತ ಸಂಸ್ಕೃತಿಯನ್ನವರು ಹೇರುತ್ತಿದ್ದಾರೆ; ನಮ್ಮ ಜನರೇ ಶಾಲೆ-ಕಾಲೇಜುಗಳನ್ನು ತೆಗೆದು ನಮ್ಮ ಸಂಸ್ಕೃತಿಯನ್ನು ನಮ್ಮ ಹಣದಲ್ಲಿ ನಮ್ಮ ಮಕ್ಕಳಿಗೆ ಏಕೆ ಕಲಿಸಲಾಗುತ್ತಿಲ್ಲ. ಏಕೆ ಈ ಸಮಾಜದಲ್ಲಿ ಈ ಕ್ಲೈಬ್ಯ.

ತುಮಕೂರಿನಲ್ಲಿ ನಾನು ಪ್ರವಚನ ಮಾಡುವಾಗ ಓರ್ವ ಸಭ್ಯ ಗೃಹಸ್ಥರು ಬೇಸಿಗೆ ರಜಕ್ಕೆ ಬಂದಿದ್ದ ಹೆಣ್ಣು ಮಕ್ಕಳಿಬ್ಬರನ್ನು ದರ್ಶನಕ್ಕೆ ಕರೆದುಕೊಂಡು ಬಂದರು. ಹತ್ತು-ಹನ್ನೆರಡು ವರುಷದ ಬಾಲಕಿಯರವರು. ಆದರೆ ಅವರ ಕ್ರೈಸ್ತ ಶಿಕ್ಷಕಿಯ ಬೋಧೆ ತಲೆಯಲ್ಲಿ ಎಷ್ಟರ ಮಟ್ಟಿಗೆ ಹಿಡಿದಿತ್ತೆಂದರೆ ಕ್ರೈಸ್ತ ಧರ್ಮವೊಂದೇ ನಿಜಧರ್ಮ, ಏಸು ಒಬ್ಬನೇ ನಿಜವಾದ ಪ್ರವಾದಿ ಎಂಬ ನಂಬಿಕೆ ಅಚ್ಚೊತ್ತಿತ್ತು. "ತಂದೆ ಇಲ್ಲದೆ ಏಸು ಹುಟ್ಟಿದ. ಆ ರೀತಿ ಹುಟ್ಟಿದ ಹಿಂದೂ ಪ್ರವಾದಿಗಳನ್ನು ತೋರಿಸಿ" ಎಂಬ ಸವಾಲು ಆ ಮಕ್ಕಳದು. ಪ್ರತಿನಿತ್ಯ ಆ ಮಕ್ಕಳು ಬೈಬಲ್ ಓದಿಯೇ ಮಲಗಬೇಕು ಎಂಬುದು ಅವರ ಶಿಕ್ಷಕರು ಹೇರಿದ ನಿಯಮ. ಉಳಿದ ಯಾವುದೇ ಹಿಂದೂ ಶಾಸ್ತ್ರಗಳು ನಿಷಿದ್ಧವೆಂದು ಆ ಮಕ್ಕಳ ಭಾವನೆ.

ಏಸುವಿನ ದೊಡ್ಡಸ್ತಿಕೆ ಏರಿಸುವ ಇನ್ನೊಂದು ವೈಖರಿ: ಒಂದೇ ರೀತಿಯ ಬಣ್ಣದ ಬೊಂಬೆಗಳನ್ನು ತರುವುದು. ಕಬ್ಬಿಣದಿಂದ ಮಾಡಲ್ಪಟ್ಟ ಶಿವ, ರಾಮ, ಕೃಷ್ಣ ಮುಂತಾದವರ ಗೊಂಬೆಗಳನ್ನು ನೀರಿಗೆಸೆದಾಗ ಅವು ಮುಳುಗಬೇಕು ಏಸುವಿನ ಮರದಬೊಂಬೆ ಎಸೆದಾಗ ಅದು ತೇಲಬೇಕು. ಆಗ ಶಿಕ್ಷಕಿಯರು ಹೀಗೆ ವ್ಯಾಖ್ಯಾನಿಸ ಬೇಕು. "ನಿಮ್ಮ ದೇವರುಗಳು ತಾವೇ ಮುಳುಗುವಾಗ ನಮ್ಮನ್ನು ಹೇಗೆ ತೇಲಿಸ ಬಲ್ಲವು. ನಮ್ಮ ಏಸು ದೇವರು ಹೇಗೆ ತೇಲುವನು ನೋಡಿ...." ಮುಗ್ಧ ಮಕ್ಕಳ ಮನದ ಮೇಲೆ ಇಂಥ ವಿಚಾರಗಳು ಅಚ್ಚಳಿಯದ ಪ್ರಭಾವ ಮುದ್ರೆ.

ನರ್ಸರಿ ಪ್ರಥಮ ತರಗತಿಗಳಲ್ಲಿ ಇನ್ನೊಂದು ಪ್ರಯೋಗ. ಎಲ್ಲರಿಗೂ ಕಣ್ಣು ಮುಚ್ಚಿಕೊಂಡು ಅವರ ಇಷ್ಟದೈವಗಳ ಹೆಸರು ಹೇಳುವಂತೆ ಹೇಳಿ ಮುಂದಿದ್ದ ಡೆಸ್ಕ ಮೇಲೆ ಏನೂ ಇಲ್ಲದಂತೆ ಬಿಡುವುದು. ಏಸುವಿನ ಹೆಸರು ಹೇಳಿ ಕಣ್ಣು ಬಿಟ್ಟಾಗ ಪೆಪ್ಪರಮಿಂಟು ಇಡುವುದು. ಎಳೆಯ ಮನಸ್ಸುಗಳು ಏಸುವಿನ ಹೆಸರು ಹೇಳಿದರೆ ಪೆಪ್ಪರಮಿಂಟು ಸಿಕ್ಕುವುದೆಂದಾಗ ಖುಷಿಯಿಂದ ಜಪಿಸದಿರವು.

ಕೆಲವು ಕ್ರೈಸ್ತ ಕಾನ್ವೆಂಟುಗಳಿಗಂತೂ ಮತಾಂತರವೇ ಮುಖ್ಯ ಗುರಿ. ಕೇವಲ ವರುಷವೊಂದರ ಹಿಂದೆ ಶಾಲಾಶಿಕ್ಷಕಿ ಮತಾಂತರಗೊಳ್ಳಲು ಒತ್ತಾಯಿಸಿದ್ದರಿಂದ ಇಕ್ಕಟ್ಟಿನಲ್ಲಿ ಸಿಕ್ಕ ಶಾಲಾಬಾಲಕಿ ರೇಲ್ವೆ ಹಳಿಗೆ ಸಿಕ್ಕಿ ಪ್ರಾಣ ತೊರೆದುದನ್ನು ನಾವೆಲ್ಲ ದಿನ ಪತ್ರಿಕೆಯಲ್ಲಿ ಓದಿದ್ದೇವೆ. ಇಷ್ಟಾದರೂ ಹಿಂದುಗಳಿಗೆ ಕ್ರೈಸ್ತ ಕಾನ್ವೆಂಟುಗಳ ಮೋಹ ಹೋಗಿಲ್ಲ. ಹೋಗಲಿ ತಾವು ದುಡ್ಡುಕೊಟ್ಟು ಮಕ್ಕಳನ್ನು ಕಳಿಸುವ ಶಾಲೆಗಳಲ್ಲಿ ಕಡ್ಡಾಯವಾಗಿ ಕ್ರೈಸ್ತ ಸಂಸ್ಕೃತಿ ಹೇರದಂತೆ ಹಿಂದು ಸಂಸ್ಕೃತಿ ಅಳಿಯದಂತೆ ಏನಾದರೂ ವ್ಯವಸ್ಥೆ ಪಾಲಕರು ಮಾಡಿಕೊಳ್ಳುವರೆ? ಇವರೆಲ್ಲ ಒಗ್ಗಟ್ಟಾಗಿ "ನಾವು ಬಳೆ ತೆಗೆಸೆವು, ಕುಂಕುಮ ಇಡುವೆವು" ಎಂದು ಪಟ್ಟು ಹಿಡಿದರೆ ಹಿಂದು ಮಕ್ಕಳ ಸಂಖ್ಯೆಯ ಮೇಲೆ ಅಭಿವೃದ್ಧಿಸುವ ಕಾನ್ವೆಂಟುಗಳು ಇಲ್ಲವೆನ್ನಲಾದೀತೆ? ಸ್ವಂತ ಸಮಾಜವನ್ನು ಕುಷ್ಠರೋಗದಂತೆ ತಿನ್ನುತ್ತಿರುವ ಹಲವಾರು ಮೌಲ್ಯಗಳ ವಿನಾಶಕಾರಿ ಪ್ರಭಾವ ವಿಸ್ತರಣೆಯ ಅರಿವು ಬಹುಪಾಲು ಹಿಂದುಗಳಿಗಿಲ್ಲ.


ಇದರರ್ಥ ಏಸುವನ್ನು ಅಗೌರವಿಸಬೇಕು; ಅವರ ಧರ್ಮವನ್ನು ಹೀಗಳೆಯ ಬೇಕೆಂದೇನೂ ಅಭಿಪ್ರಾಯವಲ್ಲ. ಮೊದಲು ತನ್ನ ಹೆತ್ತವರಿಗೆ ಅಗ್ರಪೀಠ, ಸೇವೆ; ನಂತರ ಪರಸ್ತ್ರೀಯರನ್ನೂ ಗೌರವಿಸುವ ಸೌಜನ್ಯ ಬಲಿಯಬೇಕು. ಊರ ಹೆಂಗಸರನ್ನು ತಾಯಿ ಎಂದು ಗೌರವಿಸಿ, ಹೆತ್ತೊಡಲನ್ನೇ ತಿರಸ್ಕಾರದಿಂದ ಕಾಣುವುದು ಅವಿವೇಕರುಮಣೀಯವಲ್ಲದೆ ಇನ್ನೇನು. ಹಿಂದು ಜನಾಂಗಕ್ಕೆ, ದೇಶಕ್ಕೆತನ್ನದೇ ಆದಯಾವ ಮೌಲ್ವಿಕ ಪರಂಪರೆ ಇಲ್ಲದಿದ್ದರೆ ಸಿಕ್ಕಿದ್ದೇ ಸಾಕು ಎಂದು ಯಾವುದಾದರೊಂದನ್ನು

ಆಶ್ರಯಿಸಬಹುದಿತ್ತು. ಗಟ್ಟಿ ನೆಲ ಬಿಟ್ಟು ಕೆಸರಿನ ಮಡುವಿನಲ್ಲಿ ಕಾಲಿಡುವ ಮೌಢ್ಯತೆ ಏಕೆ ಬೇಕು !

ಮೊಟ್ಟ ಮೊದಲ ದರ್ಜೆಯ ನಿವೃತ್ತ ಅಧಿಕಾರಿಯೊಬ್ಬರು ಮಾತನಾಡುತ್ತ ಉದ್ಗಾರ ತೆಗೆದರು "ನಾವು ತಾರುಣ್ಯದ ಹುಮ್ಮಸ್ಸಿನಲ್ಲಿ ನಮ್ಮ ಮಕ್ಕಳು ಏನೇನೋ ಆಗಬೇಕೆಂದು ಮಾತೃಭಾಷೆಯ ಸೋಂಕೂ ಇಲ್ಲದೆ ಕೇವಲ ಆಂಗ್ಲ ಮಾಧ್ಯಮಿಕ ಕ್ರೈಸ್ತ ಶಾಲೆಗಳಲ್ಲಿ ಬೆಳೆಸಿದೆವು. ಆದರೀಗ ಪಶ್ಚಾತ್ತಾಪವಾಗುತ್ತಿದೆ. ಹಿಂದು ಸಂಸ್ಕೃತಿಯ ಸೋಂಕೂ ತಗುಲದೆ ಮಕ್ಕಳು ಅತಂತ್ರ ಪರಿಸ್ಥಿತಿಗೆ ಬಂದು ನಿಂತಿದ್ದಾರೆ. "ಜೊತೆಗೆ ಪಾಶ್ಚಿಮಾತ್ಯ ಸಂಸ್ಕೃತಿಯ ಸೆಳೆವಿನಲ್ಲಿಯೂ ಸಿಕ್ಕಿ ತಾಯಿ ತಂದೆಯರನ್ನು ಗೌರವಿಸದಿರುವ ಸ್ಥಿತಿಗೆ ಬಂದಿದ್ದಾರೆ."

ವಿಶಿಷ್ಟ ವಾತಾವರಣದಲ್ಲಿ ಬೆಳೆಯುವ ಗಿಡಗಳನ್ನು, ಸೂಕ್ತ ಪರಿಸರಗಳಲ್ಲೇ ನೆಡಬೇಕು. ಇಲ್ಲವಾದರೆ ಅವುಗಳ ಬೆಳವಣಿಗೆಯಾದರೂ ಕುಂಠಿತವಾಗುವದು ; ಅಥವಾ ಉತ್ತಮ ಫಲಗಳನ್ನಾದರೂ ನೀಡವು. ಹಾಗೆಯೇ ಒಂದೊಂದು ಸಂಸ್ಕೃತಿಯಲ್ಲಿ ಬೆಳೆದ ಮನಸ್ಸಿಗೆ ವಿಭಿನ್ನ ಸಂಸ್ಕೃತಿಯ ಶಿಕ್ಷಣ ಸಿಕ್ಕಾಗ Neither forward, nor backward but awkward ಎಂಬ ಸ್ಥಿತಿ ಪ್ರಾಪ್ತವಾಗುವದು. ಅಂತೆಯೇ ಹಿಂದುಗಳು ಈಗಲಾದರೂ ತಮ್ಮ ತಮ್ಮಲ್ಲಿನ ಭಿನ್ನಾಭಿಪ್ರಾಯಗಳಿಗೆ ಹೋರಾಡದೆ ಇವರೆಲ್ಲರನ್ನೂ ಎದುರಿಸುವ, ಹೆದರಿಸುವ Common foe (ಏಕೈಕ ಶತ್ರು) ವಿರುದ್ಧ ಹೋರಾಡಬೇಕು. ಮತಾಂತರದ ನೇರ ಉದ್ದೇಶದಿಂದ ಬರುವ ಕ್ರೈಸ್ತ ಪಾದ್ರಿ ವ್ಯಾಘ್ರದಂತಾದರೆ, ಶಿಕ್ಷಣದ ಮುಖೇನ ತಲೆಯನ್ನು ತುಂಬುವ ಶಿಕ್ಷಕ ಗೋಮುಖ ವ್ಯಾಘ್ರ. ಮೊದಲನೆ ಶತ್ರುವಿನಿಂದ ಪಾರಾದವರೂ ಎರಡನೆ ಶತ್ರುವಿನ ಬಲೆಗೆ ಬೀಳುವರು.

ಹಿಂದುಗಳೆಲ್ಲ ದಡ್ಡರಲ್ಲ, ದರಿದ್ರರಲ್ಲ. ಅವರಲ್ಲಿರುವ ಮೇಧಾವಿಗಳು, ಬುದ್ಧಿವಂತರೂ ಮುಂದೆ ಬಂದು ಧರ್ಮ-ಅಧ್ಯಾತ್ಮ ಸಹಿತ (Religion oriented) ಶಿಕ್ಷಣವನ್ನು ಮಕ್ಕಳಿಗೆ ಕೊಡುವ ವ್ಯವಸ್ಥೆಯಲ್ಲಿ ನಿರತರಾಗಬೇಕು. ವಿದ್ಯಾದಾನವನ್ನು ಕೇವಲ ಲಾಭದಾಯಕ ಉದ್ಯಮವೆಂದು ಗಣಿಸದೆ ಪರಮ ಪವಿತ್ರವಾದ ಕರ್ತವ್ಯವೆಂದು ಭಾವಿಸಿ, ಮಕ್ಕಳ ಮೇಲೆ ಮಾತೃಭೂಮಿ, ತಾಯ್ನೆಲದ ಸಂಸ್ಕೃತಿ ಅಭಿಮಾನ ಮೂಡುವಂತೆ ಮಾಡಬೇಕು. ಭವಿಷ್ಯ ಭಾರತದ ಉತ್ತಮ ಪ್ರಜೆಗಳನ್ನು ರೂಪಿಸುವ [illegible] ಸುಂದರ [illegible] ಸಂಪದವನ್ನ, [illegible] ಆ ದಿಶೆಯಲ್ಲಿ ಸಮಾಜದ ಚಿತ್ತ ಹರಿಯುವಂತಾಗಲೆಂದು ಹಾರೈಸುವೆನು. ☆



ಲಿಂಗದೋಗರ —ಸದ್ಗುರು ಶ್ರೀ ಲಿಂಗಾನಂದಸ್ವಾಮಿಗಳು

ನಿಶ್ಚಲವೆಂಬ ಭಾಜನದಲ್ಲಿ ನಿಜ ಜ್ಞಾನವೆಂಬ ಅಕ್ಕಿಯ ತುಂಬಿ
ಪರಮಾನಂದವೆಂಬ ಜಲವನೆರೆದು
ಸ್ವಯಂಪ್ರಕಾಶವೆಂಬ ಅಗ್ನಿಯಿಂದ ಪಾಕವಾದ ಲಿಂಗದೋಗರವು
ಮಹಾಘನದಲ್ಲಿ ನಿಂದು ಘನ ತೃಪ್ತಿಯನೀಯುತಿದ್ದಿತ್ತು ಕಾಣಿರೆ
ಅದ ಕಣ್ಣಿಲ್ಲದೆ ಕಂಡು, ಕೈಯಿಲ್ಲದೆ ಕೊಂಡು
ಬಾಯಿಲ್ಲದೆ ಉಂಡ ತೃಪ್ತಿಯ
ಅರಿವಿಲ್ಲದರಿವಿನಿಂದರಿದು ಸುಖಿಯಾದೆ ನಾನು ಗುಹೇಶ್ವರಾ !

(ಅ. ವ. ೧೩೮೭)

ಷಟಸ್ಥಲವೆಂಬ ದಾರ್ಶನಿಕ ವಿಚಾರ ಧಾರೆಯನ್ನು ವಿವಿಧ ದೃಷ್ಟಿಕೋನಗಳಿಂದ ಹಲವಾರು ತಾತ್ವಿಕ ವಿಭಜನೆಗಳಿಂದ ಅನೇಕರು ಅಭ್ಯಸಿಸಿದ್ದಾರೆ. ಅದರಲ್ಲಿ ನೂರೊಂದು ಸ್ಥಲಗಳಿಂದ ಕೂಡಿದ ವಿಶ್ಲೇಷಣೆ ಪ್ರಮುಖವಾಗಿದೆ. ಅಂಗಸ್ಥಲ ಮತ್ತು ಲಿಂಗಸ್ಥಲವೆಂದು ಇವುಗಳಲ್ಲಿ ವಿಭಜನೆಯಾಗಿದ್ದು ಅಂಗಸ್ಥಲದಲ್ಲಿ ೪೪ ಸ್ಥಲಗಳು, ಲಿಂಗಸ್ಥಲದಲ್ಲಿ ೫೭ ಸ್ಥಲಗಳೂ ಬರುವವು. ಮರೆವಿನ ರೂಪದಲ್ಲಿ ಬಿದ್ದು ಅಳಲಿ ಬಳಲುವ ಜೀವಿಯು, ಪುಣ್ಯ ಸಂಸ್ಕಾರ ಸಂಚಯದಿಂದ ಇದ್ದಕ್ಕಿದ್ದಂತೆಯೇ ಜಾಗೃತನಾಗಿ ನಾನಾರು ? ಎಂದು ಪ್ರಶ್ನಿಸಿ, ಅನ್ವೇಷಣೆಗೆ ತೊಡಗಿ, ಅನುಭಾವದಿಂದ ತನ್ನಲ್ಲಿಯೇ ಕಂಡುಕೊಳ್ಳುವ ಮಹಾಪ್ರಕ್ರಿಯೆಯ ಸಮಗ್ರ ಕಲ್ಪನೆ ಅಂಗಸ್ಥಲದಲ್ಲಿ ವಿವರಿಸಲ್ಪಟ್ಟಿದೆ. ಈ ಜೀವನ್ಮುಕ್ತ ಸಿದ್ಧಪುರುಷ ಶಿವಯೋಗಿಯು ಲೋಕ ವ್ಯವಹಾರದಲ್ಲಿ ನಿರ್ಲಿಪ್ತನಾಗಿ ತಲ್ಲೀನನಾಗುವ ಕ್ರಿಯಾಚಟುವಟಿಕೆಯ ವಿವರಣೆ ಲಿಂಗಸ್ಥಲದಲ್ಲಿ ಬರುವುದು. ಈ ಲಿಂಗಸ್ಥಲದ

ಆತ್ಯಂತಿಕ ಸಿದ್ಧಿಶೃಂಗದ ಸ್ಥಿತಿ ಜ್ಞಾನಶೂನ್ಯ ಸ್ಥಲ. ಆ ಸ್ಥಲದಲ್ಲಿ ಬರುವ ಸಿದ್ಧ ಪುರುಷನ ಮನಃಸ್ಥಿತಿಯ ಚಿತ್ರಣ ಇಲ್ಲಿದೆ.

ಯಾವುದೇ ಹೊಯ್ದಾಟಗಳಿಲ್ಲದ ನಿಸ್ತರಂಗ ಚಿತ್ತವೆಂಬ ಪಾತ್ರೆಯಲ್ಲಿ ನಿಜ ವಸ್ತುವಿನ ಜ್ಞಾನವೆಂಬ ಅಕ್ಕಿಯನ್ನು ಇರಿಸಿ, ಸುಖದುಃಖಗಳ ಲೇಪವಿಲ್ಲದ ಪರಮ ಸುಖವೆಂಬ ನೀರನ್ನೆರೆದು ಅಡಿಗೆ ಮಾಡತೊಡಗುವನು ಈ ಜೀವನ್ಮುಕ್ತನು. ನಿಶ್ಚಲವಲ್ಲದ ಮನದಲ್ಲಲ್ಲದೆ ಈ ದಿವ್ಯಪಾಕ ಪಕ್ವವಾಗದು. ಯಾವ ಧ್ಯೇಯವನ್ನು ನಾವು ಮುಟ್ಟ ಬೇಕೆಂಬ ಅರಿವಿಲ್ಲದೆ ಸಾಧನೆ ಸಿದ್ಧಿಸದು. ಚಿಂತೆಯ ಕ್ರಿಮಿಯಿಂದ ಕೂಡಿದ, ದುಃಖದ ಮಲಿನತೆಯಿಂದ ಮಲೆತ ಉದ್ವಿಘ್ನತೆಯ ನೀರಲ್ಲ ಇಲ್ಲಿ ಒದಗಿರುವದು. ಸ್ವಾನಂದದ ತಿಳಿಗಂಗೆ. ಈ ಪಾಕವನ್ನು ಬೇಯಿಸಲು ಬೇಕಾದುದು ಶಬ್ದ ಜ್ಞಾನವಲ್ಲ, ಶಾಸ್ತ್ರ ಜ್ಞಾನವಲ್ಲ, ಆತ್ಮಮಥನದಿಂದ ಮೂಡಿದ ಸ್ವಯಂಪ್ರಕಾಶ (Self awareness). ಈ ಎಲ್ಲ ಕ್ರಿಯೆಯ ಬಳಿಕ ಸಿದ್ಧವಾಯಿತು ಲಿಂಗವ ಓಗರ.

ಇನ್ನು ಉಣ್ಣುವವರಾರು, ಉಣ್ಣುವುದು ಹೇಗೆ? ಈ ಜೀವನ್ಮುಕ್ತನೇ ಅಂಗಭಾವವಳಿದು ಲಿಂಗಭಾವ ನೆಲೆಗೊಂಡು, ಮನಸ್ಸು ಘನ (Supermind)ವಾದ ಸ್ಥಿತಿಯಲ್ಲಿ ನೆಲೆ ನಿಂತು ದಿವ್ಯಾನುಭವ ಓಗರವ ಸವಿದಾಗ ಪರಮ ತೃಪ್ತಿಯು. ಇದು ಸಾಕೆನಿಸದ ಇನ್ನೊಂದು ಬೇಕೆನಿಸದ ನಿರಾಳ ತೃಪ್ತಿಯು ಅಳವಡುವುದು. ಈ ಅಡಿಗೆ ಲೋಕದ, ತಾರ್ಕಿಕರ ಅಥವಾ ಚರ್ಮಚಕ್ಷುಗಳಿಗೆ ಕಾಣಬರುವಂತಹುದೆ? ಅಲ್ಲ. ಅದನ್ನು ಕಣ್ಣಿಲ್ಲದೆ ಕಾಣಬೇಕು, ಅಂದರೆ ಅಂತರಂಗದ ಅರಿವಿನಿಂದಲೇ ಗ್ರಹಿಸಬೇಕು; ಕೈಯಿಲ್ಲದೆ ಕೊಳ್ಳಬೇಕು ಕ್ರಿಯಾತೀತ ಸ್ಥಿತಿಯಲ್ಲಿ ಉಪಚಾರಕ್ಕೆಂಬಿಲ್ಲದ ನಿಷ್ಪತ್ತಿ ಸ್ಥಿತಿಯಲ್ಲಿ ಸ್ವೀಕರಿಸಬೇಕು; ಬಾಯಿಲ್ಲದೆ ಉಣ್ಣಬೇಕು, ಹೃದಯುವೇ ಬಾಯಿಯಾಗಿ, ದ್ವಾರವಾಗಿ ಈ ಅನುಭಾವ ಪಾಕ ಅವಗತವಾಗಬೇಕು. ಇಂಥಾ ತೃಪ್ತಿಯನ್ನು ಅನುಭವಿಸುತ್ತಲಿರುವಾಗಲೇ ಅದನ್ನು ಸವಿಯುವ ಅರಿವೂ ಮರೆಯಾಗಿ ಭೋಜ್ಯ, ಭೋಜಕ, ಭೋಜನ ಎಂಬ ತ್ರಿಪುಟಿ ಅಳಿಯುವುದು. ಹೇಗೆ ಅಂಬುಜೆಯ ಮಕರಂದವನ್ನು ಪಾನಗೈಯುತ್ತ ದುಂಬಿ ಮೈಮರೆದು ದಳಗಳ ಗರ್ಭದಲ್ಲಿ ಸೆರೆಯಾಗುವದೋ ಹಾಗೆ ಈ ಅನುಭಾವಿಯು ತನ್ನ ಇರವಿನ ಅರಿವನ್ನೂ ಕಳೆದುಕೊಂಡು ದಿವ್ಯತ್ವದಲ್ಲಿ ಕೈಸೆರೆಯಾಗುವನು. ಆಗ ಇಲ್ಲಿ ಅರ್ಚನೆ, ಪ್ರಾರ್ಥನೆ ಎಲ್ಲವೂ ಶಬ್ದಾತೀತವಾಗಿ ಸಾಗುವವು. ಆಗ ಅವನ ಸ್ಥಿತಿ ಹೇಗೆ?

ಎರಡೊಂದಾದ ಬಳಿಕ ಅರ್ಚನೆ ಹಿಂಗಿತ್ತು
ಎರಡೊಂದಾದ ಬಳಿಕ ಅರ್ಪಿತ ಹಿಂಗಿತ್ತು

(೧೬ನೇ ಪುಟ ನೋಡಿ)

ಸಮಸ್ಯೆ ಸಮಾಧಾನ!

—ಹೆಸರು ಬೇಡ, ಚಾಮರಾಜನಗರ.

** ಕೆಲವರು ನಾವು ಬಸವಣ್ಣನವರಿಗಿಂತಲೂ ಪೂರ್ವದ ಲಿಂಗಾಯತರು. ಆದ್ದರಿಂದ ಉಳಿದವರಿಗಿಂತ ನಾವು ಶ್ರೇಷ್ಠರು ಎಂದು ಅನ್ನುವರು ಇದು ಸರಿಯೆ?

* ನಮ್ಮಪ್ಪನಿಗೆ ಮೊದಲೇ ನಾನಿದ್ದೆ ಎಂಬ ಹೇಳಿಕೆ ಎಷ್ಟು ಹಾಸ್ಯಾಸ್ಪದವೋ ಹಾಗೆ ಧರ್ಮದ ಆದಿಗುರುವಿಗೂ ಮೊದಲು ಈ ಧರ್ಮದ ಅನುಯಾಯಿ ನಾನಾಗಿದ್ದೆ ಎಂಬುದೂ ಅಷ್ಟೆ ಹಾಸ್ಯಾಸ್ಪದ.

—ರಾಚಪ್ಪ, ಚಾಮರಾಜನಗರ.

** ನಮ್ಮಲ್ಲಿ ಓರ್ವ ಮಠಾಧಿಪತಿಗಳು ಭಿಕ್ಷೆ ಎತ್ತಲು ಬಂದಿದ್ದರು. ನಾನು ಒಂದು ವಚನದ ಅರ್ಥವನ್ನಾದರೂ ಹೇಳಿದರೆ ಭಿಕ್ಷೆ ಕೊಡುವೆನೆಂದೆ. ಆದರೆ ಕಡೆಗೂ ಅವರು ಹೇಳಲಾರದೆ ಹೋದರು.

* ತಾನೇ ಉರಿಯದ ದೀಪ ಇನ್ನೊಂದು ದೀಪವನ್ನೇನು ಹಚ್ಚೀತು? ಉರಿಯದ ದೀಪದಿಂದ ಜ್ಞಾನದ ಕಿಡಿ ಪಡೆಯ ಬಯಸಿದುದು ನಿಮ್ಮ ತಪ್ಪಲ್ಲವೆ.

—ಪ್ರಭಾತ್ ರಂಜನ್, ಬೆಂಗಳೂರು.

** ಓರ್ವ ಹಿಂದುಳಿದ ಪಂಗಡದವನು ಬಸವಣ್ಣನವರು ಉತ್ತಮ ಕುಲದವರಿಗಾಗಿ ಹೋರಾಡಿ ಒಂದು ಜಾತಿಯನ್ನು ಸೃಷ್ಟಿಸಿದರು ಎನ್ನುವನು. ಇದು ಸರಿಯೆ?

* ಸಾವಿರಾರು ವರುಷಗಳಿಂದ ಧರ್ಮ ಸಂಸ್ಕಾರವಿಲ್ಲದ ನಿಮ್ಮ ವರ್ಗದವರಿಗೆ ಧರ್ಮ ಸಂಸ್ಕಾರ ನೀಡಲು ಧಾರ್ಮಿಕ ಸ್ವಾತಂತ್ರ್ಯ ಕೊಡಲು ಬಸವಣ್ಣನವರು ಜೀವನವಿಡೀ ಹೋರಾಡಿದರು. ಅದನ್ನು ಬಹುಪಾಲು ನಿಮ್ಮ ವರ್ಗದವರ ಅರಿತುಕೊಂಡೇ ಇಲ್ಲ. ಇದು ನಿಜಕ್ಕೂ ವಿಷಾದನೀಯ.

—ಶಿವಲಿಂಗದೇವರು, ಭಾಲ್ಕಿ.

** ಭಕ್ತಿ ಭಂಡಾರಿ ಬಸವಣ್ಣನವರು ಎಂಬ ವಿಶೇಷಣ ಬಸವಣ್ಣನವರಿಗೆ ಉಚಿತವೆ?

* ಕ್ರಾಂತಿಕಾರಿ ಯುಗಪುರುಷ, ಸಮತಾವಾದಿ, ಸರ್ವಾಂಗ ಪರಿಪೂರ್ಣ ವ್ಯಕ್ತಿತ್ವ

ಉಳ್ಳ ಬಸವಣ್ಣನವರನ್ನು ಕೇವಲ ಭಕ್ತಿಭಂಡಾರಿ ಎಂಬುದು ಏಕಮುಖ, ಸಂಕುಚಿತ. ಅದು ಅವರ ಕ್ರಾಂತಿಕಾರೀ ಮನೋಭಾವವನ್ನು ಮರೆಮಾಚುವ ತೆರೆಯೇ, ಅಲ್ಲದೆ ಬಸವಣ್ಣ ಗುರುವಲ್ಲ ಕೇವಲ ಭಕ್ತ ಎಂಬುದನ್ನು ಸಾರುವ ಕುತಂತ್ರವೂ ಆಗಬಹುದು. ಆದ್ದರಿಂದ ವಿಶ್ವಗುರು ಎಂಬುವುದೇ ಸೂಕ್ತವಾದ ವಿಶೇಷಣ.

—ಶರಣ ಬಸಪ್ಪ, ಕನ್ಯಾಕುಮಾರಿ.

** ಸಾಧು ಮತ್ತು ಸನ್ಯಾಸಿಗಳಲ್ಲಿ ಭೇದವುಂಟೆ?

* ಒಂದು ಬಗೆಯ ಬೇಜವಾಬ್ದಾರಿಯಿಂದ ಮನ ಬಂದತ್ತ ಅಲೆದಾಡುವವನು ಸಾಧು. ವಿಶಿಷ್ಟ ಗುರಿಯಿರಿಸಿ, ನಿಯಮ ಬದ್ಧವಾಗಿ ಸ್ವಯಂಕೃತ ಶಿಸ್ತಿನ ಜೀವನ ನಡೆಸುವವ ಸನ್ಯಾಸಿ. ಸಾಧುವನ್ನು ಬೀದಿಯಲ್ಲಿ ಅಂಡಲೆಯುವ ಶುನಕಕ್ಕೂ ಸನ್ಯಾಸಿಯನ್ನು ಶಿಸ್ತಿನಿಂದ ಸಾಕಲ್ಪಟ್ಟ ನಾಯಿಗೂ ಹೋಲಿಸಬಹುದು. ಹೇಗೆ ಸಾಕು ನಾಯಿಗೆ ಒಂದು ಪಟ್ಟಿ, ವಿಳಾಸ, ಆಶ್ರಯ ಇರುವವೋ ಹಾಗೆ ನಿಜವಾದ ಸನ್ಯಾಸಿಗೆ ಒಂದು ಪರಂಪರೆ, ಸದ್ಗುರುವಿನ ಆಶ್ರಯ, ವಿಶಿಷ್ಟಗುರಿ ಇರುವದು.

—ಮಂಜುಳಾ ಶಿವಾನಂದ, ಕನ್ನೂಘಟ್ಟ.

** ಶರೀರವಿಲ್ಲದೆ ಪ್ರಪಂಚದ ಸುಖ ಅನುಭವಿಸಲು ಸಾಧ್ಯವಿಲ್ಲ. ದೇವರಿಗೆ ಶರೀರವೇ ಇಲ್ಲ ಎನ್ನುತ್ತಾರೆ. ಅವನು ಹೇಗೆ ಆನಂದ ಅನುಭವಿಸಬಲ್ಲ?

* ಆನಂದ ಸ್ವರೂಪನೇ ಅವನಾಗಿರುವಾಗ ದೇವರು ಅನುಭವಿಸುವ ಅವಶ್ಯಕತೆ ಏನಿದೆ? ಸೀಮಿತ ವಸ್ತುವಿಗೆ ಮಾತ್ರ ಸುಖ-ದುಃಖಾನುಭವ 'ನಿಸ್ಸೀಮ ಪರಮಾತ್ಮನಿಗಲ್ಲ.

—ಸೂರ್ಯಕಾಂತ ಕಾಪ್ಸೆ, ಬೆಳಗಾಂವ.

** [illegible] ಸ್ತ್ರೀಯೊಬ್ಬಳಕ್ಕೆ [illegible]ವನ್ನು ಮಾಡಿರುವ ನನ್ನ ಮಿತ್ರನ ಮಡದಿ [illegible] ಹೇಳಿದರೂ ಕೇಳದೆ ಆಕೆಯೊಡನೆಯೇ ತಿರುಗುತ್ತಾನಲ್ಲ; [illegible] ಮಾಡಬೇಕು?

* [illegible] ನಗುನಗುತ್ತ [illegible] ಇರುವವನ್ನು, ಕಾಳೋರಗದೊಡನೆ [illegible] ದುರ್ಜನರ ಸಂಗ. ಇದನ್ನು ಮನವರಿಕೆ ಮಾಡಿಕೊಡುವುದನ್ನೇ ಉಳಿದ ಮಾರ್ಗ.

—ಆನಂದಕುಮಾರ ಸುರಪೂರ, ಇಂಡಿ.

** ಆತ್ಮ ಮತ್ತು ಮನಸ್ಸುಗಳಲ್ಲಿರುವ ವ್ಯತ್ಯಾಸವೇನು?

* ಮನಸ್ಸು ಒಂದು ಅಂತರೇಂದ್ರಿಯ; ಬಹಿರೇಂದ್ರಿಯಗಳನ್ನು ಅಂತರೇಂದ್ರಿಯಗಳೊಡನೆ ಸಂಪರ್ಕಿಸುವ ಮಧ್ಯವರ್ತಿ. ಆತ್ಮವೋ ದೇಹ, ಇಂದ್ರಿಯ, ಅಂತಃಕರಣ ಎಲ್ಲದರಲ್ಲೂ ಪ್ರವಹಿಸಿ, ಎಲ್ಲವನ್ನೂ ಆಡಿಸುವ ಸೂತ್ರಧಾರಕ ಚೈತನ್ಯ. ಮೈಕ್‌ನಂತೆ ಬಹೀರೇಂದ್ರಿಯ, ಆಂಪ್ಲಿಫೈಯರ್‌ನಂತೆ ಮನಸ್ಸು-ಇದ್ದರೆ ಆತ್ಮವು ವಿದ್ಯುತ್‌ನಂತೆ ಸರ್ವವ್ಯಾಪಿ.

—ಅನಿತಾ ಫುಳೆ, ಔರಾದ.

** ಚಿಂತೆಯೇ ಶರೀರದ ವೈರಿ ಅನ್ನುವರಲ್ಲ; ಇದು ಸರಿಯೆ?

* ತೆಂಗಿನ ಗಿಡದೊಳಗೆ ಬುಬ್ಬಾಡಿ ಸೇರಿಕೊಂಡು ಕೊರೆಯುವಂತೆ ಚಿಂತೆಯು ಒಳಸೇರಿದರೆ ದೈಹಿಕ ಮತ್ತು ಮಾನಸಿಕ ಎರಡೂ ಆರೋಗ್ಯಗಳನ್ನು ನಾಶ ಮಾಡುವುದು, ಜೀವನದ ಉತ್ಸಾಹವನ್ನೇ ಬತ್ತಿಸುವುದು.

—ಬಂಡೆಪ್ಪಾ ಕಂಟೆ, ಔರಾದ

** ನವದಂಪತಿಗಳಲ್ಲಿ ಒಡಕು ಹುಟ್ಟಿದರೆ ಆ ಸಂಸಾರದಲ್ಲಿ ಸುಖ ಸಿಗಬಲ್ಲುದೆ?

* ನವದಂಪತಿಗಳೇ ಇರಲಿ, ಹಳೇ ದಂಪತಿಗಳಿರಲಿ ಒಡಕು ಹುಟ್ಟಿದ ಮೇಲೆ ಸುಖ ಸಿಗದು. ಆ ಬಿರುಕು ಇನ್ನೂ ಸಣ್ಣದಿದ್ದಾಗಲೇ ಮುಚ್ಚುವುದು ನಿಜವಾದ ಜಾಣತನ. ತ್ವರಿತವಾಗಿ ಕಾರ್ಯಕ್ರಮ ಕೈಗೊಳ್ಳಿ.

—ಎ. ಎಚ್. ಹುಚ್ಚಪ್ಪ, ದಾವಣಗೆರೆ.

** ಈಗಿನ ಹರಿಜನರು ಎಂದು ಕರೆಯಲ್ಪಡುವವರು ಹೆಚ್ಚಾಗಿ ಹರನ ಭಕ್ತರು, ಶೈವ ಸಂಸ್ಕೃತಿಯವರು ಇದ್ದಾರಲ್ಲಾ?

* ಈ ಹಿನ್ನೆಲೆಯಲ್ಲಿ ಮಂತ್ರಿಗಳಾದ ಬಸವಲಿಂಗಪ್ಪನವರು 'ತಾವು ಹರಜನರೇ ವಿನಾ ಹರಿಜನರಲ್ಲ' ಎಂದು ಸಾರ್ವಜನಿಕವಾಗಿ ಘೋಷಿಸಿದುದನ್ನು ನೆನಪಿಸಬಯಸುವೆ. ಆ ಜನಾಂಗವನ್ನು ಎ.ಕೆ. ಎ.ಡಿ. ಎನ್ನುವುದು ಆದಿಕರ್ನಾಟಕರು, ಆದಿ ದ್ರಾವಿಢರು ಎಂಬುದನ್ನು ಸ್ಪಷ್ಟಪಡಿಸುತ್ತದೆ. ದ್ರಾವಿಡ ಸಂಸ್ಕೃತಿ ಶುದ್ಧ ಶೈವ, ಹರ ಸಂಸ್ಕೃತಿ ಎಂಬುದನ್ನು ಮರೆಯಬಾರದು. ಹರಿಜನ ಎಂಬ ಶಬ್ದ ಗಾಂಧೀಜಿಯವರಿಂದ ಪ್ರಚಲಿತವಾಯಿತು. ಪರಂಪರೆಯಿಂದ ಅವರು ಹರಜನರು.

—ಶಿವಯೋಗಪ್ಪ, ದಾವಣಗೆರೆ.

** ಪಂಚಾಕ್ಷರಿ ಮತ್ತು ಷಡಕ್ಷರಿ ಮಂತ್ರಗಳಲ್ಲಿ ಸಂಸಾರಿಗೆ ಯಾವುದು ಯೋಗ್ಯ ?

* ಬಸವ ಧರ್ಮದ ಪ್ರಕಾರ ಸಂಸಾರಿ–ಸನ್ಯಾಸಿ ಎಂಬ ಭೇದ ಶಿವಪಥದಲ್ಲಿಲ್ಲ. ಉಭಯತರೂ ಷಡಕ್ಷರಿಯೊಂದನ್ನೇ ಜಪಿಸಬೇಕು.

—ಬಸವಾನಂದರು, ಹುಬ್ಬಳ್ಳಿ.

** ಹರಿಹರನಂಥ ವಿಚಾರವಾದಿ ಕವಿ, ಸ್ಥಾವರಲಿಂಗಕ್ಕೆ ಅಷ್ಟು ಮಹತ್ವದ ಸ್ಥಾನ ಕೊಡಲು ಕಾರಣವೇನು ? ಶರಣಧರ್ಮದ ಇಷ್ಟಲಿಂಗಾರ್ಚನೆಯ ಮಹತಿ ಅರಿಯದವನೆ ?

* ಹರಿಹರ ವಿಚಾರವಾದಿ ಕವಿಯಲ್ಲ, ಭಕ್ತಿ ಪರವಶ ಭಾವುಕ ಕವಿ. ಅವನ ಸಾಹಿತ್ಯದಲ್ಲಿ ವೈಚಾರಿಕತೆಗೆ, ತತ್ತ್ವಜ್ಞಾನಕ್ಕೆ ಗೌಣಸ್ಥಾನ ; ಕಥೆ, ವರ್ಣನೆಗೆ ಅಗ್ರಸ್ಥಾನ. ಒಂದು ನೂತನ ಧರ್ಮವಾಹಿನಿಗೆ ಬಂದು ಸೇರಿದರೂ ಹಿಂದಿನ ಸಂಸ್ಕಾರಗಳಿಂದ ಪೂರ್ಣಬಿಡುಗಡೆ ಅವನಿಗೆ ಸಾಧ್ಯವಾಗಿಲ್ಲ. ಅವನ ವ್ಯಕ್ತಿತ್ವ ಸಾಹಿತ್ಯದಲ್ಲೂ ಅಭಿವ್ಯಕ್ತವಾಗಿದೆ.

—ಎನ್. ಶಂಕರಲಿಂಗಪ್ಪ, ನಾಗರಘಟ್ಟ.

** ಈ ಆಧುನಿಕ ಪ್ರಪಂಚದಲ್ಲೂ ಮಾಟ, ಮಂತ್ರಗಳು ನಡೆಯುತ್ತವೆ ಎಂದು ನಂಬುವರಲ್ಲ. ಈ ಬಗ್ಗೆ ನಿಮ್ಮ ಅಭಿಪ್ರಾಯವೇನು ?

* ಮಾನವನ ದೌರ್ಬಲ್ಯ ಮತ್ತು ಮೂಢತ್ವಗಳು ಎಷ್ಟೊಂದು ಅಧಿಕವಾಗಿವೆ ಎಂದರೆ ಆತ್ಮವಿಶ್ವಾಸವನ್ನೇ ಅವು ಎದೆಗುಂದಿಸುತ್ತವೆ. ಅವಿದ್ಯಾವಂತರಲ್ಲಷ್ಟೇ ಅಲ್ಲ, ವಿದ್ಯಾವಂತರಲ್ಲೂ ಇರುವ ಮೂಢರು ಹೊಸ ವೈಚಾರಿಕತೆಯ ಗಾಳಿಯನ್ನು ತಲೆಯಲ್ಲಿ ತೆಗೆದುಕೊಳ್ಳುವುದೇ ಇಲ್ಲ. ಹೀಗಾಗಿ ಇಂಥಾ ನಂಬಿಕೆ ಚಿರವಾಗಿ ಉಳಿಯುತ್ತಿವೆ.

—ಮಂಜು, ಶಿವಮೊಗ್ಗ.

** ಪರರಿಗೆ ಸಹಾಯವನ್ನು ಮಾಡುವ ಇಚ್ಛೆಯುಳ್ಳ ನಾನು ಸತ್ಪಾತ್ರರನ್ನು ಅರಿಯುವ ಬಗೆ ಹೇಗೆ?

* ಸಹಾಯ ಮಾಡಲು ಕೈಹಾಕುವ ಮುನ್ನ ನಿತ್ಯಾನಿತ್ಯವಿವೇಕ ಪ್ರಜ್ಞೆ ಬೆಳೆಸಿಕೊಂಡು, ಪಾತ್ರಾಪಾತ್ರತೆ ಅರಿಯುವ ಜಾಣ್ಮೆ ಬೇಕು. ಚಾಕುವೊಂದು ಕಟುಕನ ಕೈಗೆ ಸಿಕ್ಕಾಗ ಮಾಡುವ ಕೆಲಸವೇ ಬೇರೆ, ವೈದ್ಯನ ಕೈಲಿದ್ದಾಗ ಮಾಡುವ ಕೆಲಸವೇ ಬೇರೆ.

—ರೇಣುಕಾರಾಧ್ಯ ಹೆಚ್. ಕೆ., ರಾಮಸಮುದ್ರ.

** ಮಹಾಗುರು ಬಸವಣ್ಣನವರ ಗುರು ಯಾರು ?

* ಸ್ವಯಂಭುವು, ಅಜನು ಆದ ದೇವನಿಗೆ ತಾಯಿ ತಂದೆ ಹೇಗಿಲ್ಲವೋ ಧರ್ಮದ ಆದಿ ಗುರುವು, ಮಂತ್ರಪುರುಷನೂ ಆದ ಬಸವಣ್ಣನಿಗೆ ದೀಕ್ಷಾ ಗುರು ಇಲ್ಲ. ಅವನು ಸ್ವಯಂಕೃತನು (Self-made). ದೈವೀಕರುಣೆಯನ್ನು ಸ್ವಯಂ ಸಾಧನೆಯಿಂದ ಪಡೆದುಕೊಂಡ ಪ್ರವಾದಿಯವನು.

—ಗುರುಪುತ್ರ ನೇಳಗೆ, ಅನರಾದ.

** ಬಸವಣ್ಣನವರ ಅನುಯಾಯಿಗಳಿಗೆ ಲಿಂಗಾಯತರೆಂದು ಹೆಸರೇಕೆ ಬಂತು ?

* ಗೌತಮ ಬುದ್ಧನ ಅನುಯಾಯಿಗಳಿಗೆ ಬೌದ್ಧರೆಂದು, ಏಸುಕ್ರಿಸ್ತನ ಅನುಯಾಯಿಗಳಿಗೆ ಕ್ರೈಸ್ತರೆಂದು ಬಂದಂತೆ ಬಸವಲಿಂಗ (The divine)ನ ಅನುಯಾಯಿಗಳಿಗೆ ಲಿಂಗಾಯತರೆಂದು ಆಯಿತು. ಎರಡನೆದಾಗಿ ಇಷ್ಟಲಿಂಗವನ್ನು ಅವರು ಧರಿಸುವುದರಿಂದಲೂ ಬಂದಿತು.

....

ನ ಗೆ ಹ ನಿ

ಓರ್ವ ಹಳ್ಳಿಯವ ನಗರ ಸಂದರ್ಶನಕ್ಕೆಂದು ಬಂದು ಗಗನ ಚುಂಬಿ ಕಟ್ಟಡವೊಂದನ್ನು ಕುತೂಹಲದಿಂದ ದಿಟ್ಟಿಸುತ್ತಿದ್ದ. ಆಗ ಅದನ್ನು ಗಮನಿಸಿದ ಖಾಕಿ ಸಮವೇಶಧಾರಿ ವಾಚ್‌ಮನ್ ಅವನ ಸನಿಹಕ್ಕೆ ಬಂದು, ಗದರಿಸಿ ಕೇಳಿದ. "ಏನು ನೋಡ್ತಾ ಇದ್ದೀಯೋ ?" "ಈ ದೊಡ್ಡ ಬಿಲ್ಡಿಂಗನ್ನ ಕಣಪ್ಪ ..." ಎಂದ ಹಳ್ಳಿಗ "ಹಾಗೆ ನೋಡಾಕ್ಕೆ ದುಡ್ಡುಕೊಡಬೇಕು ಗೊತ್ತಿಲ್ವೆ. ಒಂದೊಂದು ಅಂತಸ್ತಿಗೆ ಒಂದು ರೂಪಾಯಿ ..." ಠೀವಿಯಿಂದ ಹೇಳಿದ.

"ಗೊತ್ತಿರಲಿಲ್ಲ ಕಣಪ್ಪ, ತಪ್ಪಾಯ್ತು. ಇಕೋ ಎರಡು ರೂಪಾಯಿ ನಾನು ಎರಡನೆ ಅಂತಸ್ತು ನೋಡ್ತಿದ್ದೆ...." ಎರಡು ರೂಪಾಯಿ ಪಡೆದು ವಾಚ್‌ಮನ್ ಹೊರಟುಹೋದ. ಹಳ್ಳಿಗ ತನಗೆ ಭೇಟಿಯಾದ ತನ್ನೂರವನಿಗೆ ಹೇಳಿದ. "ಇಂದು ಆಯಪ್ಪಗೆ ಚೆನ್ನಾಗಿ ಟೋಪಿ ಹಾಕ್ದೆ. ನಾನು ನೋಡ್ತಾ ಇದ್ದುದ್ದು ಎಂಟನೇ ಅಂತಸ್ತು. ಎರಡನೇದು ಅಂತಯೋಳಿ ಎಲ್ಡೆ ರೂಪಾಯಿ ಕೊಟ್ಬುಟ್ಟೆ.

* * * *

ಪ್ರಾರ್ಥನೆ ಮತ್ತು ಪ್ರಾರ್ಥನಾ ಕೂಟ

ಲೇಖಕ : ಎ. ರಾಜಗೋಪಾಲರಾವ್, ಬಿ.ಎ.,
ರಾಜ್ಯ ಸಹ ಸಂಘಟನಾಧಿಕಾರಿ (ಸ್ಕೌಟ್ಸ್)
ತುಮಕೂರು ಜಿಲ್ಲೆ.

"Prayer is the buy of the morning and the bolt of the evening"

—**Mahatma Gandhiji**
(Young India–1930)

ಸ್ಕೌಟಿಂಗ್ ಎಂಬುದು ಸೌಹಾರ್ದ ಸಾಧನೆಯ ಮಹತ್ತರವಾದ ಒಂದು ವಿಶ್ವ ಸಂಸ್ಥೆ. ಲಾರ್ಡ್ ಬೇಡನ್ ಪೊವೆಲ್ ದೈವಾಧೀನರಾಗಿದ್ದರೂ ಆತನು ಸ್ಥಾಪಿಸಿರುವ ಸ್ಕೌಟ್ ಚಳವಳಿಯು ಮಾತ್ರ ಚಿರಸ್ಥಾಯಿಯಾಗಿ ಮುಂದಿನ ಜನಾಂಗದವರಾದ ಇಂದಿನ ಬಾಲಕ ಬಾಲಕಿಯರ ಮೇಲೆ ಸತ್ಪರಿಣಾಮವನ್ನುಂಟುಮಾಡಿರುತ್ತದೆ.

ಜಾತಿ, ಮತ, ದೇಶ, ಭಾಷೆ ಈ ಭೇದಗಳಿಗೆ ಮನಗೊಡದೆ ಜಗತ್ತಿನವರೆಲ್ಲರೂ ಒಂದೇ ಸಂಸಾರಕ್ಕೆ ಸೇರಿದವರಂತೆ ವರ್ತಿಸಲು ಸಾಧ್ಯವಾಗುವ ಮಹತ್ತಾದ ಕಾರ್ಯವನ್ನು "ಪಾರ್ಥನಾ ಕೂಟ" (Scout's own) ನೆರವೇರಿಸುತ್ತದೆ- 1914ನೆಯ ಇಸವಿ ಏಪ್ರಿಲ್ ತಿಂಗಳಿನಲ್ಲಿ "ಸ್ಕೌಟ್ಸ್ ಓನ್" ಆಚರಣೆಗೆ ಬಂದಿತು, ವೇಷ ಭಾಷೆಗಳಲ್ಲಿಯೂ, ನಡೆನುಡಿಗಳಲ್ಲಿಯೂ, ಹೊರಗೆ ಒಬ್ಬೊಬ್ಬರಿಗೆ ಭೇದ ಕಂಡು ಬರುತ್ತಿದ್ದರೂ ನಿಜವಾಗಿ ಸೋದರ ಭಾವವೂ, ಸ್ನೇಹವೂ ಪ್ರಿತಿಯೊಬ್ಬನಲ್ಲಿ ಬೇರೂರಲು ಸಹಾಯವಾಯಿತು.

ಶಾಂತಿ ಧ್ವಜವನ್ನು ಮೇಲಕ್ಕೆತ್ತಿ ಹಿಡಿದು ಜಗತ್ತಿನ ಮೂಲೆ ಮೂಲೆಗೂ ಹೋಗಿ ಪರಸ್ಪರ ಪ್ರೇಮ, ಸೋದರ ಭಾವಗಳೆಂಬ ಜ್ಯೋತಿಯಿಂದ ದ್ವೇಷಾಸೂಯೆಗಳೆಂಬ ಅಂಧಕಾರವನ್ನು ನಾಶಮಾಡಿ, ಶಾಂತಿದೇವಿಯನ್ನು ಜಗತ್ತಿನ ಎಲ್ಲಾ ಕಡೆಯಲ್ಲಿಯೂ ಪ್ರತಿಷ್ಠೆ ಮಾಡುವುದೇ "ಪ್ರಾರ್ಥನಾ ಕೂಟ"ದ ಮುಖ್ಯ ಧ್ಯೇಯವಾಗಿದೆ. ಮಾನವನು ಸ್ವಾರ್ಥ, ದ್ವೇಷ, ಸಂಕುಚಿತ ಮನೋಭಾವ, ವೈಷಮ್ಯ ಮೊದಲಾದ ಅವಗುಣಗಳಿಂದ ತುಂಬಿಕೊಂಡಿರುವ ಮುಳ್ಳಿನಬಳ್ಳಿಯಿಂದ ಬಿಡುಗಡೆ ಹೊಂದಿ ಪರೋಪಕಾರ ಬುದ್ಧಿ, ಪ್ರೇಮ, ವಿಶಾಲಹೃದಯ, ಸಹಿಷ್ಣುತೆ ಎಂಬ ಸದ್ಗುಣ

ಗಳಿಂದ ಕೂಡಿರುವ ಹೂವಿನ ಬಳ್ಳಿಯನ್ನು ಸೇರಿ ಹೊಸ ಪ್ರಪಂಚದ ಸತ್ಪ್ರಜೆಯಾಗುವಂತೆ ಮಾಡುವುದೇ "ಪ್ರಾರ್ಥನಾ ಕೂಟದ" ಉದ್ದೇಶವಾಗಿರುತ್ತದೆ.

ವಚನಗ್ರಂಥ, ಮಹಾಭಾರತ, ರಾಮಾಯಣ, ಭಗವದ್ಗೀತೆ, ಬೈಬಲ್, ಖುರಾನ್ ಮೊದಲಾದ ಎಲ್ಲಾ ಮತಗ್ರಂಥಗಳ ಮುಖ್ಯ ತತ್ವಗಳು ಸ್ಕೌಟ್ ಸಂಸ್ಥೆಯ ನಿಯಮದ ಹತ್ತು ಪ್ರಧಾನ ವಿಷಯಗಳಲ್ಲಿ ಅಡಕವಾಗಿವೆ. ಜಗತ್ತಿನಲ್ಲಿ ದೇವಾಂಶ ಸಂಭೂತರೆನಿಸಿಕೊಂಡ ಮಹಾನುಭಾವ ಬಸವಣ್ಣನವರು, ಮಧ್ವಾಚಾರ್ಯರು, ಶಂಕರಾಚಾರ್ಯರು, ರಾಮಾನುಜಾಚಾರ್ಯರು, ಜೀಸಸ್ ಕ್ರೈಸ್ತ್, ಮಹಮ್ಮದ್ ಪೈಗಂಬರ್ ಮೊದಲಾದವರು ಪ್ರಚಾರ ಮಾಡಿದ ಮೂಲತತ್ವಗಳು ಇದರಲ್ಲಿ ಅಡಕವಾಗಿವೆ.

ರ್‍ಯಾಲಿ (ಮೇಳ)ಗಳಲ್ಲಿ ದೈವಭಕ್ತಿಗೆ ಎಡೆಯುಂಟೆ? ನಾನಾ ಮತಾನುಯಾಯಿಗಳು ಮಿಲನದಲ್ಲಿ ಉದಯಿಸುವ ನೈಜ ದೈವಭಕ್ತಿಯ ಸ್ವಭಾವ, ಸೌಂದರ್ಯ ಮತ್ತು ಫಲವನ್ನು ಸಂಪ್ರದಾಯದಿಂದ ಬಿಗಿದ ಮನೋಭಾವದಿಂದ ಅಳೆಯಲಾಗದು. ಪ್ರಕೃತಿ ಸೌಂದರ್ಯದ ಹಿನ್ನೆಲೆಯಲ್ಲಿ ಆದರ್ಶನಾಯಕರು ವಿಶಾಲಹೃದಯದಿಂದ ಸವಿಮಾತುಗಳಲ್ಲಿ ರಚಿಸುವ ಭವ್ಯ ಭವನಗಳಲ್ಲಿ ಬಾಲಕರ ಸರಳ ಮನಸ್ಸುಗಳು ಒಟ್ಟುಗೂಡಿ ಅಖಂಡ ವಸ್ತು ಒಂದನ್ನು ಮೌನವಾಗಿ ಪೂಜಿಸುವುವು. ಈ ಅಂಕುರವನ್ನು ಮುಳ್ಳುಗಳಿಗೆ ಸಿಕ್ಕದಂತೆ ರಕ್ಷಿಸಿ, ಬೆಳೆಸಿ, ಫಲಿಸುವಂತೆ ಮಾಡಿದರೆ ಪ್ರಪಂಚದಲ್ಲಿ ಶಾಂತಿಯು ಚಿರಸ್ಥಾಯಿಯಾಗುವುದು.

ಪೂಜ್ಯ ಮುಪ್ಪಿನ ಷಡಕ್ಷರಿ ಶಿವಯೋಗಿಗಳು ಸಮನ್ವಯ ದೃಷ್ಟಿಯ ಮಹತ್ವವನ್ನು ಈ ರೀತಿಯಾಗಿ ಸ್ಪಷ್ಟಪಡಿಸಿದ್ದಾರೆ.

ಅವರವರ ದರುಶನಕೆ
ಅವರವರ ವೇಷದಲಿ
ಅವರವರ ಭಾವಕ್ಕೆ
ಅವರವರ ಭಕ್ತಿಗೆ
ಅವರವರಿಗೆಲ್ಲ ದೇವ ನೀನೊಬ್ಬನೇ
ಹೋರಾಟವಿಕ್ಕಿಸಲು
ಬೇರಾದೆಯಲ್ಲದೆ
ಬೇರುಂಟೆ ಜಗದೊಳಗೆ ಎಲೆದೇವನೆ"

ನಾವು ಉನ್ನತ ಸಂಸ್ಕೃತಿಯ ವಿಶಾಲ ಹೃದಯದ ಮನೋಭಾವನೆಯನ್ನು ಕಂಡುಕೊಳ್ಳುವುದು ಸ್ವಾಭಾವಿಕವಾಗಿದೆ. ಇದನ್ನೇ ರಾಷ್ಟ್ರಪಿತ ಪೂಜ್ಯ ಮಹಾತ್ಮ

ಗಾಂಧೀಜಿಯವರು ೨೦ನೆಯ ಶತಮಾನದ ಜನಾಂಗಕ್ಕೆ "ಸರ್ವವೂ ನೀನೇ, ನೀನೆ ರಾಘವಾ,, ನೀನೆ ಶಂಕರ, ನೀನೇ ಅಲ್ಲಾ, ನೀನೇ ಭಗವಾನ್" ಎಂದು ಬೋಧಿಸಿದ್ದು ಇಂದು ರಾಷ್ಟ್ರದ ಗೀತೆಯಾಯಿತು. ಪೂಜ್ಯ ಮುಪ್ಪಿನ ಷಡಕ್ಷರಿ ಶಿವಯೋಗಿಗಳು ಇಂಥ ದಿವ್ಯ ಸಂದೇಶವನ್ನು ೪೦೦ ವರ್ಷಗಳ ಹಿಂದೆಯೇ ಉಪದೇಶಿಸಿರುವರು. ಪರಮಾತ್ಮನ ರೂಪು ಕನ್ನಡಿಯ ತೆರನಾಗಿದೆ. ಅವರವರ ಭಾವಕ್ಕೆ ಅವರವರ ರೂಪಕ್ಕೆ ಸರಿಯಾಗಿ ಕಾಣುವುದು.

"ಹರಿಯ ಭಕ್ತರು ಹರಿಯೆಂದು ಕರೆಯುವರು, ಹರನ ಭಕ್ತರು ಹರನೆಂದು ಕರೆಯುವರು. ಹೆಸರಿನಲ್ಲಿ ಭಿನ್ನತೆಯಿದ್ದರೂ ನೀನು ಮಾತ್ರ ಒಂದೇ (ಪರಮಾತ್ಮನೊಬ್ಬನೇ)

ಈ ಪರಮಾತ್ಮನು ಜನರೊಳಗೆ ಹೋರಾಟವಿಕ್ಕಿಸಲು ಬೇರಾಗಿ ಕಾಣುವನು" ಎಂದು ಸಮನ್ವಯ ದೃಷ್ಟಿಯ ಲಕ್ಷಣವನ್ನು ಉಪದೇಶಿಸಿರುವರು.

ಸಮನ್ವಯ ದೃಷ್ಟಿಯು ಸ್ವಾಕ್ಟ್ ಸಂಸ್ಥೆಯ ಜೀವಾಳ. ಆಧ್ಯಾತ್ಮಿಕ ತಳಹದಿ ಇಲ್ಲದಿದ್ದರೆ ನೈತಿಕ ಜೀವನವು ಕುಗ್ಗಿಹೋಗಿ ವೈಯಕ್ತಿಕ ಪತನದೊಂದಿಗೆ ರಾಷ್ಟ್ರದ ಅವನತಿಯೇ ಆಗಬಹುದು. ಕೊನೆಗೆ ಅಶಾಶ್ವತವಾದ ಧರ್ಮಾಧರ್ಮಗಳನ್ನು ತ್ಯಾಗಮಾಡಿ ಭಗವಂತನೊಬ್ಬನಿಗೆ ಶರಣುಹೋದರೆ ಅವನು ಸಮಸ್ತ ಬಂಧನಗಳಿಂದ ಬಿಡಿಸಿ ಮೋಕ್ಷವನ್ನು ಅನುಗ್ರಹಿಸುತ್ತಾನೆ.

To me God is truth and love, God is ethics and morality. God is fearlessness. God is the source of light and life yet He is above and beyond all these. God is conscience. He is even the atheism of the atheist for in his boundless love God permits the atheist to live.

Mahatma Gandhiji
(Young India–1925)

(೮ನೇ ಪುಟದಿಂದ)

ಎರಡೊಂದಾದ ಬಳಿಕ ಆಚಾರ ಹಿಂಗಿತ್ತು.
ಎರಡೊಂದಾದ ಬಳಿಕ ಅವಧಾನ ಹಿಂಗಿತ್ತು
ಎರಡೊಂದಾದ ಬಳಿಕ ಶಬ್ದಕ್ಕೆ ಇಂಬಿಲ್ಲ!
ರೂಹಿಸಲಿದೆಯುಂಟೇ ಗುಹೇಶ್ವರಾ? ★ (ಅ. ವ. ೧೩೮೨)

ಮಾತಿನ ಮಹತ್ವ

—ಸೋದರಿ ಕುಮುದ

"ಮಾತಿಗೆ ಮೊದಲಿಲ್ಲ, ಆಕಾಶಕ್ಕೆ ನಿಚ್ಚಣಿಕೆಯಿಲ್ಲ" ಎಂಬ ನಾಣ್ಣುಡಿಯನ್ನು ಸಾಮಾನ್ಯವಾಗಿ ಎಲ್ಲರೂ ಕೇಳಿರುವರು. ಆದರೆ ಮಾತಿನ ಮಹತ್ವ ಎಷ್ಟು ಜನಕ್ಕೆ ತಿಳಿದಿರುತ್ತೆ? ನಮ್ಮಲ್ಲುದಿಸುವ ಅನೇಕ ಭಾವನೆಗಳನ್ನು ಅಭಿವ್ಯಕ್ತಗೊಳಿಸಲು ಒಂದು ಸುಂದರ ಸಾಧನವಾಗಿರುವ ಈ ಮಾತು, ಯಾರಿಗೆ ಗೊತ್ತಿಲ್ಲ? ಯಾರಿಗೆ ಬರೋಲ್ಲ? ಒಂದು ಸಲ ನನ್ನ ಗೆಳತಿಗೆ ಮಾತೂಂದ್ರೆ ಏನೂಂತ ಕೇಳಿದ್ದಕ್ಕೆ, 'ಏನೇ ತಮಾಷೆ ಮಾಡ್ತಿದೀಯಾ, ಮಾತೂಂದ್ರೆ ಗೊತ್ತಿಲ್ವೇ ಅಂತ ಕೇಳ್ತಿ, ನಾನು-ನೀನು ಆಡ್ತಿರೋದೇ ಮಾತಲ್ವೇಂತ ಹೇಳಿದ್ಲು. ಹಾಗಾದ್ರೆ 'ಮಾತು' ಇಷ್ಟಕ್ಕೇ ಮೀಸಲಾಗಿದೆಯೆ?

ಬೆಳಿಗ್ಗೆಯಿಂದ ಸಂಜೆವರೆಗೂ ಬಾಯಿಗೆ ಬಿಡುವೇ ಕೊಡದಂತೆ ಮಾತಾಡ್ತಿರ್ತಾರೆ. ಆದರೆ, ಮಾತಿನ ಪರಿಣಾಮ ಏನಾಗಬಹುದೂಂತ ಯೋಚಿಸಿ ಮಾತಾಡುವವರು ಎಷ್ಟು ಜನ ಸಿಗ್ತಾರೆ? ವಿವಿಧ ಭಾವನೆಗಳಿಂದೊಡಗೂಡಿದ ಈ ವೈವಿಧ್ಯಮಯ ಬದುಕಿನಲ್ಲಿ 'ಮಾತು' ಹಲವಾರು ಹೃದಯಗಳನ್ನು ಒಂದುಗೂಡಿಸಬಹುದು. ಅದೇ ಮಾತು, ನೂರಾರು ಮನಗಳನ್ನು ಛಿದ್ರಗೊಳಿಸಲೂಬಹುದು. ಮಾತಾಡುವುದೂ ಒಂದು ಕಲೆ. ಕೆಲವರು ಮಾತನಾಡುವಾಗ, ಇನ್ನೂ ಸ್ವಲ್ಪ ಹೊತ್ತು ಮಾತನಾಡಬಾರದೆ? ಎನಿಸಿದರೆ ಮತ್ತೆ ಕೆಲವರು ಮಾತನಾಡಿದಾಗ, ಯಾವಾಗ ನಿಲ್ಲಿಸುವರಪ್ಪಾ, ಎನ್ನಿಸಿರುತ್ತೆ. ಕೆಲವರು ಮಾತಿನಲ್ಲಿ ವ್ಯಂಗ್ಯ-ಕುಹಕವೆಂಬ ಕಹಿಯನ್ನೇ ತುಂಬಿದ್ದರೆ, ಇನ್ನೂ ಕೆಲವರು ತಮ್ಮ ಮೃದುವಾದ-ಮಧುರವಾದ ಮಾತಿನಲ್ಲಿ ಸ್ನೇಹ-ಪ್ರೀತಿಯ ಸಿಹಿಯನ್ನೇ ತುಂಬಿರುತ್ತಾರೆ. ಗುರು-ಹಿರಿಯರೊಡನೆ, ಸಮವಯಸ್ಕರಲ್ಲಿ, ಕಿರಿಯರಲ್ಲಿ ಹೇಗೆ ನಡೆದುಕೊಳ್ಳಬೇಕು ಎಂಬುದನ್ನು ತಿಳಿದು ನಡೆಯುವುದು ಕಷ್ಟಸಾಧ್ಯ. ಆದ್ದರಿಂದ ಮಾತಿನ ಮಹತ್ವವರಿತು ಮಾತನಾಡುವುದು ಒಳ್ಳೆಯದಲ್ಲವೆ?

'ಮಾತು ಸಂಸ್ಕೃತಿಯ ಕನ್ನಡಿ'. ಒಬ್ಬ ವ್ಯಕ್ತಿ ಆಡುವ ಮಾತಿನಿಂದ ಅವನ ವ್ಯಕ್ತಿತ್ವವನ್ನು, ನಡೆದು ಬಂದ ಸುಸಂಸ್ಕೃತಿಯನ್ನು ಅಳೆಯಬಹುದು. ಮಾತು ಮನುಷ್ಯನ ವಿಶಿಷ್ಟವಾದ ಆಸ್ತಿ. ಮಾತು ಮನುಷ್ಯನಿಗೆ ಎಷ್ಟು ಅವಶ್ಯವೆಂದರೆ, ಅದು ಅವನ ಸ್ವಭಾವ ಎನ್ನುವಷ್ಟರ ಮಟ್ಟಿಗೆ ಬಾಳಿನಲ್ಲಿ ಬೆರೆತು ಹೋಗಿರುತ್ತದೆ. ನಾಗರಿಕತೆಯ ಮಟ್ಟವನ್ನು, ವ್ಯವಹಾರದ ಗೊತ್ತುಗುರಿಗಳನ್ನು, ರೀತಿ-ನೀತಿಗಳ ಬೆಲೆಯನ್ನು, ಸಾಮಾಜಿಕ ಮೌಲ್ಯಗಳನ್ನು ಗುರುತಿಸಿ, ಸಮರ್ಥಿಸುವ ಶಕ್ತಿ ಮಾತಿನಲ್ಲಿದೆ. ಎಲ್ಲಕ್ಕಿಂತಲೂ ಮಿಗಿಲಾಗಿ ಮಾನವನು ಈ ವೈಜ್ಞಾನಿಕ ಯುಗದಲ್ಲಿ ತನ್ನ

ಬುದ್ಧಿಶಕ್ತಿಯಿಂದ ಸಾಧಿಸುತ್ತಿರುವ ಪ್ರಗತಿಯನ್ನು ಅರಿಯುವ ಮತ್ತು ಇತರರಿಗೆ ಬರೆಯುವ ಶಕ್ತಿ ಮಾತಿನಲ್ಲಿದೆ.

ಮಾತನ್ನು ಹುಟ್ಟಿನಿಂದಲೇ ಯಾರೂ ಕಲಿತು ಬರುವುದಿಲ್ಲ. ಒಂದು ಮಗು ಮಾತು ಕಲಿಯೋದು ಮನೆಯಿಂದಲೇ. ಅದರಲ್ಲೂ ತಾಯಿಯೇ ಅಡಕ್ಕೆ ಮೊದಲ ಗುರು. ಮಕ್ಕಳು ಉಚ್ಚಾರದಲ್ಲಿ ತಪ್ಪುತ್ತಾ, ಉಗ್ಗು ಬಂದವನ ಹಾಗೆ ಮಾತನಾಡುತ್ತಾ, ನಿಲ್ಲಿಸಬಾರದೆಡೆಯಲ್ಲಿ ನಿಲ್ಲಿಸುತ್ತಾ, ಒತ್ತಕ್ಷರವನ್ನು ತೇಲಿಸುತ್ತಾ, ತಡವರಿಸುತ್ತಾ, ಎಡವುತ್ತಾ ಓದುವುದನ್ನೋ 'ಹ'ಗೆ 'ಅ', ಸಕಾರಕ್ಕೆ ಶಕಾರ ಬಳಸುವುದನ್ನು ಚಿಕ್ಕಂದಿನಿಂದಲೇ ತಾಯಿ ಸರಿಪಡಿಸಬಹುದು. ಉಚ್ಚಾರ ಶುದ್ಧವಾದರೆ, ವಿಚಾರ ಶುದ್ಧವಾಗುವುದು. ವಿಚಾರ ಶುದ್ಧಿಯಿಂದ ಆಚಾರವೂ ಶುದ್ಧವಾಗುವುದು. ಮಕ್ಕಳ ವ್ಯಕ್ತಿತ್ವ ವಿಕಾಸವಾಗುವ ವೇಳೆಯಲ್ಲಿ ಹಿರಿಯರ ಪಾತ್ರ ಮುಖ್ಯವಾದುದು. "ಮೂರು ವರ್ಷದಲ್ಲಿ ಕಲಿತ ಗುಣ ನೂರು ವರ್ಷದವರೆಗೂ" ಎನ್ನುವ ನುಡಿ ತುಂಬಾ ಸತ್ಯವಾದುದು. ಸಿಮೆಂಟು ಹಸಿಯಿದ್ದಾಗ, ಎಷ್ಟು ದಪ್ಪವಾದ ಕಬ್ಬಿಣವನ್ನು ಬೇಕಾದರೂ ತೂರಿಸಬಹುದು. ಅಂತೆಯೇ ಚಿಕ್ಕಮಕ್ಕಳ ಮನಸ್ಸಿಗೆ ಎಂಥ ಆದರ್ಶ ಕಲಿಸಿಕೊಟ್ಟರೂ ಆದರಂತೆ ಮುಂದೆ ಆಗುವರು. ನನ್ನ ಗೆಳತಿಯ ತಂಗಿ ನಾನವರ ಮನೆಗೆ ಹೋದಾಗಲೆಲ್ಲಾ, "ಹೇನ್ರೀ ಚೆನ್ನಾಗಿಧೀರಾ, ತುಂಬಾ ದಿವಸ ಆಯ್ತು ನಿಮ್ಮನ್ನ ನೋಡಿ" ಅಂತ ಹೇಳ್ತಾಳೆ. ಇದನ್ನು ಕೇಳಿದಾಗಲೆಲ್ಲಾ, ತಕ್ಷಣ ನಗು ಬಂದರೂ, ಆ ಹುಡುಗಿಯ ಭವಿಷ್ಯ ಜೀವನವನ್ನ ನೆನೆಸಿಕೊಂಡಾಗ, ಅನುಕಂಪ ಮೂಡದಿರದು.

ಮಾತನಾಡುವ ವಿಧಗಳು ಅನೇಕ. ಆಡುವ ಮಾತು ಹೀಗೆ-ಹಾಗೇ ಇದ್ದರೇನೆ ಸರಿಯಾದುದು ಎಂದು ಖಚಿತವಾಗಿ ಹೇಳಲು ಸಾಧ್ಯವಿಲ್ಲ. ಲೋಕದಲ್ಲಿ ಒಬ್ಬನ ಗುಣ ಇನ್ನೊಬ್ಬನಲ್ಲಿ ಹೇಗಿರಲು ಸಾಧ್ಯವಿಲ್ಲವೋ ಹಾಗೆಯೇ ಒಬ್ಬೊಬ್ಬರು ಬಳಸುವ ಭಾಷೆಯೂ ಭಿನ್ನವಾದುದು. ಒಂದು ಮಾತು ಒಬ್ಬನಿಗೆ ಪ್ರಿಯವಾದರೆ ಮತ್ತೊಬ್ಬನಿಗೆ ಅಪ್ರಿಯವಾಗುತ್ತದೆ. ಇದಕ್ಕೆಲ್ಲ ಕಾರಣ ಮಾತಿನ ಧ್ವನಿ. ಮತ್ತು ಅದರೊಡನೆ ಬೆರಸುವ ಚಾಕಚಕ್ಯತೆಯಿಂದ ಎಲ್ಲರನ್ನೂ ಮೋಡಿ ಮಾಡುವ ಶಕ್ತಿ ಬರುವುದು.

ಮಾತಿನಲ್ಲಿ ಮಂತ್ರ ಶಕ್ತಿಯಿದೆ, ಸಂಮೋಹನ ಶಕ್ತಿಯಿದೆ, ಪರವಶತೆಯಿದೆ, ಮೋಡಿಯಿದೆ, ಸಿಹಿಯಿದೆ, ಕಹಿಯಿದೆ, ಬದುಕಿದೆ, ಸಾವಿದೆ. ಏನಿಲ್ಲ? ಎಂಬುದಕ್ಕೆ ಉತ್ತರವೂ ಮಾತಿನಲ್ಲಿದೆ. ಆದುದರಿಂದ ಮಾತು ತೂಕಬದ್ಧವಾಗಿ, ಸಮಯೋಚಿತವಾಗಿ, ಪ್ರಮಾಣಬದ್ಧವಾಗಿ, ಸ್ಪಷ್ಟತೆಯಿಂದ ಕೂಡಿರಬೇಕು. ಮಾತು-ಮನಸ್ಸಿನ ಕಡೆಗೆ, ಮನಸ್ಸು-ಮಾತಿನ ಕಡೆಗೆ ಗಮನ ಹರಿಸುತ್ತಿರಬೇಕು. ಲೋಕ ವ್ಯವಹಾರ

ಗಳೆಲ್ಲವೂ ಮಾತಿನ ಮೇಲೆ ನಿಂತಿವೆ. ಮತ್ತೊಬ್ಬರ ಹೃದಯ ಕಮಲವನ್ನು ಮಾತಿನಿಂದ ಅರಳಿಸುವ ಸಾಮರ್ಥ್ಯವುಳ್ಳವನು-ಮಾತರಿತವನೆಂದೂ ಸ್ವಲ್ಪದರಲ್ಲೇ, ಹೆಚ್ಚಿನ ಮಾಹಿತಿಯನ್ನು ತಿಳಿಸಿಕೊಡುವ ಜಾಣನೆಂದು ಹೇಳುವರು. ನಾವು ಮಾತಾಡಿದರೆ, ಮನಸ್ಸು ತೆರೆಯಬೇಕು. ಇನ್ನೊಬ್ಬರ ಮನತೆರೆಯುವಂತಾಗಬೇಕಾದರೆ, ಬಳಸುವ ಶಬ್ದಗಳಲ್ಲಿ ಅಂತಹ ಶಕ್ತಿಯಿರಬೇಕು.

ವಿಶ್ವಗುರು ಬಸವಣ್ಣನವರು 'ಮಾತು ಹೇಗಿರಬೇಕು? ಹೇಗೆ ಆಡಬೇಕು?' ಎನ್ನುವುದನ್ನು ತುಂಬಾ ಮಾರ್ಮಿಕವಾಗಿ ಈ ಕೆಳಗಿನ ವಚನದಲ್ಲಿ ವರ್ಣಿಸಿದ್ದಾರೆ.

ನುಡಿದರೆ ಮುತ್ತಿನ ಹಾರದಂತಿರಬೇಕು
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು
ನುಡಿದರೆ ಸ್ಫಟಿಕದ ಸಲಾಕೆಯಂತಿರಬೇಕು
ನುಡಿದರೆ ಲಿಂಗ ಮೆಚ್ಚಿ ಅಹುದಹುದೆನಬೇಕು
ನುಡಿಯೊಳಗಾಗಿ ನಡೆಯದಿದ್ದರೆ
ಕೂಡಲ ಸಂಗಮದೇವನೆಂತೊಲಿವನಯ್ಯ.

ಈ ವಚನವನ್ನು ಒಮ್ಮೆ ಓದಿದಾಗ, ಎಷ್ಟು ಸರಳವಾಗಿ ಬರೆದಿರುವರಲ್ಲಾ ಎನ್ನಿಸಿದರೂ ಇದರಲ್ಲಿ ಅಡಗಿರುವ ಅರ್ಥದ ಆಳ ಅರಿಯಬೇಕಾದರೆ, ಕಷ್ಟ ಸಾಧ್ಯವೇ. ಬಸವಣ್ಣನವರ ಪ್ರಕಾರ, ನಮ್ಮ ಮಾತು ಮುತ್ತಿನಂತಷ್ಟೇ ಅಲ್ಲ, ಮುತ್ತಿನ ಹಾರದಂತೆ ಇರಬೇಕು. ಮುತ್ತು ಎಷ್ಟು ಪರಿಶುಭ್ರವಾಗಿರುವುದೋ ಹಾಗೆ, ಉಚ್ಚಾರಣೆ ಶುದ್ಧವಾಗಿ, ಸುಸಂಸ್ಕೃತಿಯನ್ನು ತೋರುವಂಥಾ ಕಾಂತಿಯಿಂದ ಹೊಳೆಯುತ್ತಿರಬೇಕು. ಅಲ್ಲದೇ, ಆ ಮಾತನ್ನು ಒಂದೇ ವಿಚಾರದ ತಂತಿಯಿಂದ ಬಂಧಿಸಿರಬೇಕು. ಒಂದು ಮಾತನಾಡುವಾಗ, ಬೇರೆ ವಿಷಯಗಳನ್ನು ಮಾತನಾಡಿ ವಿಷಯಾಂತರ ಮಾಡಬಾರದು ಎಂಬ ಎಚ್ಚರಿಕೆಯನ್ನು ಇದರಲ್ಲಿ ಕಾಣಬಹುದು. ಎರಡನೆಯದಾಗಿ ನಮ್ಮ ನುಡಿ ಮಾಣಿಕ್ಯದ ದೀಪ್ತಿಯಂತಿರಬೇಕು. ಮಾಣಿಕ್ಯವನ್ನು ಒಂದು ಕತ್ತಲಾದ ಕೋಣೆಯಲ್ಲಿಟ್ಟರೂ ಬೆಳಕನ್ನು ಕೊಟ್ಟು, ಅಲ್ಲಿರುವ ಅಂಧಕಾರವನ್ನು ಹೊಡೆದೋಡಿಸುವಂತೆ ನಮ್ಮ ಮಾತು, ಮತ್ತೊಬ್ಬರಲ್ಲಿರುವ ಅಜ್ಞಾನದ ಕತ್ತಲೆಯನ್ನು ಓಡಿಸುವಂಥಾ ಶಕ್ತಿಯನ್ನು ಪಡೆದಿರಬೇಕು. ಮೂರನೆಯದಾಗಿ ಸ್ಫಟಿಕದ ಸಲಾಕೆಯಂತಿರಬೇಕಂತೆ. ಸ್ಫಟಿಕದ ಶಿಲೆ ಪಾರದರ್ಶಕವಾಗಿರುವುದು. ನಾವಾಡುವ ಮಾತು ಹಾಗೆಯೇ ಇರಬೇಕು. ಒಳಗೊಂದು, ಹೊರಗೊಂದು ಮಾತಾಡದೆ, ಬಿಚ್ಚು ಹೃದಯದಿಂದ ಮಾತಾಡಬೇಕು. ಕೆಲವರು ಹೊರಗೆ ಅತಿ ವಿನಯದಿಂದ ವರ್ತಿಸಿದರೂ ಅಂತರಂಗದಲ್ಲಿ ದುರ್ಗುಣಿಗಳಾಗಿರುವರು. ಅದಕ್ಕಾಗಿಯೇ ಬಸವಣ್ಣನವರು ಸ್ಫಟಿಕದ ಸಲಾಕೆಯಂತಿರಬೇಕೆಂದು

ಹೇಳಿರುವರು. ನಾವು ಮಾತನಾಡಿದರೆ, ದೇವರೂ ಮೆಚ್ಚಿ 'ಅಹುದಹುದು' ಎನ್ನಬೇಕಂತೆ. ಅಂದರೆ, ಪರಮಾತ್ಮನ ಸ್ವರೂಪಿಗಳಾದ ಗುರುಗಳು, ಹಿರಿಯರು, ಎಲ್ಲರೂ-ನಾವು ಮಾತನಾಡಿದಾಗ ಮೆಚ್ಚಿ, ಹೊಗಳುವಂತಿರಬೇಕು. ಅಲ್ಲದೇ ಕೊನೆಯದಾಗಿ, ಬರೀ ಮಾತನಾಡಿದರೆ ಉಪಯೋಗವಿಲ್ಲ. ಆಡಿದ ಮಾತಿನಂತೆ ನಡೆಯಬೇಕು. ಆಗ ದೇವನನ್ನು ಮೆಚ್ಚಿಸಿ, ಅವನ ಕರುಣೆಯನ್ನು ಪಡೆಯಬಹುದೆಂದು ಹೇಳಿರುವರು.

ಬಸವಣ್ಣನವರಂತೆ ಮಾತಿನ ಮಹಿಮೆಯನ್ನು ಹಲವಾರು ಬಗೆಯಿಂದ ಕೊಂಡಾಡಿದವನೆಂದರೆ, ಸರ್ವಜ್ಞನು. 'ಕಿರಿದರಲ್ಲಿ ಪಿರಿದರ್ಥ'ವನ್ನು ಹುದುಗಿಸಿ ಹೇಳುವ ಜಾಣ್ಮೆ ಅವನದು. ಅವನ ವಚನಗಳೆಂದರೆ, ಮನಸ್ಸಿನ ಪೊರೆಗಳನ್ನು ಕಳಚಿ ಕಿತ್ತೆಸೆಯುವ, ಬುದ್ಧಿಗೆ ಸಾಣೆ ಹಿಡಿಯುವಂಥವು. ಮಾತಿನ ಬಗ್ಗೆ ಹೇಳುತ್ತಾ ನಾವಾಡುವ ಮಾತಿನ ಮೇಲೆ ನಮ್ಮ ಸಮಸ್ತ ಜೀವನವೂ ನಿಂತಿದೆ ಎಂದು ಸರ್ವಜ್ಞನು ಹೇಳುವನು.

ಮಾತಿನಿಂ ನಗೆ ನುಡಿಯು, ಮಾತಿನಿಂ ಹಗೆ ಕೊಲೆಯು
ಮಾತಿನಿಂ ಸರ್ವ ಸಂಪದವು। ಲೋಕಕ್ಕೆ
ಮಾತೆ ಮಾಣಿಕವು ಸರ್ವಜ್ಞ।

ನಗುವನ್ನು ಎಲ್ಲಿಂದಲಾದರೂ ಕೊಂಡು ತರಲು ಸಾಧ್ಯವೆ? ನಾವಿರುವ ಪರಿಸರದಲ್ಲಿ, ಮಾತಿನಿಂದ ಅದನ್ನು ಸೃಷ್ಟಿಮಾಡಿಕೊಳ್ಳಬೇಕು. ಅದಕ್ಕಾಗಿಯೇ ಸರ್ವಜ್ಞ 'ಮಾತಿನಿಂ ನಗೆ ನುಡಿಯು' ಎಂದಿದ್ದಾನೆ. ಮಾತಿನಿಂದ ನಗೆಯನ್ನು ಹುಟ್ಟಿಸುವಂತೆ, ದ್ವೇಷ-ಅಸೂಯೆಯನ್ನು ಹುಟ್ಟಿಸುವರು. ಅದೇ ಮಾತಿನಿಂದ ಕೊಲೆ ಮಾಡಲೂ ಪ್ರೇರೇಪಿಸಬಹುದು. ಹೇಗೆಂದರೆ, ಒಂದು ಚಾಕುವನ್ನು ಹಣ್ಣನ್ನು ಹೆಚ್ಚಲು ಉಪಯೋಗಿಸಬಹುದು, ಮತ್ತೊಬ್ಬರ ಹೊಟ್ಟೆ ಇರಿಯಲೂ ಉಪಯೋಗಿಸಬಹುದಾದಂತೆ, ಮಾತನಾಡುವವರ ಮನೋಭಾವನೆಯೇ ಇದಕ್ಕೆ ಕಾರಣವಾಗುವುದು. ಮಾತಿನ ಚಾತುರ್ಯ ಬಲ್ಲವರು ಇದೇ ಮಾತಿನಿಂದ ಸಕಲ ಸಂಪದವನ್ನೂ ಗಳಿಸಬಲ್ಲರು. ಇದಕ್ಕೆ ಉತ್ತಮ ಉದಾಹರಣೆಯನ್ನು ಕೊಡಬಹುದು.

ಮಹಾರಾಜ ಅಕ್ಬರನಿಗೆ ಒಮ್ಮೆ ಒಂದು ವಿಚಿತ್ರ ಕನಸು ಬಿತ್ತು. ಅದರಲ್ಲಿ ಆತ ತುಂಬಾ ವಯಸ್ಸಾದ ಮುದುಕನಂತಾಗಿದ್ದಾನೆ. ಆತನ ಹಲ್ಲುಗಳೆಲ್ಲಾ ಉದುರಿ, ಒಂದೇ ಒಂದು ಉಳಿದಂತೆ ಕನಸು ಕಂಡಾಗ, ರಾಜನಿಗೆ 'ಈ ಕನಸು ನನ್ನ ಭವಿಷ್ಯ ಜೀವನದ ಯಾವುದೋ ವಿಷಯವನ್ನು ಹೇಳುವಂತಿದೆ; ಅದನ್ನು ತಿಳಿಯಲೇಬೇಕು'

ಎನ್ನಿಸಿ, ತನ್ನ ಆಸ್ಥಾನದಲ್ಲಿನ ಮಹಾಪಂಡಿತರನ್ನೆಲ್ಲಾ ಕರೆಸಿ, ಅವರ ಮುಂದೆ ಕನಸನ್ನು ವಿವರಿಸಿ, 'ನನಗೆ ಹೀಗೇಕೆ ಕನಸು ಬಿತ್ತು?' ಎಂದು ಕೇಳಿದ. ಪಂಡಿತರುಗಳು ಯೋಚಿಸಿ, 'ರಾಜಾ, ನಿಮ್ಮ ಸಂಬಂಧಿಕರೆಲ್ಲರೂ ನಿಮ್ಮ ಕಣ್ಮುಂದೆ ಮರಣವನ್ನಪ್ಪುವರು' ಎಂದರು. ಇದನ್ನು ಕೇಳಿ ರಾಜನಿಗೆ ತುಂಬಾ ಸಿಟ್ಟು ಬಂದು, ಪಂಡಿತರನ್ನೆಲ್ಲಾ ಕಾರಾಗೃಹದಲ್ಲಿಡಲು ಆಜ್ಞೆಯನ್ನೂ ಮಾಡಿದ. ಆಗ, ಆಸ್ಥಾನಕ್ಕೆ ಬರುತ್ತಿದ್ದ ಬೀರ್‌ಬಲ್ಲನ ಮುಂದೆ ಪಂಡಿತರೆಲ್ಲರೂ ರಾಜನ ಕನಸು, ಅದಕ್ಕೆ ಇವರು ಕೊಟ್ಟ ಉತ್ತರ ಎಲ್ಲವನ್ನೂ ಹೇಳಿ 'ನಮ್ಮನ್ನು ಹೇಗಾದರೂ ಪಾರು ಮಾಡಯ್ಯಾ, ನಾವಂತೂ ಸುಳ್ಳು ಹೇಳಿಲ್ಲ' ಎಂದು ಕೇಳಿಕೊಂಡರು. ಚತುರನಾದ ಬೀರ್‌ಬಲ್ಲನು ನಾನು ಸರಿಯಾಗಿ ಉತ್ತರ ಕೊಡುವೆನೆಂದು, ರಾಜನ ಬಳಿಗೆ ಹೋದ. ರಾಜನು ಅವನನ್ನು ಕನಸಿನ ಅರ್ಥ ಹೇಳಲು ಕೇಳಿದಾಗ, ರಾಜರೆ, ನಿಮ್ಮ ಸಂಬಂಧಿಕರೆಲ್ಲರಿಗಿಂತ ಹೆಚ್ಚು ಕಾಲ ತಾವು ಬದುಕುವಿರೆಂದು ಹೇಳಿದ. ಇದನ್ನು ಕೇಳಿ ರಾಜನಿಗೆ ತುಂಬಾ ಸಂತೋಷವಾಗಿ, ಅವನಿಗೆ ಬಹುಮಾನವನ್ನು ಕೊಟ್ಟು ಸತ್ಕರಿಸಿದ. ಪಂಡಿತರು ಹೇಳಿದ ಸತ್ಯ ಸಂಗತಿಯನ್ನೇ ಈತ ಹೇಳಿದ್ದರೂ ಅವರಿಗೆ ದೊರೆತ ಶಿಕ್ಷೆ ದೊರೆಯದೆ, ಬಹುಮಾನ ಸಿಕ್ಕಿತು. ಏಕೆ ಅವನು ಮಾತಿನ ಚಮತ್ಕಾರದಿಂದ ಸಕಲ ಸಂಪದವನ್ನು ಗಳಿಸಿದನು. ಇಂಥ ಅನೇಕ ಉದಾಹರಣೆಗಳನ್ನು ಕಂಡೇ ಹಿರಿಯರು 'ಮಾತು ಬಲ್ಲವ ಮಾಣಿಕ್ಯ ತಂದ, ಮಾತು ಬರದವ ಜಗಳ ತಂದ' ಎಂಬ ಗಾದೆಯನ್ನು ಮಾಡಿರುವರು.

ಹೀಗೆ ಮಾತಿನ ಅರ್ಥವನ್ನು ತಿಳಿದು ಮಾತಾಡುವವನು, ಆಡಿದ ಮಾತಿನಂತೆ ನಡೆಯುವವನು 'ಜಗತ್ತನ್ನು ಕುಳಿತಲ್ಲೆ ಆಳುವ ಶಕ್ತಿ ಹೊಂದಿರುವನು'. ಮಾತಿನ ಬಳಕೆಯ ಸಾಧನ ನಾಲಿಗೆ. ಮಾತನಾಡಲು ಉಪಯೋಗವಾಗುವ ಈ ನಾಲಿಗೆ ಸದುಪಯೋಗವಾಗಬೇಕೇ ಹೊರತು ದುರುಪಯೋಗವಾಗಬಾರದು. ನಾಲಿಗೆಯನ್ನು ಒಳ್ಳೆಯ ಮಾತನಾಡಲು, ದೇವನ ಸ್ಮರಣೆ ಮಾಡಲು ಉಪಯೋಗಿಸಬೇಕಲ್ಲದೆ, ಇನ್ನೊಬ್ಬರ ನಿಂದೆ ಮಾಡುವುದಕ್ಕೆ, ಕೆಟ್ಟ ನುಡಿಗಳನ್ನಾಡುವುದಕ್ಕೆ ಬಳಸಬಾರದು.

....

ನ ಗೆ ಹ ನಿ

ಚುನಾವಣೆಯ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಸಂದರ್ಭ, ಪಕ್ಷದ ಕಛೇರಿ ಜನರಿಂದ ಗಿಜಿಗಿಜಿ ಎನ್ನುತ್ತಿತ್ತು. ಓರ್ವ ಬುದ್ಧಿವಂತ ಕಳೆಯುಳ್ಳ ವ್ಯಕ್ತಿ! ಆತುರದಿಂದ ಧಾವಿಸಿ ಅಧ್ಯಕ್ಷರೊಡನೆ ಬಿಸಿಬಿಸಿ ಮಾತು ಪ್ರಾರಂಭಿಸಿದ.

"ಏನ್ರಿ ಎಂಥವರನ್ನು ಅಭ್ಯರ್ಥಿಗಳನ್ನಾಗಿ ಆರಿಸುತ್ತಿದ್ದೀರಿ; ಸ್ವಂತ ಬುದ್ಧಿ ಇರುವವರು ಒಬ್ಬರೂ ಇಲ್ಲ. ನಾಳೆ ನೀವು ಅಧಿಕಾರಕ್ಕೆ ಬಂದು ಏನಾದರೂ ಕಾಯಿದೆ ಮಾಡಬೇಕಾದರೆ ಎಲ್ಲಾ ವಿಚಾರ ಮಾಡ್ದೆ ಕೈಯೆತ್ತುವವರೆ".

ಅಧ್ಯಕ್ಷರು ತಣ್ಣಗಿದ್ದೇ ನುಡಿದರು: "ನಮಗೆ ಅಂಥವರೆ ಬೇಕಾಗಿರೋದು."

ಗೀತಾಮೃತ

—ಸ್ವಾಮಿ ಶಂಕರಾನಂದ

ಸಂಜಯ ಉವಾಚ :

ಏವಮುಕ್ತೋ ಹೃಷೀಕೇಶೋ । ಗುಡಾಕೇಶೇನ ಭಾರತ ।
ಸೇನಯೋರುಭಯೋರ್ಮಧ್ಯೇ । ಸ್ಥಾಪಯಿತ್ವಾ ರಥೋತ್ತ
ಮಮ್ ॥೨೪॥

ಭೀಷ್ಮದ್ರೋಣಪ್ರಮುಖತಃ । ಸರ್ವೇಷಾಂ ಚ ಮಹೀಕ್ಷಿ ತಾಮ್ ।
ಉವಾಚ ಪಾರ್ಥ ಪಶ್ಯೈತಾನ್ । ಸಮವೇತಾನ್ ಕುರೂನಿತಿ ॥೨೫॥

ತಾತ್ಪರ್ಯ : ಸಂಜಯನು ಹೇಳಿದನು :

ಎಲೈ ಧೃತರಾಷ್ಟ್ರ, ಅರ್ಜುನನು ಈ ಪ್ರಕಾರ ಹೇಳಲು ಶ್ರೀ ಕೃಷ್ಣನು ಎರಡು ಸೇನೆಗಳ ನಡುವೆ, ಭೀಷ್ಮ, ದ್ರೋಣ ಮತ್ತು ಇತರ ರಾಜರ ಮುಂದೆ ತನ್ನ ಉತ್ತಮ ರಥವನ್ನು ನಿಲ್ಲಿಸಿ, 'ಎಲೈ ಅರ್ಜುನ, (ಯುದ್ಧಕ್ಕಾಗಿ) ಸೇರಿರುವ ಈ ಸಮಸ್ತ ಕೌರವರನ್ನು ನೋಡು' ಎಂದನು.

ಈ ಶ್ಲೋಕದಲ್ಲಿ ಶ್ರೀಕೃಷ್ಣನನ್ನು ಕುರಿತು ಹೃಷೀಕೇಶನೆಂತಲೂ, ಅರ್ಜುನನನ್ನು ಕುರಿತು ಗುಡಾಕೇಶನೆಂತಲೂ ಸಂಬೋಧಿಸಿದೆ.

ಈ ಪದಗಳಿಗೆ ಅನೇಕ ವ್ಯಾಖ್ಯಾನಗಳಲ್ಲಿ ಅನೇಕ ಅರ್ಥಗಳನ್ನು ಮಾಡಿರುವುದು ಕಂಡುಬರುತ್ತದೆ. ಹೃಷೀಕೇಶವೆಂಬ ಶಬ್ದಕ್ಕೆ ಈ ಮೊದಲೇ ಒಂದೆರಡು ಅರ್ಥಗಳನ್ನು ಸೂಚಿಸಿದೆ. "ಹೃಷೀಕ"ಗಳೆಂದರೆ ಇಂದ್ರಿಯಗಳು. ಅವುಗಳಿಗೆ ಹೃಷೀಕಗಳೆಂಬ ಹೆಸರೇಕೆ? ಅವು ಜೀವನಿಗೆ ಹರ್ಷವನ್ನುಂಟುಮಾಡುವುದರಿಂದ ಹೃಷೀಕಗಳೆಂದು ಹೆಸರು. ಆ ಇಂದ್ರಿಯಗಳಿಗೆ ತನ್ನ ಸತ್ತಾ ಸ್ಫೂರ್ತಿಯನ್ನು ಕೊಟ್ಟು ಪ್ರೇರೇಪಿಸುವವನಾದುದರಿಂದ ಶ್ರೀ ಕೃಷ್ಣನಿಗೆ ಹೃಷೀಕೇಶನೆಂದು ಹೆಸರು. ಮತ್ತೊಬ್ಬ ಮಹಾನುಭಾವನು ಇದಕ್ಕೆ ಮತ್ತೊಂದರ್ಥವನ್ನು ಸೂಚಿಸಿದ್ದಾನೆ. ಹೃಷೀ + ಕೇಶ ಅಂದರೆ ಹರ್ಷದಿಂದ ರೋಮಾಂಚಿತವಾದ ಕೇಶಗಳುಳ್ಳವನು. ಶ್ರೀ ಕೃಷ್ಣನು ಚಿದಾನಂದ ಘನ ಸ್ವರೂಪನು. ಅವನ ಆನಂದಕ್ಕೆ ಯಾವಾಗಲೂ ಕೊರತೆಯೇ ಇಲ್ಲ. ನಂದನವನದಂತಹ ರಮ್ಯವಾದ ಬೃಂದಾವನದಲ್ಲಿ ಮುರಳೀಗಾನವನ್ನು ಮಾಡಿದ ಆನಂದಮೂರ್ತಿ. ಇಷ್ಟೇ ಅಲ್ಲ, ಘೋರ ಭಯಂಕರವಾದ ಕುರುಕ್ಷೇತ್ರ

ಯುದ್ಧರಂಗದಲ್ಲಿಯೂ ಸಹ ಗೀತಾಗಾನವನ್ನು ಮಾಡಿದ ಮಹಾನುಭಾವ. ಅವನ
ಗಾನವು ಒಳ್ಳೆಯದರಲ್ಲಿಯೂ, ಕೆಟ್ಟದರಲ್ಲಿಯೂ, ಶುಭಾಶುಭಗಳಲ್ಲಿಯೂ
ಕಂಡು ಬರುತ್ತದೆ. ಧರ್ಮರಾಜನು ಅಗ್ರಪೂಜೆ ಮಾಡುವ ಸಮಯದಲ್ಲಿಯೂ,
ಶಿಶುಪಾಲನು ನಿಂದಾವರ್ಷವನ್ನು ಸುರಿಸುವ ಸಮಯದಲ್ಲಿಯೂ ಸಹ ಅವನ ಮುಖ
ದಲ್ಲಿ ಕಿರುನಗೆಯು ಕಂಡುಬರುತ್ತಿತ್ತು. ಅವನದು ಆರೋಪಗತವಾದ ಆನಂದವಲ್ಲ;
ಸ್ವರೂಪಗತವಾದ ಆನಂದ. ಟ್ಯಾಂಕಿನ ನೀರಿನಂತೆ ಹೊರಗಿನಿಂದ ತುಂಬಿರುವುದಲ್ಲ;
ಬಾವಿಯ ನೀರಿನಂತೆ ಒಳಗಿನಿಂದ ಹೊರಗೆ ಬರುವುದು. ಆದುದರಿಂದಲೇ ಅವನಿಗೆ
ಹೃಷೀಕೇಶನೆಂಬ ಹೆಸರು ಸಾರ್ಥಕವಾಗಿದೆ.

ಇನ್ನು ಅರ್ಜುನನ ವಿಷಯ—

ಗುಡಾಕೇಶನೆಂದರೆ ಅರ್ಜುನ. ಗುಡಾಕೇಶವೆಂಬ ಶಬ್ದಕ್ಕೂ ಅನೇಕ ಅರ್ಥಗಳಿವೆ.

೧. ಗುಡಾ ಎಂದರೆ ಗೂಢವಾದ, ದಟ್ಟವಾದ ಕೇಶಗಳುಳ್ಳವನು ಗುಡಾಕೇಶ.

೨. ಹೆಬ್ಬೆರಳು ಮತ್ತು ತರ್ಜನೀಬೆರಳು, ಎರಡೂ ಸೇರಿದಾಗ ಉಂಟಾಗುವ ಮುದ್ರೆಗೆ "ಗುಡಾ" ಎಂದು ಹೆಸರು. "ಅಂಗುಷ್ಠ ತರ್ಜನೀಯೋಗೋ ಗುಡಾನಾಮ್ನೀತು ಮುದ್ರಿಕಾ"–ಎಂದು ಹೇಳಿದೆ. ಗುಡಾ ಮುದ್ರೆಯಂತೆ ಕೇಶಗಳುಳ್ಳವನಾದುದರಿಂದ ಅವನು ಗುಡಾಕೇಶನು.

೩. ಗುಡಾ ಎಂದು ಶಿವನಿಗೆ ಹೆಸರು. ಗುಡಾ ಎಂದು ಹೇಳಿಸಿಕೊಳ್ಳುವ ಶಿವನನ್ನೇ ತನಗೆ ಉಪಾಸ್ಯ ದೇವತೆಯನ್ನಾಗಿ ಉಳ್ಳವನು ಗುಡಾಕೇಶ.

೪. ಗುಡಾಕ ಎಂದರೆ ನಿದ್ರೆ. ನಿದ್ರೆಯನ್ನು ತನ್ನ ವಶಮಾಡಿಕೊಂಡಿರುವವನು ಗುಡಾಕೇಶ. ಇಲ್ಲಿ ನಿದ್ರೆ ಎಂಬ ಪದವು ತಮೋ ಗುಣದ ಲಕ್ಷಣಗಳಾದ ಪ್ರಮಾದ, ಮೋಹ, ಆಲಸ್ಯ ಇವುಗಳಿಗೆ ಉಪಲಕ್ಷಣವಾಗಿರುತ್ತದೆ. ಸೋಮಾರಿತನ, ಮಂದತ್ವ, ಮರೆತು ಹೋಗುವಿಕೆ ಮೊದಲಾದ ಗುಣಗಳು ಅರ್ಜುನನ ಸಮೀಪಕ್ಕೇ ಬರಲಾರವು. ನಿದ್ರೆಯೂ ಸಹ ಅವನ ಆಜ್ಞಾನುವರ್ತಿಯಾಗಿಯೇ ಪ್ರವರ್ತಿಸುತ್ತದೆ. ಗುಡಾಕೇಶನೆಂದರೆ ನಿದ್ರೆ ಮೊದಲಾದ ತಮೋಗುಣವನ್ನು ಜಯಿಸಿದವನೆಂದು ಸಾರಾಂಶ.

ಸಂಜಯನು ಧೃತರಾಷ್ಟ್ರನನ್ನು ಕುರಿತು ಭಾರತ ಎಂದು ಸಂಬೋಧಿಸಿರುತ್ತಾನೆ. ಇದು "ಅಯ್ಯಾ! ನೀನು ಉತ್ತಮ ವಂಶದವನು. ನಿನ್ನ ಕುಲಮರ್ಯಾದೆಯನ್ನು ಕಾಪಾಡಿಕೊ" ಎಂದು ಎಚ್ಚರಿಸಿದಂತೆ ಸೂಚಿತವಾಗುತ್ತದೆ.

ನನ್ನ ರಥವನ್ನು ತೆಗೆದುಕೊಂಡು ಹೋಗಿ ಎರಡೂ ಸೇನೆಗಳ ಮಧ್ಯದಲ್ಲಿ ನಿಲ್ಲಿಸೆಂದು ಭಗವಂತನಿಗೆ ಅರ್ಜುನನ ಆದೇಶ. ಯುದ್ಧದಲ್ಲಿ ಮುಳುಗಿ ವೀರಾವೇಶ

ದಿಂದ ಚಿತ್ತಕ್ಕೆ ಅಮಲೇರಿರುವುದರಿಂದ ಅವನು ಭಗವಂತನ ಮೇಲೂ ಸಹ ತನ್ನ ಹುಕುಮನ್ನು ಚಲಾಯಿಸಿರುತ್ತಾನೆ. ಇದು ಅವನ ಅಂತಃಕರಣದಲ್ಲಿರುವ ದ್ವೇಷ ವೃತ್ತಿಯ ಪ್ರಭಾವ, ಅಂತಃಕರಣದಲ್ಲಿರುವ ವೃತ್ತಿಯನ್ನನುಸರಿಸಿಯೇ ಬಹಿರಂಗದ ವರ್ತನೆಗಳು ಪ್ರವರ್ತಿಸುತ್ತಿರುತ್ತವೆ. ದ್ವೇಷವೃತ್ತಿಗೆ ವಶನಾದ ಅವನ ಮುಖದಿಂದ "ನನ್ನ ರಥವನ್ನು ತೆಗೆದುಕೊಂಡು ಹೋಗಿ ಎರಡು ಸೇನೆಗಳ ಮಧ್ಯದಲ್ಲಿ ನಿಲ್ಲಿಸು" ಎಂಬ ಮಾತುಗಳು ಹೊರಟವು. "ಇವನು ನನಗೆ ಆಜ್ಞಾಪಿಸುವನೇ ?" ಎಂದು ಕೃಷ್ಣನಿಗೆ ಕೋಪವೂ ಬರಲಿಲ್ಲ, ಸಂತಾಪವೂ ಆಗಲಿಲ್ಲ. ತಾನು ಯಾರಾದರೇನು ? ಎಂಥವನಾದರೇನು ? ಈ ನಾಟಕ ರಂಗದಲ್ಲಿ ಸಾರಥಿ ಪಾತ್ರವನ್ನು ವಹಿಸಿದ್ದಾನೆ. ವೇಷಕ್ಕೆ ಅನುಗುಣವಾದ ಭಾಷೆ, ಪಾತ್ರಕ್ಕೆ ಅನುಗುಣವಾದ ಆಚರಣೆಯನ್ನು ಪ್ರದರ್ಶಿಸುವುದೇ ತನ್ನ ಧರ್ಮ. "ಹಾಗೇ ಆಗಲಿ" ಎನ್ನುತ್ತಾ ರಥಿಕನ ಆಜ್ಞಾನುಸಾರ ರಥವನ್ನು ನಡೆಸುವುದೇ ರಥಿಕನ ಕರ್ತವ್ಯ. ಆಚರಣೆಯ ಮೂಲಕ ಧರ್ಮವನ್ನು ನಿರೂಪಿಸುವುದು ಮಹಾತ್ಮರ ಲಕ್ಷಣ. ಧರ್ಮವು ಉಪನ್ಯಾಸ ವೇದಿಕೆಯ ಮೇಲೆ ಮಾತ್ರ ಶೋಭಿಸುತ್ತದೆಂದು ತಿಳಿಯಬಾರದು ; ಅದು ಶೋಭಿಸುವುದು ಧರ್ಮಾತ್ಮರ ಆಚರಣೆಯಲ್ಲಿ. ಅವರು ಆಡುವ ಮಾತಿಗಿಂತಲೂ ಆಚರಿಸುವ ಆಚರಣೆಗೆ ಹೆಚ್ಚು ಮಹತ್ವವನ್ನು ಕೊಡುತ್ತಾರೆ.

ಸರ್ವಜ್ಞನಾದ ಭಗವಂತನು ಅರ್ಜುನನ ರಥವನ್ನು ಎರಡು ಸೇನೆಗಳ ಮಧ್ಯದಲ್ಲಿ ತಂದು ನಿಲ್ಲಿಸಿದನು. ಬರೀ ರಥವನ್ನೇ ಅಲ್ಲ, ಅರ್ಜುನನ ಜೀವಿತವನ್ನೇ ಒಂದು ಸಂಧಿಯಲ್ಲಿ ತಂದಿಟ್ಟನು. ಅದೇ ಲೀಲಾ ಪುರುಷೋತ್ತಮನ ಮಹಾಲೀಲೆ. ಕಣ್ಣು ತೆರೆದು ನೋಡುತ್ತಲೇ ಎದುರಿಗೆ ಭೀಷ್ಮ ದ್ರೋಣರು ಕಾಣುವಂತೆ ರಥವನ್ನು ತಂದು ನಿಲ್ಲಿಸಿದನು. ಎಲ್ಲಿ ರಥವನ್ನು ನಿಲ್ಲಿಸಿದರೆ ಅರ್ಜುನನ ಅಂತಃಕರಣದಲ್ಲಿರುವ ದ್ವೇಷ ವೃತ್ತಿಯು ಅಡಗಿ, ಗೀತಾಬೋಧೆ ಮಾಡಲು ಅನುಕೂಲವಾಗುವುದೋ ಅಲ್ಲಿ ತಂದು ನಿಲ್ಲಿಸಿದನು.

ಆ ರಥವು ಮಹಾರಥ. ಉಳಿದ ರಥಗಳಿಗಿಂತಲೂ ವಿಲಕ್ಷಣವಾದದ್ದು. ಅದಕ್ಕೆ ಒಂದು ವೈಶಿಷ್ಟ್ಯವಿದೆ. ರಥಿಕನು ಫಾಲಾಕ್ಷನನ್ನು ಜಯಿಸಿದ ಮಹಾವೀರ. ಸಾರಥಿಯು "ಕೃಷ್ಣಸ್ತು ಭಗವಾನ್ ಸ್ವಯಂ." ಕುದುರೆಗಳಾದರೋ, ರಥವಾದರೋ ಅಗ್ನಿದತ್ತವಾದುವು. ಪತಾಕೆಯಲ್ಲಿ ಹನುಮಂತನಿದ್ದಾನೆ. ಇಷ್ಟು ಮಹತ್ತುಗಳು ಅದರಲ್ಲಿರುವುದರಿಂದ ಅದು ಮಹಾರಥ.

ಹೃಷೀಕೇಶನಾದ ಪರಮಾತ್ಮನು ಉಭಯ ಸೇನಾ ಮಧ್ಯದಲ್ಲಿ ರಥವನ್ನು ತಂದು ನಿಲ್ಲಿಸಿ "ಪಾರ್ಥ ! ಅದೋ ನೋಡು" ಎಂದು ಹೇಳುವುದರಲ್ಲಿ "ಅಯ್ಯಾ !

ನನ್ನ ಕರ್ತವ್ಯವನ್ನು ನಾನು ನೆರವೇರಿಸಿದ್ದೇನೆ ಇನ್ನು ನಿನ್ನ ಕರ್ತವ್ಯವನ್ನು ನೆರವೇರಿಸುವ ಭಾರವು ನಿನ್ನ ಮೇಲೆಯೇ ಇದೆ" ಎಂದು ಉದ್ಬೋಧಿಸಿದಂತೆ ತೋರುತ್ತದೆ.

ಸಂಬಂಧ : ಕಣ್ಣು ತೆರೆದು ಭೀಷ್ಮ, ದ್ರೋಣಾದಿಗಳನ್ನು ನೋಡುತ್ತಲೇ ಅರ್ಜುನನ ಅಂತಃಕರಣದಲ್ಲಿರುವ ದ್ವೇಷ ವೃತ್ತಿಯು ಅಡಗಿ ಮಮಕಾರ ವೃತ್ತಿಯು ಅಂದರೆ ಮೋಹವು ಉಂಟಾಗಿ, ಅದು ಏನು ಪ್ರಮಾದವನ್ನುಂಟುಮಾಡಿತೆಂಬುದು ಮುಂದಿನ ಶ್ಲೋಕಗಳಲ್ಲಿ ವರ್ಣಿತವಾಗುತ್ತದೆ.

ತತ್ರಾಪಶ್ಯತ್ ಸ್ಥಿತಾನ್ ಪಾರ್ಥಃ । ಪಿತೄನಥ ಪಿತಾಮಹಾನ್ ।
ಆಚಾರ್ಯಾನ್ಮಾತುಲಾನ್ಭ್ರಾತೄನ್ ಪುತ್ರಾನ್ಪೌತ್ರಾನ್ಸಖೀಂ ಸ್ತಥಾ ॥
ಶ್ವಶುರಾನ್ಸುಹೃದಶ್ಚೈವ । ಸೇನಯೋರುಭಯೋರಪಿ ।

ತಾತ್ಪರ್ಯ : ಅನಂತರ ಅರ್ಜುನನು ಅಲ್ಲಿ ಎರಡು ಸೈನ್ಯಗಳಲ್ಲಿಯೂ ಇದ್ದ ತಂದೆಯರನ್ನೂ (ಚಿಕ್ಕಪ್ಪ ದೊಡ್ಡಪ್ಪರು), ತಾತಂದಿರನ್ನೂ, ಗುರುಗಳನ್ನೂ, ಸೋದರ ಮಾವಂದಿರನ್ನೂ, ಅಣ್ಣತಮ್ಮಂದಿರನ್ನೂ, ಮಕ್ಕಳನ್ನೂ, ಮೊಮ್ಮಕ್ಕಳನ್ನೂ, ಸಮವಯಸ್ಕರಾದ ಮಿತ್ರರನ್ನೂ, ಮಾವಂದಿರನ್ನೂ ಮತ್ತು ಸ್ನೇಹಿತರನ್ನೂ ನೋಡಿದನು.

ಪುನಃ ಸಂಜಯನು ಧೃತರಾಷ್ಟ್ರನನ್ನು ಕುರಿತು, ಯುದ್ಧಾರಂಭಕ್ಕಾಗಿ ಸೇನೆಯನ್ನು ನೋಡೆಂದು ಶ್ರೀ ಕೃಷ್ಣ ಭಗವಂತನು ಅರ್ಜುನನಿಗೆ ಆಜ್ಞಾಪಿಸಲು, ಅರ್ಜುನನು ಎರಡೂ ಸೇನೆಯ ಯೋಧರನ್ನು ನೋಡಿದನು. ಅವರ ಸೇನೆಯಲ್ಲಿ ಭೂರಿಶ್ರವ ಮೊದಲಾದ ತಂದೆಯ ಸಂಬಂಧಿಗಳನ್ನೂ ಅಂದರೆ ಚಿಕ್ಕಪ್ಪ ದೊಡ್ಡಪ್ಪಂದಿರನ್ನೂ ಮತ್ತು ಭೀಷ್ಮ, ಸೋಮದತ್ತ ಮೊದಲಾದ ಪಿತಾಮಹರನ್ನೂ, ಇನ್ನು ದ್ರೋಣ, ಕೃಪ ಮೊದಲಾದ ಆಚಾರ್ಯರನ್ನೂ, ನಂತರ ಶಲ್ಯ, ಶಕುನಿ ಮೊದಲಾದ ಮಾತುಲರನ್ನೂ, ಇವರಲ್ಲದೆ ದುರ್ಯೋಧನಾದಿ ಭ್ರಾತೃಗಳನ್ನೂ, ಲಕ್ಷ್ಮಣ ಮೊದಲಾದ ಪುತ್ರರನ್ನೂ, ಅವರುಗಳ ಪುತ್ರರಾದ ಪೌತ್ರರನ್ನೂ, ತನಗೆ ಸಮಾನ ವಯಸ್ಕರಾದ ಅಶ್ವತ್ಥಾಮ, ಜಯದ್ರಥ ಮೊದಲಾದ ಸಖರನ್ನೂ, ಕೃತವರ್ಮ, ಭಗದತ್ತ ಮೊದಲಾದ ಸುಹೃದಯರನ್ನೂ ನೋಡಿದನು.

ಇಲ್ಲಿ "ಸುಹೃದಃ" ಎಂಬ ಶಬ್ದದಿಂದ ಇನ್ನೂ ಎಷ್ಟೋ ಜನ ಮಾತಾಮಹಾದಿಗಳನ್ನು ಗ್ರಹಿಸಬೇಕು. ಈ ರೀತಿಯಾಗಿ ಅರ್ಜುನನು ಪರಸೇನೆಯಲ್ಲಿ ತನ್ನ ಪಿತೃವ್ಯಾದಿ ಸಂಬಂಧಿಗಳನ್ನು ನೋಡಿದಂತೆ ತನ್ನ ಸೇನೆಯಲ್ಲಿಯೂ ಸಹ ಹಾಗೆಯೇ ಸಂಬಂಧಿಗಳನ್ನು ನೋಡಿದನು.

ತಂದೆಯ ಅಣ್ಣನಿಗೆ ಪಿತೃವ್ಯನೆಂದೂ, ತಾಯಿಯ ಅಣ್ಣನಿಗೆ ಮಾತುಲನೆಂದೂ, ತಾಯಿಯ ತಂದೆಗೆ ಮಾತಾಮಹನೆಂದೂ ಹೆಸರು.

ಸಂಬಂಧ : ಈ ಪ್ರಕಾರ ಸಂಬಂಧಿಗಳೆಲ್ಲರ ದರ್ಶನವಾದ ಮೇಲೆ "ಇವರ ಹಿಂಸೆಯು ಮಹಾ ಅಧರ್ಮರೂಪವಾದದ್ದು" ಎಂಬ ಮೋಹರೂಪ ವಿಪರೀತ ಬುದ್ಧಿಯಿಂದ ಯಾರ ವಿವೇಕವು ನಷ್ಟವಾಗಿರುವುದೋ ಮತ್ತು ಯುದ್ಧವು ಧರ್ಮರೂಪವೆಂಬುದು ಶಾಸ್ತ್ರದ ನಿರ್ಣಯವಾದರೂ ಇಂಥಾ ಯಥಾರ್ಥ ಜ್ಞಾನಕ್ಕೆ ಪ್ರತಿಬಂಧಕವನ್ನುಂಟುಮಾಡುವ ಮತ್ತು ಮಮತಾರೂಪ ಬುದ್ಧಿಯು ಯಾವ ಶೋಕ ಮೋಹವೆಂಬ ಚಿತ್ತದ ವಿಕಲತೆಗೆ ಕಾರಣವಾಗಿರುವುದೋ, ಅದರಿಂದಲೇ ಯಾರ ವಿವೇಕವು ನಷ್ಟವಾಗಿರುವುದೋ ಇಂಥಾ ಅರ್ಜುನನಿಗೆ ಪ್ರಥಮದಲ್ಲಿ ಆರಂಭಿಸಲ್ಪಟ್ಟ ಯುದ್ಧವೆಂಬ ಸ್ವಧರ್ಮದಿಂದ ಉಪರಮಿಸುವ ಮಹಾ ಅನರ್ಥಕಾರಿಯಾದ ಇಚ್ಛೆಯು ಉಂಟಾಯಿತೆಂಬ ವಿಷಯವು ಮುಂದಿನ ಶ್ಲೋಕದಲ್ಲಿ ಪ್ರತಿಪಾದಿಸಲ್ಪಡುತ್ತದೆ.

ತಾನ್ಸಮೀಕ್ಷ್ಯ ಸ ಕೌಂತೇಯಃ । ಸರ್ವಾನ್ಬಂಧೂನವಸ್ಥಿತಾನ್ ।
ಕೃಪಯಾ ಪರಯಾವಿಷ್ಟೋ । ವಿಷೀದನ್ನಿದಮಬ್ರವೀತ್ ॥ ೨೭ ॥

ತಾತ್ಪರ್ಯ : ಅರ್ಜುನನು ಅಲ್ಲಿ ಯುದ್ಧ ಸನ್ನದ್ಧರಾಗಿದ್ದ ಆ ಸಮಸ್ತ ಬಂಧುಗಳನ್ನು ಚೆನ್ನಾಗಿ ನೋಡಿ ಅತಿಶಯ ದಯೆಯಿಂದ ತುಂಬಿ ವಿಷಣ್ಣನಾಗಿ ಈ ಮಾತನ್ನು ಹೇಳಿದನು.

ಪ್ರಶ್ನೆ : ಇಲ್ಲಿ ಕೃಪೆಗೆ 'ಪರಯಾ' ಎಂಬ ವಿಶೇಷಣವು ಬಂದ ಕಾರಣವೇನು ?

ಉತ್ತರ : ಇದಕ್ಕೆ ಎರಡು ಕಾರಣ ಕಂಡು ಬರುತ್ತವೆ. ಒಂದು ಅರ್ಜುನನಲ್ಲಿ ಕೃಪೆಯು ಸ್ವತಃಸಿದ್ಧವಾಗಿದ್ದಿತೆಂದು ತಿಳಿಯಬೇಕು.

ಎರಡು—"ಕೃಪಯಾಪರಯಾ ವಿಷ್ಟಃ" ಎಂಬ ವಾಕ್ಯದಲ್ಲಿ, "ಕೃಪಯಾ, ಅಪರಯಾ,ಅವಿಷ್ಟಃ" ಎಂದು ಪದಚ್ಛೇದವನ್ನು ಮಾಡಿದರೆ, ತನ್ನ ಸೈನ್ಯದಲ್ಲಿ ಅರ್ಜುನನಿಗೆ ಕೃಪೆಯು ಮೊದಲೇ ಉಂಟಾಗಿದ್ದಿತು, ಈಗ ಕೌರವರ ಸೇನೆಯಲ್ಲಿಯೂ ಅವನಿಗೆ ಅಪರಾ ಎಂಬ ಎರಡನೇ ಕೃಪೆ ಉಂಟಾಯಿತು ಎಂದು ಅರ್ಥ ಮಾಡಬೇಕು. ಇನ್ನು ಅರ್ಜುನನ ಮೋಹ ಬುದ್ಧಿಯನ್ನು ನೋಡೋಣ. ಮೋಹವು ಸರ್ವ ಪಾಪಕ್ಕೂ ಮೂಲ. ಮೋಹವು ಅಜ್ಞಾನದ ಮೊದಲನೇ ಅಂಕುರ. ಮೋಹಬದ್ಧನಾದ ಮನುಷ್ಯನು ಧರ್ಮವನ್ನು ಅಧರ್ಮವನ್ನಾಗಿಯೂ, ಅಧರ್ಮವನ್ನು ಧರ್ಮವನ್ನಾ

ಗಿಯೂ ಭಾವಿಸುವುದು ಸಹಜ. ಮೋಹವೆಂದರೆ ವಿಪರೀತ ಬುದ್ಧಿ ಎಂದು ಹೇಳಬಹುದು. ಒಂದು ರೀತಿಯಿಂದ ನೋಡಿದರೆ ಮೋಹ ಕ್ಷಯವೇ ಮೋಕ್ಷವೆಂದು ಸ್ಪಷ್ಟವಾಗುತ್ತದೆ. "ಮೋ-ಕ್ಷ" ಎಂಬ ಎರಡು ಅಕ್ಷರಗಳಲ್ಲಿ ಮೋ ಎಂದರೆ ಮೋಹ, ಕ್ಷ ಎಂದರೆ ಕ್ಷಯ. ಆದುದರಿಂದ ಮೋಕ್ಷವೆಂದರೆ ಮೋಹಕ್ಷಯವೆಂದರ್ಥ. ವಿಪರೀತ ದರ್ಶನಕ್ಕೆ ಮೋಹವೆಂದು ಹೇಳಿದರೆ ಸಮ್ಯಕ್ ದರ್ಶನಕ್ಕೆ ಮೋಕ್ಷವೆಂದು ಹೇಳಬಹುದು.

ಭಾಗವತದಲ್ಲಿ ಬಂದಿರುವ ಗಜೇಂದ್ರ ಮೋಕ್ಷವೆಂಬ ಕಥೆಯಲ್ಲಿರುವ ಗ್ರಾಹವೇ ಮೋಹ. ಗಜರಾಜನೊಬ್ಬನನ್ನೇ ಅಲ್ಲ, ಪ್ರತಿ ಜೀವನನ್ನೂ ಈ ಮೊಸಳೆಯು ಕಚ್ಚಿಕೊಂಡಿದೆ. ಸಮ್ಯಕ್ ದರ್ಶನವನ್ನು ಬಿಟ್ಟರೆ ಆ ಮೋಹ ನಾಶಕ್ಕೆ ಬೇರೆ ದಾರಿಯೇ ಇಲ್ಲ. ಈ ಸಮ್ಯಕ್ ದರ್ಶನವನ್ನೇ ಭಾಗವತ ಭಾಷೆಯಲ್ಲಿ ಸುದರ್ಶನವೆಂದು ಹೇಳಿದೆ. ಆ ಸುದರ್ಶನ ಪ್ರಭಾವದಿಂದ ಗ್ರಾಹಬದ್ಧನಾದ ಗಜರಾಜನೇ ಮಾತ್ರವಲ್ಲ, ಮೋಹ ಬದ್ಧರಾದ ಪ್ರತಿ ಜೀವರೂ ಮೋಕ್ಷವನ್ನು ಪಡೆಯಬಹುದು.

ಎರಡೂ ಸೇನೆಗಳಲ್ಲಿರುವ ತನ್ನ ಸಂಬಂಧಿಗಳನ್ನು ನೋಡುತ್ತಲೇ, ಅಲ್ಲಿಯವರೆಗೆ ಅರ್ಜುನನ ಅಂತಃಕರಣದಲ್ಲಿ ಎದ್ದುಕೊಂಡಿದ್ದ ದ್ವೇಷ ವೃತ್ತಿಯು ತೊಲಗಿ, ಮಮಕಾರ ವೃತ್ತಿಯು ಎದ್ದುಕೊಂಡಿತು. ಆ ಮಮಕಾರ ವೃತ್ತಿಯ ಪ್ರಭಾವದಿಂದ ಅರ್ಜುನನು ಅಪಾರವಾದ ಸ್ವಜನ ವ್ಯಾಮೋಹಕ್ಕೆ ಗುರಿಯಾದನು. ಸ್ವಧರ್ಮವಾದ ಯುದ್ಧವನ್ನು ಅಧರ್ಮವೆಂದು ಭಾವಿಸತೊಡಗಿದನು. ಕ್ಷತ್ರಿಯ ಜಾತಿಗೆ ಅಗಮ್ಯವಾದ ಭಿಕ್ಷಾವೃತ್ತಿಯನ್ನು ಧರ್ಮವೆಂದು ಭಾವಿಸತೊಡಗಿದನು. ಸರ್ವಜ್ಞನಾದ ಭಗವಂತನ ಮಾತುಗಳನ್ನು ಅಲ್ಲಗಳೆದು ತಾನೇ ಬುದ್ಧಿವಂತನೆಂದು ಭಾವಿಸಿ ಪ್ರಜ್ಞಾವಾದಗಳನ್ನು ಆರಂಭಿಸಿದನು. ಇದೆಲ್ಲವೂ ಅವನನ್ನು ಆವರಿಸಿದ ಮೋಹ ಪಿಶಾಚಿಯ ಪ್ರಭಾವ.

ಹೇಗಾದರೂ ಆಗಲಿ. ಅರ್ಜುನನಿಗೆ ಉಂಟಾದ ಈ ಮೋಹವೇ ಭಗವದ್ಗೀತೆಯ ಆವಿರ್ಭಾವಕ್ಕೆ ಕಾರಣವಾಯಿತು. ಆದುದರಿಂದ ಈ ಮೋಹವೇ ಲೋಕೋಪಕಾರಕ್ಕೆ ಸಾಧನವಾಯಿತೆಂದು ಗ್ರಹಿಸಬೇಕು.

ಸಂಬಂಧ : ಮುಂದಿನ ಶ್ಲೋಕದಲ್ಲಿ ಅರ್ಜುನನು ತನಗುಂಟಾದ ಮೋಹದ ಪರಿಣಾಮವನ್ನು ವರ್ಣಿಸುತ್ತಾನೆ.

ಅರ್ಜುನ ಉವಾಚ—
ದೃಷ್ಟ್ವೇಮಂ ಸ್ವಜನಂ ಕೃಷ್ಣ । ಯುಯುತ್ಸಂ ಸಮುಪಸ್ಥಿತಮ್ ॥
ಸೀದನ್ತಿ ಮಮ ಗಾತ್ರಾಣಿ । ಮುಖಂ ಚ ಪರಿಶುಷ್ಯತಿ ।

ತಾತ್ಪರ್ಯ : ಎಲೈ ಕೃಷ್ಣ, ಯುದ್ಧಾಭಿಲಾಷೆಯಿಂದ (ಸಮವೇತರಾಗಿ) ನಿಂತಿರುವ ಈ ಸ್ವಜನರನ್ನು ನೋಡಿ ನನ್ನ ಅವಯವಗಳು ಕುಂದುತ್ತಿವೆ ಮತ್ತು ಮುಖವೂ ಬಾಡುತ್ತಿದೆ.

ವೇಪಥುಶ್ಚ ಶರೀರೇ ಮೇ । ರೋಮಹರ್ಷಶ್ಚ ಜಾಯತೇ
ಗಾಂಡೀವಂ ಸ್ರಂಸತೇ ಹಸ್ತಾ-ತ್ತ್ವಕ್ಚೈವ ಪರಿದಹ್ಯತೇ । ||೨೯||

ತಾತ್ಪರ್ಯ : ನನ್ನ ಶರೀರದಲ್ಲಿ ಕಂಪನವೂ ರೋಮಾಂಚವೂ ಉಂಟಾಗುತ್ತಿವೆ; ಕೈಯಿಂದ ಗಾಂಡೀವವು ಜಾರಿ ಬೀಳುತ್ತಿದೆ ಮತ್ತು ಚರ್ಮವೂ ಸಹ ಬಹಳ ಸುಡುತ್ತಿದೆ.

ನ ಚ ಶಕ್ನೋಮ್ಯವಸ್ಥಾತುಂ । ಭ್ರಮತೀವ ಚ ಮೇ ಮನಃ ||೩೦||
ನಿಮಿತ್ತಾನಿ ಚ ಪಶ್ಯಾಮಿ । ವಿಪರೀತಾನಿ ಕೇಶವ ।
ನ ಚ ಶ್ರೇಯೋಽನುಪಶ್ಯಾಮಿ ಹತ್ವಾ ಸ್ವಜನಮಾಹವೇ ||೩೧||

ತಾತ್ಪರ್ಯ : ಎಲೈ ಕೇಶವ, ನನಗೆ ನಿಲ್ಲುವುದಕ್ಕೂ ಆಗುತ್ತಿಲ್ಲ; ಮತ್ತು ನನ್ನ ಮನಸ್ಸು (ಚಾಂಚಲ್ಯದಿಂದ) ಸುತ್ತುತ್ತಿರುವ ಹಾಗಿದೆ; ಮತ್ತು ಅಮಂಗಳ ಸೂಚಕ ಶಕುನಗಳನ್ನು ನೋಡುತ್ತಿದ್ದೇನೆ.

ಯುದ್ಧದಲ್ಲಿ ಸ್ವಜನರನ್ನು ಕೊಂದರೆ ಯಾವ ಶ್ರೇಯಸ್ಸನ್ನೂ ನಾನು ನೋಡಲಾರೆನು.

ವಿವರಣೆ : ಸ್ವಜನ ವ್ಯಾಮೋಹಕ್ಕೆ ಗುರಿಯಾದ ಅರ್ಜುನನು ಈ ವಿಧವಾಗಿ ತನ್ನ ಶೋಕವನ್ನು ಪ್ರಕಟ ಮಾಡಿದನು. ಈ ಅಧ್ಯಾಯದಲ್ಲಿಯ ೨೮ನೇ ಶ್ಲೋಕದ ಉತ್ತರಾರ್ಧದಿಂದ ೪೬ನೇ ಶ್ಲೋಕದವರೆಗಿರುವ ಹದಿನೆಂಟೂವರೆ ಶ್ಲೋಕಗಳು ಅರ್ಜುನನ ಶೋಕವನ್ನು ಪ್ರದರ್ಶಿಸುತ್ತವೆ. ಅರ್ಜುನನು ೨೮ನೇ ಶ್ಲೋಕದಲ್ಲಿಯೂ, ೩೧ನೇ ಶ್ಲೋಕದಲ್ಲಿಯೂ "ಸ್ವಜನ" ಶಬ್ದವನ್ನು ಉಪಯೋಗಿಸಿದ್ದಾನೆ. ಧಾರ್ತರಾಷ್ಟ್ರಾದಿಗಳು ಅಂದರೆ ದುರ್ಯೋಧನಾದಿಗಳು ಸ್ವಜನರಾದರೂ ಸುಜನರಲ್ಲ. ಧರ್ಮೋದ್ಧಾರದ ವಿಶಾಲವಾದ ವಿಶ್ವ ಸೇವೆಯ ವೇದಿಕೆಯ ಮೇಲೆ ನಿಂತ ಅರ್ಜುನನು ಈ ಮಾತುಗಳನ್ನು ಆಡುವುದು ಶೋಭಾಯಮಾನವಲ್ಲ. ಆದುದರಿಂದಲೇ ಭಗವಂತನು ಇದು ನಿನ್ನ ಹೇಡಿತನವೆಂತಲೂ, ಹೃದಯ ದೌರ್ಬಲ್ಯವೆಂತಲೂ, ಪ್ರಜ್ಞಾವಾದಗಳೆಂತಲೂ ಅಂದುಬಿಟ್ಟನು.

ಅರ್ಜುನನು ಹೇಳುವುದೇನು ? "ಕೃಷ್ಣಾ! ಯುದ್ಧ ಸನ್ನದ್ಧರಾಗಿ ನಿಂತಿರುವ ಸ್ವಜನರನ್ನು ನೋಡಿ ನನ್ನ ಇಂದ್ರಿಯಗಳು ತಪಿಸಹತ್ತಿವೆ. ಬಾಯಿ ಒಣಗಲಾರಂಭಿಸಿದೆ. ಶರೀರದಲ್ಲಿ ನಡುಗುಂಟಾಗಿದೆ. ಮೈತುಂಬಾ ರೋಮಾಂಚನಗಳಾದವು, ಗಾಂಡೀವವು ಪರವಶವಾಗಿ ನನ್ನ ಕೈಯಿಂದ ಜಾರಿಬೀಳುತ್ತದೆ. ಶರೀರವೆಲ್ಲಾ ಉರಿಯಲಾರಂಭಿಸಿತು. ನಿಲ್ಲಲೂ ಸಹ ಶಕ್ತಿ ಇಲ್ಲದಂತಾಗಿದೆ. ಮನಸ್ಸು ಅನೇಕ ವಿಧವಾಗಿ ಪರಿಭ್ರಮಿಸತೊಡಗಿದೆ. ಕೇಶವಾ ! ವಿಪರೀತವಾದ ಅನೇಕ ಅಪಶಕುನಗಳು ಕಂಡುಬರುತ್ತಿವೆ. ಯುದ್ಧದಲ್ಲಿ ಸ್ವಜನರನ್ನು ಕೊಂದು ನಾನು ಪಡೆದುಕೊಳ್ಳುವ ಶ್ರೇಯಸ್ಸು ಕಾರಣವಾಗಿದೆ" ಎಂದು ಅರ್ಜುನನು ಪ್ರಲಾಪಿಸಿದನು.

"ಶ್ರೇಯಸ್ಸನ್ನುಂಟುಮಾಡಲಾರದ ಈ ಯುದ್ಧದಿಂದ ನನಗಾಗಬೇಕಾದುದೇನು ?" ಎಂದು ಅರ್ಜುನನು ವಿಷಣ್ಣನಾದನು. ಇದರಂತೆಯೇ ಮುಮುಕ್ಷುವಾದವನು "ದುಃಖದಾಯಕವಾದ ಕರ್ಮಗಳಿಂದ ಪ್ರಯೋಜನವೇನು ?" ಎಂದು ನಿರ್ವೇದವನ್ನು ಪಡೆಯಬೇಕೆಂದು ಗೀತಾ ವ್ಯಾಖ್ಯಾನಕಾರರ ಅಭಿಪ್ರಾಯ. "ತನ್ನ ದೇಹದಲ್ಲಿ ಅಹಂಕಾರ, ಪರರ ದೇಹದಲ್ಲಿ ಮಮಕಾರ ಉಂಟಾದ ಅರ್ಜುನನು ಯುದ್ಧದಲ್ಲಿ ಉಂಟಾಗುವ ದೇಹನಾಶವನ್ನು ಪುರಸ್ಕರಿಸಿಕೊಂಡು ಶೋಕಕ್ಕೆ ಗುರಿಯಾದನು. ಈ ಶೋಕವೇ ಸ್ವಧರ್ಮಾಚರಣೆಗೆ ವಿರೋಧಿ ; ಇಷ್ಟೇ ಅಲ್ಲ, ಸ್ವಧರ್ಮ ಪಾಲನೆಯಿಂದ ಉಂಟಾಗುವ ಆತ್ಮಜ್ಞಾನಕ್ಕೂ ಸಹ ದೊಡ್ಡ ಪ್ರತಿಬಂಧಕವಾಗಿ ಕುಳಿತುಕೊಳ್ಳುತ್ತದೆ."

ಮೇಲಿನ ಶ್ಲೋಕಗಳಲ್ಲಿ ಅರ್ಜುನನು ಕೃಷ್ಣಾ! ಕೇಶವಾ! ಎಂದು ಎರಡು ಸಂಬೋಧನೆಗಳನ್ನು ಮಾಡಿದ್ದಾನೆ. ಇಲ್ಲಿ "ಕೃಷ್ಣಾ" ಎಂಬ ಪದಕ್ಕೆ ಅರ್ಥ— "ಕೃಷಿರ್ಭೂ ವಾಚಕ ಶ್ಶಬ್ದೋಣಶ್ಚ ನಿರ್ವೃತ್ತಿರ್ವಾಚಕಃ। ತಯೋ ರೈಕ್ಯಂ ಪರಂಬ್ರಹ್ಮ ಕೃಷ್ಣ ಮಿತ್ಯಭಿಧೀಯತೇ ॥"

ಅರ್ಥ—ಕೃಷ್ ಎಂಬ ಧಾತುವು ಸತ್ತಾವಾಚಕವಾಗಿರುವುದು ಮತ್ತು ಣ ಎಂಬ ಪ್ರತ್ಯಯವು ಆನಂದವಾಚಕವಾಗಿರುವುದು. ಆ ಸತ್ತಾ, ಆನಂದ ಎರಡರ ಏಕ ಸ್ವರೂಪವಾದ ಪರಬ್ರಹ್ಮವು "ಕೃಷ್ಣ" ಎಂಬ ನಾಮದಿಂದ ಹೇಳಲ್ಪಡುವುದು. ಕೃಷ್ಣನೆಂದರೆ ಸದಾನಂದ ಸ್ವರೂಪನೆಂದರ್ಥ.

ಇನ್ನು "ಕೇಶವ"—ಅಂದರೆ ಕೇಶಿ ಮೊದಲಾದ ರಾಕ್ಷಸರನ್ನು ಸಂಹರಿಸಿ ಭಕ್ತರನ್ನು ಪಾಲಿಸಿದವನು. ಈ ಎರಡು ಸಂಬೋಧನೆಗಳಿಂದ ನನ್ನ ಶೋಕವನ್ನು ನಿವಾರಿಸಿ, ನನ್ನನ್ನು ಅವಶ್ಯವಾಗಿ ರಕ್ಷಿಸುವನೆಂದು ಸೂಚಿಸಿದನು.

"ಮುಖಂಚ ಪರಿಶುಷ್ಯತಿ" ಎಂಬಲ್ಲಿ "ಶುಷ್ಯತಿ" ಎಂಬ ಪ್ರಯೋಗವು ಸಾಲವೆ

"ಪರಿಶುಷ್ಯತಿ" ಎಂದು ಹೇಳಿದೆ. "ಶುಷ್ಯತಿ" ಅಂದರೆ ಆರುವಿಕೆ. "ಪರಿಶುಷ್ಯತಿ" ಅಂದರೆ ಹೆಚ್ಚಾಗಿ ಆರುವಿಕೆ. ಶ್ರಮದಿಂದಲೂ, ಆಯಾಸದಿಂದಲೂ ಮುಖವು ಆರಿ ಹೋಗುವುದು ಬೇರೆ. ಶೋಕದಿಂದ ಮುಖವು ಆರಿ ಹೋಗುವುದು ಅದಕ್ಕಿಂತಲೂ ತೀವ್ರವಾದುದು. ಆದುದರಿಂದ ಕೇವಲ ಶೋಷಣವೆಂದು ಹೇಳದೆ ಪರಿಶೋಷಣ ವೆಂದು ಹೇಳಲ್ಪಟ್ಟಿದೆ.

ಇಲ್ಲಿಯವರೆಗೂ ಶೋಕ ಲಕ್ಷಣವನ್ನು ಹೇಳಿ ಕೊನೆಗೆ "ನಚಶ್ರೇಯೋನುಪಶ್ಯಾಮಿ" ಎಂದು ಹೇಳಿ ಶೋಕ ಜನ್ಯವಾದ ಮೋಹ ಲಕ್ಷಣವನ್ನೂ ಸಹ ಪ್ರಕಟ ಮಾಡಿದನು. ಶೋಕ, ಮೋಹಗಳು ಪರಸ್ಪರ ಪೋಷಕಗಳಾಗಿರುತ್ತವೆ ಇವುಗಳಿಗೆ ಅಜ್ಞಾನವೇ ಮಾತೃಸ್ಥಾನ. ಈ ಯುದ್ಧದಲ್ಲಿ ಸ್ವಜನರನ್ನು ಕೊಂದರೆ ಶ್ರೇಯಸ್ಸಾಗಲಾರದೆಂಬುದು ಅರ್ಜುನನ ತೀರ್ಮಾನ. ಸ್ವಧರ್ಮನಿಷ್ಠನಿಗೆ, ಸ್ವಧರ್ಮಪಾಲನೆಯೇ ಮುಖ್ಯ ಶ್ರೇಯಸ್ಸು. ಹೀಗಿದ್ದರೂ ಶೋಕ ವ್ಯಾಕುಲನಾದ ಅರ್ಜುನನು ಮೋಹ ಬುದ್ಧಿ ಅಂದರೆ ವಿಪರೀತ ಬುದ್ಧಿಗೆ ಗುರಿಯಾಗಿ ವಿಪರೀತವಾಗಿ ಭಾವಿಸಿದನು. ಶ್ರೇಯಸ್ಸು ಎಂದರೆ ಮೋಕ್ಷವೇ ಮುಖ್ಯ ಅರ್ಥ. ಅದನ್ನು ಒಂದು ಬದಿಗಿರಿಸಿದರೂ, ಶ್ರೇಯಸ್ಸು ದೃಷ್ಟವೆಂದೂ ಅದೃಷ್ಟವೆಂದೂ ಎರಡು ವಿಧವಾಗಿರುತ್ತದೆ. ರಾಜ್ಯಾದಿಗಳಿಂದ ಬರುವ ಶ್ರೇಯಸ್ಸು ದೃಷ್ಟ ಶ್ರೇಯಸ್ಸು. ಸ್ವರ್ಗಾದಿಗಳಿಂದ ಬರುವ ಶ್ರೇಯಸ್ಸು ಅದೃಷ್ಟ ಶ್ರೇಯಸ್ಸು. ತಾನು ಮಾಡುವ ಯುದ್ಧದಿಂದ ಈ ಎರಡೂ ವಿಧವಾದ ಶ್ರೇಯಸ್ಸುಗಳು ಲಭಿಸಲಾರವೆಂದು ಅರ್ಜುನನು ಭಾವಿಸಿದಂತೆ ತೋರುತ್ತದೆ.

ಇಲ್ಲಿಯವರೆಗೆ ನಡೆದ ಪ್ರಸಂಗದಿಂದ ಮೋಹವು "ದಯಾ" ವೇಷದಿಂದ ಅರ್ಜುನನನ್ನು ಮೋಸ ಮಾಡಿತು.

ದೌರ್ಬಲ್ಯವು ಧರ್ಮವೆಂಬ ಪರದೆಯನ್ನು ಹಾಕಿಕೊಂಡು ಪಾರ್ಥನನ್ನು ವಿಭ್ರಾಂತನನ್ನಾಗಿ ಮಾಡಿತು. ಕ್ಲೈಬ್ಯವು ವೈರಾಗ್ಯವೆಂಬ ನಾಟಕದಿಂದ ಅರ್ಜುನನನ್ನು ವಶಮಾಡಿಕೊಂಡಿತು.

ಸಶೇಷ

ವೈಯುಕ್ತಿಕ ದ್ವೇಷ, ಅಸೂಯೆ, ಸಂಪ್ರದಾಯದ ಮೌಢ್ಯತೆ ಎಂಬ ಬೇವಿನ ಕಡ್ಡಿಯನ್ನು ಬಾಯಲ್ಲಿ ಕಚ್ಚಿಕೊಂಡು ಸತ್ಕೃತಿ ಎಂಬ ಸಕ್ಕರೆಯ ಸವಿ ನೋಡಲು ಯತ್ನಿಸ ಬಾರದು.

—ಮಾತಾಜಿ

ಕಿಶೋರ ಕುಂಜ :

ಊಟ

ಊಟ ಸಾಗಲಿ ಮುಂದೆ ಹೋಗಲಿ,
ಡೊಳ್ಳು ಹೊಟ್ಟೆಯ ಸೇರಲಿ
ಬೀಸಿ ಕುತ್ತಿಗೆ ಬೀಳುತೇಳುತ
ತೇಗು ಮೆಳಗಡೆ ಹಾರಲಿ ॥

ತಾಮ್ರಗಿಂಡಿಯ ಹಿಡಿದು ಕೈಯೊಳು
ಪಾನವಾರಿಯ ಚಿಮುಕಿಸಿ
ಇರುವೆ ಬಾರದ ಅನ್ನ ಸಾರಿಗೆ
ಎಲೆಯ ಸುತ್ತಲೂ ಸಿಂಚಿಸಿ ॥

ನೋಡಿ ಬಾಳೆಲೆ ತುದಿಯ ಮುಂಗಡೆ,
ಭಕ್ಷ ಭೋಜದ ವೈಖರಿ ;
ರಂಜಿಸುತ್ತಿದೆ ಚೆಲುವು ನಾಲಿಗೆ
ನಿತ್ಯ ತಿನ್ನಲು ಬಯಸಿರಿ ॥

ಬಿಸಿಯ ಹೋಳಿಗೆ ಸುಟ್ಟ ವಾಸನೆ
ತೀಡಿ ಗಮ್ಮನೆ ಬರುತಿದೆ ;
ಕರಿದ ಶಾವಿಗೆ ಖೀರ ಮೇಗಡೆ
ಹನಿಗಳಂದದಿ ಘೃತ ಮಣಿ ॥

ನಾವು ಭೋಜನ ಪಾತ್ರ ಜೀವರು
ಬಾಳ ಗುರಿ ತಾ ಊಟವು ;
ಮೃಷ್ಟಾನ್ನ ಭೋಜನದೀಸುಖ
ಸ್ವರ್ಗ ಸಮಾನದ ಮಾಟವು ॥

ಮಂಜುಳಾ ಶಿವಾನಂದ
ಕನ್ನೂಘಟ್ಟ,

ಮಾತು ಜ್ಯೋತಿರ್ಲಿಂಗ

ಮಾತಾಜಿಯವರ ನುಡಿಮುತ್ತುಗಳು

—ಸಂಗ್ರಹ : ಡಿ. ಆರ್. ಬಸವರಾಜು

೧. ಮುತ್ತುಗಳು ಬಿಡಿ ಬಿಡಿಯಾಗಿ ಪೆಟ್ಟಿಗೆಯಲ್ಲೊಂದು, ಕಪಾಟಿನಲ್ಲೊಂದು ಸಿಕ್ಕಾಪಟ್ಟೆ ಇದ್ದರೆ ಅವುಗಳ ಬೆಲೆಯಾಗಲಿ ಅಥವಾ ಸೌಂದರ್ಯವಾಗಲಿ ಬೇರೆಯವರಿಗೆ ತೋರಿಬರದು. ಅವುಗಳೆಲ್ಲ ಒಂದು ದಾರದಲ್ಲಿಯೋ, ಚಿನ್ನದ ತಂತಿಯಲ್ಲಿಯೋ ಒಂದುಗೂಡಿಸಲ್ಪಟ್ಟಾಗ ಆ ಮಾಲೆಯ ಬೆಲೆ, ಉಪಯುಕ್ತತೆಯ ಅರಿವಾಗುವುದು.

೨. ಕುಟುಂಬ ಜೀವನ ತ್ಯಾಗದ ತಳಹದಿಯ ಮೇಲೆ, ಆತ್ಮೀಯತೆಯ ರಸಘಟ್ಟಿಯಾಗಿ ತಯಾರಾಗಬೇಕು. ಭೋಗ, ಸ್ವಾರ್ಥ, ವಿಲಾಸದ ತಳಹದಿಯ ಮೇಲೆ ಕಟ್ಟಲ್ಪಟ್ಟದು ಪ್ಲಾಸ್ಟಿಕ್ ಹೂವಿನಂತೆ ಆದೀತೆ ಹೊರತು ಸಹಜ ಮಲ್ಲಿಗೆಯ ಹೂವಿನಂತಲ್ಲ.

೩. ಒಂದು ಧರ್ಮ ಎಷ್ಟು ಪುರಾತನವಾದುದು ಎಂಬುದರ ಆಧಾರದ ಮೇಲೆ ನಾವು ಎಂದೂ ಅದರ ಮೌಲ್ಯವನ್ನು ಅಳೆಯಬಾರದು. ಇಂದಿನ ಜಗತ್ತಿಗೆ ಅದು ಮಾಡುತ್ತಿರುವ ಉಪಕಾರ, ಅಂತರ್ಗತಶಕ್ತಿ ಇದರ ಮೇಲೆ ಅಳೆಯಬೇಕು.

೪. ನಮ್ಮ ಮಾನ-ಅಪಮಾನ, ಸುಖ-ದುಃಖ ಎಲ್ಲವುಗಳನ್ನು ಪರಮಾತ್ಮನ ಕರುಣೆಯ ಅಳತೆಗೋಲಿನಿಂದ ಅಳೆಯಬೇಕೇ ಹೊರತು ಲೋಕದ ಮಾನವರ ಮಾತಿನ ದಂಡದಿಂದಲ್ಲ.

೫. ಶಿಕ್ಷಣವೆಂದರೆ ಕೇವಲ ಜ್ಞಾನಪಾಂಡಿತ್ಯದ ಶುಷ್ಕತಾಣವಲ್ಲ. ಸಜೀವ ಸಾಧನೆಯ ಮಹಾ ಮೆಟ್ಟಿಲು, ಸದ್ವಿನಯದ ಸೌಧ, ಸಹೃದಯತೆಯನ್ನು ವೃದ್ಧಿಸುವ ಪ್ರಯೋಗ ಕ್ಷೇತ್ರ, ಶುಭ ಜೀವನವನ್ನು ನಡೆಯಿಸಲಿಕ್ಕೆ ಉತ್ತಮ ಸಾಧನೆ.

೬. ತನುವಿಗೆ ಪುಷ್ಟಿಯಿತ್ತು, ಮನಕ್ಕೆ ವೈಶಾಲ್ಯವನ್ನಿತ್ತು, ಅಂತಃಕರಣಗಳನ್ನು ಅರಳಿಸಿ, ಸದ್ಗುಣಗಳನ್ನು ಮೈದಾಳಿಸಿಕೊಂಡು ಬಾಳುವಂತೆ ಮಾಡುವುದೇ ವಿದ್ಯೆಯ ಸಲ್ಲಕ್ಷಣ.

೭. ವಿದ್ಯುತ್ತು ಹರಿಯಲು ವಾಹಕ (ತಂತಿ)ವೊಂದು ಬೇಕಾದಂತೆ, ವೈಚಾರಿಕ ಸೈದ್ಧಾಂತಿಕ ತತ್ವಗಳ ವಿದ್ಯುತ್ತು ಪರಿಣಮಿಸಲು ಸಮಾಜವೆಂಬ ವಾಹಕ ಬೇಕೇ ಬೇಕು.

ದೃಷ್ಟಾಂತ ಕಥೆ

—ಸದ್ಗುರು ಶ್ರೀ ಲಿಂಗಾನಂದ ಸ್ವಾಮಿಗಳು

ಒಂದು ಕಾಡಿನಲ್ಲಿ ಸುಂದರವಾದ ಪ್ರಶಾಂತವಾದ ನೆರಳೀಯುವಂತೆ ಸೊಂಪಾಗಿ ಬೆಳೆದ ಮಾವಿನ ಗಿಡವೊಂದಿತ್ತು. ಅದರ ಬದಿಯಲ್ಲಿ ಆಲದ ಗಿಡ. ಅದರ ಕೊಂಬೆಯ ಮೇಲೆ ಎಲ್ಲರ ಪಾಪ-ಪುಣ್ಯ, ಗುಣಾವಗುಣಗಳನ್ನು ತೂಗಿ ನೋಡಿ ಫಲಕೊಡುವ ವಿಧಿ ಕುಳಿತಿತ್ತು. ಆಗ ಹಲವಾರು ಪಕ್ಷಿಗಳು ಬಂದು ಗಿಡದ ಮೇಲೆ ಕುಳಿತವು; ಒಂದು ಕೋತಿಯೂ ಬಂದಿತು; ಒಬ್ಬ ಕಳ್ಳನೂ ಬಂದ. ವಾಗ್ದೇವನೆಂಬ ಕೋಗಿಲೆಯೊಂದು ಇನಿದಾದ ಮಾವಿನ ಹಣ್ಣಿಗೆ ಮನಸೋತಿತಲ್ಲದೆ, ಅದೇ ವೃಕ್ಷದಲ್ಲಿ ಆಶ್ರಯ ಪಡೆಯಿತು. ಲಿಂಗದೇವರೆಂಬ ಗಿಳಿ ಬಂದು ತನಗೆ ಬೇಕಾದಷ್ಟು ಹಣ್ಣನ್ನು ಕುಕ್ಕಿ ತಿಂದು ಆನಂದಿಸಿ ಅಲ್ಲಿಂದ ಹಸಿವೆ ಹಿಂಗಿದ ನಂತರ ಹಾರಿಹೋಯಿತು. ಕುಮತಿ ಎಂಬ ಒಂದು ಕಾಗೆ ಬೇವಿನ ಹಣ್ಣೊಂದನ್ನು ಕಚ್ಚಿಕೊಂಡು ಬಂದು ಮಾವಿನಮರದ ಕೊಂಬೆಯ ಮೇಲೆ ಕುಳಿತು ಕುಕ್ಕಿ ತಿಂದಿತು. ಮಾವಿನ ವೃಕ್ಷದ ಮೇಲಿದ್ದರೂ, ಆಮ್ರಫಲಗಳ ಗೊಂಚಲು ಗೊಂಚಲೇ ಅಲ್ಲಿದ್ದರೂ, ತಾನು ಕಚ್ಚಿಕೊಂಡು ಬಂದಿದ್ದ ಬೇವಿನ ಹಣ್ಣೇ ಸರ್ವಸ್ವವಾಗಿತ್ತು ಕುಮತಿ ಎಂಬ ಕಾಗೆಗೆ. ಮಲಮೂತ್ರಾದಿಗಳನ್ನು ಬಳುವಳಿಯಾಗಿ ಕೆಳಗೆ, ಕೊಂಬೆಯ ಮೇಲೆ ಚೆಲ್ಲಿ ಪುರ್ರೆಂದು ಹಾರಿಹೋಯಿತು. ಉಮಾಕಾಂತನೆಂಬ ಕೋತಿ ತನಗೆ ಬೇಕಾದಷ್ಟು ಹಣ್ಣುಗಳನ್ನು ಕಿತ್ತು ತಿಂದು ಆ ಬಳಿಕ ಸುಮ್ಮ ಸುಮ್ಮನೆ ಅನೇಕವನ್ನು ಕಿತ್ತು ಈಡಾಡಿ ದಣಿದು ಎಲ್ಲೋ ಜಿಗಿಯುತ್ತಾ ಹೋಯಿತು. ಪಾಪಯ್ಯ ಎಂಬ ಕಳ್ಳನೊರ್ವ ಬಂದು ಮನಸೇಚ್ಛೆ ಹಣ್ಣುಗಳನ್ನೂ ತಿಂದು, ಆ ನಂತರ ಇಷ್ಟು ಕೊಂಬೆಗಳನ್ನೂ ಕಡಿದು ಹೊರಟ. ನಿರ್ಲಿಪ್ತವಾಗಿ ಗಮನಿಸುತ್ತಲಿದ್ದ ಎಲ್ಲರ ಪಾಪ-ಪುಣ್ಯಗಳ ಮಾಪಕನಾದ ವಿಧಿ ಹೀಗೆ ನುಡಿಯಿತು, "ಎಲೇ ಕೋಗಿಲೆಯೆ, ಮಾಮರದ ತಳಿರನ್ನು ಸವಿದು, ಹಣ್ಣನ್ನು ಮೆಲಿದು, ಅಲ್ಲಿಯೇ ಆಶ್ರಯ ಪಡೆದು, ಶಕ್ತಿಯನ್ನು ಸಂಚಯಿಸಿಕೊಂಡು ನೀನು ಆಶ್ರಯಿಸಿದ ಸ್ಥಾನವನ್ನೂ ಶ್ರೀಮಂತಗೊಳಿಸುವಂತೆ ಕುಹೂರಾಗ ಹಾಡಿದೆ. ನಿನ್ನನ್ನು ಎಲ್ಲರೂ ಪ್ರೀತಿಸಲಿ, ಗೌರವಿಸಲಿ. ನಿನ್ನ ಕಂಠದಿಂದ, ಜೀವನದಿಂದ ಜನರು ಮುದಗೊಳ್ಳಲಿ" ಎಂದು ವರ ನೀಡಿದ. "ಎಲೈ ಅರಗಿಳಿಯೇ, ಮಾವಿನ ಹಣ್ಣನ್ನು ತಿಂದು ಶಕ್ತಿ ಪಡೆದು ಮುದ್ದು

ಮಾತುಗಳನ್ನಾಡಲು ಕಲಿತು ಅವನ್ನು ಆಡಲು ಹಾರಿಹೋದೆಯಲ್ಲವೆ? ನಿನ್ನನ್ನು ಎಲ್ಲರೂ ಗೌರವಿಸಲಿ, ಸಾಕಲಿ. ನಿನ್ನ ಮುದ್ದು ನುಡಿಕೇಳಲು ಮನೆಯಲ್ಲಿ ಇರಿಸಿಕೊಳ್ಳಲು ಎಲ್ಲರೂ ಹಾತೊರೆಯಲಿ." "ಎಲೇ ಕುಮತಿ ಎಂಬ ಕಾಗೆಯೇ ಮಾಮರದ ಆಶ್ರಯ ಪಡೆದೂ ಬೇವಿನ ವೃಕ್ಷದ ಫಲಗಳನ್ನೇ ತಿಂದು ಕಾಲ ಕಳೆದು, ಕಡೆಗೆ ಕುಳಿತ ಕೊಂಬೆಗೆ ಮಲ ಮೂತ್ರ ಮಾಡಿದ ಕುಹಕಿ ನೀನು. ನಿನ್ನ ಕೂಗು ಕರ್ಣಕರ್ಕಶವಾಗಲಿ; ನಿನ್ನ ರೂಪು ಕುರೂಪವಾರಲಿ ಯಾರೂ ನಿನ್ನನ್ನು ಸಾಕದಿರಲಿ. ನಿನ್ನನ್ನು ಕಂಡರೆ ಜನ ತಿರಸ್ಕರಿಸಲಿ, ಒಳಹೊಕ್ಕರೆ ಜಿಗುಪ್ಸೆ ಪಡಲಿ."

"ಉಮಾಕಾಂತನೆಂಬ ಕಪಿಯೇ, ಹಣ್ಣು ತಿಂದುದಲ್ಲದೆ ಗಿಡದ ಹಣ್ಣನ್ನು ಕಿತ್ತು ಈಡಾಡಿದೆಯಾ? ನೀನು ಹಲವು ಹಣ್ಣು ಕಿತ್ತ ಮಾತ್ರಕ್ಕೆ ಗಿಡ ಸಾಯುವುದಿಲ್ಲ. ಅದು ಮತ್ತೆ ಮತ್ತೆ ಫಲಗಳನ್ನು ಕೊಟ್ಟೇ ತೀರುವುದು. ನಿನ್ನ ದುಷ್ಟ ಬುದ್ಧಿಯಿಂದಾಗಿ ನೀನು ಎಲ್ಲರಿಗೂ ಅಪ್ರಿಯವಾಗು. ಯಾರೂ ನಿನ್ನ ಆದರಿಸದಿರಲಿ".

"ಪಾಪಯ್ಯನೆಂಬ ಚೋರನೇ, ಉಂಡ ಮನೆಗೆ ಎರಡು ಬಗೆಯುವ, ಅನ್ನವಿಟ್ಟ ಕೈಯನ್ನು ಕಚ್ಚುವ ದ್ರೋಹಿ ನೀನು. ನಿನಗೆ ಬೇಕಾದಷ್ಟು ಹಣ್ಣನ್ನು ಪಡೆದುದಲ್ಲದೆ ಗಿಡದ ರೆಂಬೆಯನ್ನು ಕಡಿಯ ಬಯಸಿದ ದ್ರೋಹಿಯೇ, ಕೃತಘ್ನತೆಯ ಪ್ರತೀಕವಾದ ನಿನ್ನನ್ನು ಯಾರೂ ನಂಬದಿರಲಿ. ನಿನ್ನ ದುರ್ಬುದ್ಧಿಯಿಂದಲೇ ಬದುಕನ್ನು ಘಾತಿಸಿಕೊಂಡ ಅಧಮ ನೀನು...."

ಅವರವರ ಗುಣಕ್ಕೆ ತಕ್ಕಂತೆ ನ್ಯಾಯದ ತಕ್ಕಡಿ ಹಿಡಿದು ವಿಧಿ ತೀರ್ಪು ನೀಡಿತು. ಹಾಗೆಯೇ, ಉಪಕಾರವನ್ನು ಸ್ಮರಿಸಿಕೊಳ್ಳುವವರಿಗೆ ಸದಾ ದೇವರು ಒಳ್ಳೆಯ ವರ ನೀಡುತ್ತಾನೆ. ಉಪಕಾರ ಪಡೆದುಕೊಂಡು ಅಪಕಾರ ಬಯಸುವ ದ್ರೋಹಿಗಳಿಗೆ ಎಂದೂ ಮಂಗಲಮಯ ಬಾಳನ್ನು ನೀಡನು.

ನಗೆಹತಿ

ಓರ್ವ ಶ್ರೀಮಂತ ರೋಗಿ ಚಿಕಿತ್ಸಾಲಯಕ್ಕೆ ಬಂದು ಠೀವಿಯಿಂದ ಕುಳಿತನು. ಬಂದ ಡಾಕ್ಟರರು ಸಮೀಪಿಸಿ "ಏನು ಸ್ವಾಮಿ, ತಮಗೆ ಏನು ಕಾಯಿಲೆ, ಬಾಧೆಗಳು ತೊಂದರೆ ಕೊಡುತ್ತಿವೆ?

ಅದನ್ನು ಕೇಳಲೆಂದೇ ನಿಮ್ಮ ಬಳಿಗೆ ಬಂದೆ. ನಾನೇ ಹೇಳುವುದಾದರೆ ನೀವೇಕೆ ಬೇಕಿತ್ತು?" ಬಹಳ ಠೀವಿಯಿಂದ ಉತ್ತರಿಸಿದ.

ಹಾಗಿದ್ದರೆ ತಾವು ತಪ್ಪಿ ಇಲ್ಲಿ ಬಂದಂತೆ ಕಾಣುತ್ತದೆ. ಪಶುವೈದ್ಯ ಚಿಕಿತ್ಸಾಲಯ ನಮ್ಮಾಸ್ಪತ್ರೆ ಪಕ್ಕದಲ್ಲೇ ಇತ್ತು. ಅಲ್ಲಿಗೆ ಹೋಗಬೇಕಿತ್ತು. ಏಕೆಂದರೆ ಅವರು ಮಾತ್ರವೇ ರೋಗಿಯನ್ನು ಪ್ರಶ್ನಿಸದೆ ಚಿಕಿತ್ಸೆ ಮಾಡುವವರು..." ಉತ್ತರಿಸಿದರು ವೈದ್ಯರು.

ಗ್ರಂಥ ವಿಮರ್ಶೆ

'ಹೆಪ್ಪಿಟ್ಟಹಾಲು' ಕಾದಂಬರಿ ಕುರಿತು ಅಭಿಪ್ರಾಯ


ಎಸ್. ಬಸವರಾಜು, ಎಂ.ಎ.
ಕನ್ನಡ ಉಪನ್ಯಾಸಕ
ಶ್ರೀ ಕುವೆಂಪು ಮಹಾವಿದ್ಯಾಲಯ
ಪ್ರಥಮದರ್ಜೆ ಕಾಲೇಜು, ಚನ್ನಪಟ್ಟಣ

ಪೂಜ್ಯ ಮಾತಾಜಿಯವರಿಗೆ
ನನ್ನ ಭಕ್ತಿಪೂರ್ವಕ ಪ್ರಣಾಮಗಳು

ತಮ್ಮ 'ಹೆಪ್ಪಿಟ್ಟಹಾಲು' ಕಾದಂಬರಿಯನ್ನು ಓದಿದೆ. ನಿಜಕ್ಕೂ ಅದೊಂದು ಮೌಲಿಕ ಕಾದಂಬರಿ. 'ಹೆಪ್ಪಿಟ್ಟಹಾಲು'-ಹೆಸರೇ ಸಾಂಕೇತಿಕ-ಅರ್ಥಪೂರ್ಣ ಹಾಗೂ ಸಮುಚಿತ. ಅಂದು ಅನುಭವ ಮಂಟಪದಲ್ಲಿ ಅಕ್ಕ-ಅಲ್ಲಮರ ಸಂಭಾಷಣೆಯಲ್ಲಿ ಕಂಡುಬರುವ 'ಜ್ಯೋತಿರ್ಲಿಂಗ' ಸ್ವರೂಪವಾದ ಮಾತನ್ನು ಕಾದಂಬರಿಯ ಕಲ್ಯಾಣಿಯ ಪಾತ್ರಕ್ಕೆ ಸಾಂಕೇತಿಕವಾಗಿ ಅಳವಡಿಸಿ, ಆ ಮಾತಿನ ಅರ್ಥ ವೈಶಾಲ್ಯ

ವನ್ನು ತಮ್ಮ ಪ್ರತಿಭಾಜ್ಯೋತಿಯಿಂದ ಮತ್ತಷ್ಟು ವ್ಯಾಪ್ತಗೊಳಿಸಿ ಬೆಳಗಿಸಿದ್ದೀರಿ. ಆಧ್ಯಾತ್ಮಿಕತೆಯ ಹೊಂಗನಸನ್ನು ಕಂಡು ಆದರ್ಶದ ಬೆನ್ನೇರಿ ಹೊರಟ ಕಲ್ಯಾಣಿ. ಬಾಳಿಗೊಂದು ಊರುಗೋಲಿರಲಿ-ಸಾಧನೆಯ ಹಾದಿಗೊಂದು ಕೈದೀಪವಿರಲಿ ಎಂದು ಅಧ್ಯಾಪಕ ನಿರಂಜನನನ್ನು ಕೈಹಿಡಿಯುತ್ತಾಳೆ. ಆದರೆ ಅವಳ ಎಣಿಕೆ ತಪ್ಪಾಗಿ, ಪರಿಸರದಿಂದ ಪ್ರಭಾವಿತನಾಗಿ, ಸುಪ್ತಬಯಕೆಗಳ ದೊಂಬರಾಟಕ್ಕೆ ಸಿಲುಕಿ, ದೈಹಿಕ ಹಸಿವಿಗೆ ತುತ್ತಾಗಿ ಚಡಪಡಿಸುವ ಗಂಡನ ದೀನಪಾಡನ್ನು ನೋಡಲಾರದೆ, ಬಿಟ್ಟರೆ ಅನ್ಯಳ ಕೈವಶವಾದಾನು-ತಾನು ಅನಾಥೆಯಾದೇನು-ಎನ್ನುವ ಮಾನವೀಯ ಸ್ವಾರ್ಥವನ್ನು ಮುಂದುಮಾಡಿಕೊಂಡು ದೌರ್ಬಲ್ಯಕ್ಕೆಪಕ್ಕಾಗಿ ತನುವೊಪ್ಪಿಸುವ ಕಲ್ಯಾಣಿಯ ಪವಿತ್ರಹೃದಯಕ್ಕೆ ಹುಳಿ ಬೀಳುತ್ತದೆ-ಹೆಪ್ಪಿಟ್ಟ ಹಾಲಾಗುತ್ತದೆ. ತಮ್ಮ ಕಾದಂಬರಿಯ ಕಲ್ಯಾಣಿಯ ಪಾತ್ರ ಚಿರಸ್ಮರಣೀಯವಾದುದು. ನಿರಂಜನನ ಪಾತ್ರ ಸಮಾಜದ ಒಂದು ಸ್ತರದ ಪುರುಷನ ಗುಣ-ದೋಷಗಳ ಪ್ರತೀಕವಾಗಿದೆ. ಕುಸುಮಳ ಪಾತ್ರ ಅರ್ಥಪೂರ್ಣ-ಸಾಂಕೇತಿಕ. ಆದರೆ ಬೇರೊಂದು ಅರ್ಥದಲ್ಲಿ-ಕುಸುಮ (ಹೂವು) ದೈವಿಕ ಶಕ್ತಿಯ ಸಾಕಾರ-ಪ್ರಕೃತಿಯ ಪವಾಡ-ಪವಿತ್ರ ಎನ್ನುವ ಅರ್ಥದಲ್ಲಲ್ಲ. 'ಕುಸುಮ' ಕ್ಷಣಕಾಲ ನರುಗಂಪು ಬೀರಿ ಬಾಡಿಹೋಗುವ ಕ್ಷಣಿಕ ವಸ್ತು-ತನ್ನೆಡೆಗೆ ಬಂದ ದುಂಬಿಗಳಿಗೆಲ್ಲಾ ತನ್ನ ಹೊಂಬಟ್ಟಲಿನ ಮಕರಂದವನ್ನು ನೀಡಿ ಹುಚ್ಚೇರಿಸುವಂತಹದು-ಎನ್ನುವ ಅರ್ಥದಲ್ಲಿ. ರಾಜಣ್ಣನ ಪಾತ್ರ ಮಾನವೀಯ ಅನುಕಂಪ, ಸರಳತೆ, ಸೌಜನ್ಯ ಮುಂತಾದ ಸದ್ಗುಣಗಳ ಸಾಕಾರ.

'ಹೆಪ್ಪಿಟ್ಟ ಹಾಲಿ'ನಂತಾದ ಕಲ್ಯಾಣಿ, ಆತ್ಮಾನುಸಂಧಾನದ ಕಡೆಗೋಲಿನಿಂದ ಕಡೆಯಲ್ಪಟ್ಟು, ಅರಿವಿನ ಬೆಣ್ಣೆಯಾಗಿ ಸಾಧನೆಯ ಕಾವಿನಲ್ಲಿ ಕಾದು ಆತ್ಮೋದ್ಧಾರದ ಸವಿಯಾದ ತುಪ್ಪವಾಗುವ ಸೂಚನೆಯನ್ನು ಕಂಡಾಗ "ಶುಭಂ ಬರ್ಪ ರೀತಿಯಂ ತರಿಸಲ್ ನಾವಾರ್ ಸಮರ್ಥರ್"-ಎಂಬ ಕವಿವಾಣಿ ನೆನಪಿಗೆ ಬರುತ್ತದೆ. ಪ್ರಸ್ತುತ ಕಾದಂಬರಿಯಲ್ಲಿ ತಮ್ಮ ಮನಃಶಾಸ್ತ್ರದ ಬಗೆಗಿನ ಜ್ಞಾನವೂ ಮೇಳೈಸಿ ಇದೊಂದು ಮನೋವೈಜ್ಞಾನಿಕ ಕಾದಂಬರಿಯಾಗಿದೆ. ಕಾದಂಬರಿಯ ಉಪದೇಶದ ಮಾತುಗಳು ಶುಷ್ಕವೆನಿಸದೆ ಬೇಸರ ತರಿಸದೆ ರಮ್ಯವೂ ಬೋಧಪ್ರದವೂ ಆಗಿವೆ-ಕಾಂತೆಯಂತೆ ಮನವೊಲಿಸುತ್ತವೆ. ತಾತ್ಪೂರ್ತಿಕವಾಗಿ "ಕಾವ್ಯವು ವ್ಯಕ್ತಿಯಲ್ಲಿ ಭಾವನೆಗಳನ್ನು ಬಡಿದೆಬ್ಬಿಸಿ, ಯದ್ವಾತದ್ವಾ ಹರಿಯಬಿಟ್ಟು ಸಮಗ್ರ ವ್ಯಕ್ತಿತ್ವದ ಮೇಲೆ ದುಷ್ಪರಿಣಾಮವನ್ನುಂಟು ಮಾಡುತ್ತದೆ" ಎಂಬ ಪ್ರಾಚೀನ ದಾರ್ಶನಿಕ ಪ್ಲೇಟೋನ ಆಕ್ಷೇಪಕ್ಕೆ ಇಂದಿನ ಬಹುಪಾಲು ಕಾದಂಬರಿಗಳು ದೃಷ್ಟಾಂತವಾದರೆ, "ಕಾವ್ಯವು ವ್ಯಕ್ತಿಯಲ್ಲಿ ಭಾವನೆಗಳನ್ನು ಮಿಡಿದರೂ ಅವುಗಳನ್ನು ಅಸ್ತವ್ಯಸ್ತವಾಗಿ ಹರಿಯಗೊಡದೆ 'ಭಾವನಾ ಶುದ್ಧಿ' (Catharsis) ಯನ್ನುಂಟು ಮಾಡಿ ವ್ಯಕ್ತಿತ್ವದ ಉದ್ಧಾರಕ್ಕೆ ಸಹಕಾರಿಯಾಗುತ್ತದೆ" ಎಂಬ ಅರಿಸ್ಟಾಟಲನ ಕಾವ್ಯಸಮರ್ಥನೆಯ ಮಾತಿಗೆ ತಮ್ಮ 'ಹೆಪ್ಪಿಟ ಹಾಲು' ಕಾದಂಬರಿ ಉತ್ತಮ ನಿದರ್ಶನವಾಗಿದೆ.



ಹಸಿ ಹಾಲು-ಬಿಸಿ ಹಾಲು

ಸಂಗ್ರಹ : ಮಾತಾಜಿ

ಒಮ್ಮೆ ಸರಿಯಾಗಿ ಕಾಯಿಸಿಟ್ಟಿದ್ದ ಹಾಲಿನಲ್ಲಿ ಹಸಿಯಾದ ಹಾಲನ್ನು ಓರ್ವರು ಸುರಿದು ಒಲೆಯ ಮೇಲಿಟ್ಟಾಗ ಎಲ್ಲವೂ ಒಡೆದು ಹೋಯಿತು. ಆಗ ನನಗನಿಸಿತು: ಚೆನ್ನಾಗಿ ಕಾಯ್ದ ಹಾಲಿನಂತಹ ಸಾಧಕರು ಅಪರಿಪಕ್ವ ಮನಃಸ್ಥಿತಿಯ ಜನರೊಡನೆ ಬಹಳಷ್ಟು ವ್ಯವಹರಿಸತೊಡಗಿದರೆ ಅವರೂ ತಮ್ಮ ಉತ್ತಮ ಸ್ಥಿತಿಯನ್ನು ಕಳೆದುಕೊಂಡು ಪತನಗೊಳ್ಳುವರು. ಕೆಲವೊಮ್ಮೆ, ಆದರ್ಶ ಸಹಿತನಾದ ಪುರುಷನಿಗೆ ಆದರ್ಶ ವಿಹೀನ ಪತ್ನಿಯು ಸಿಕ್ಕಿದರೆ, ಅಥವಾ ಆದರ್ಶವಂತ ಸತಿಗೆ ಅನಾದರ್ಶಗಳ ಪತಿ ಸಿಕ್ಕಿದರೆ ಇಜ್ಜೋಡಾಗಿ ಉತ್ತಮ ಸ್ಥಿತಿಯಲ್ಲಿರುವವರು ದುಃಸ್ಥಿತಿಗೆ ಇಳಿಯುವರು"

ಒಣ ಕಟ್ಟಿಗೆ

ಹಸಿಯಾದ ಕಟ್ಟಿಗೆಯಿಂದಾಗಿ ಒಲೆ ಹಚ್ಚುವುದು ಕಷ್ಟಕರವಾಗಿತ್ತು. ಬೆಂಕಿ ಹಸಿ ಕಟ್ಟಿಗೆಯ ಕೊರಕಲಲ್ಲಿ ಸಿಕ್ಕಿ ಒದ್ದಾಡುತ್ತಿತ್ತು. ಆಗ ಒಲೆ ಉರಿಸುತ್ತಿದ್ದ ಗಂಗಮ್ಮ ಒಂದು ಒಣಗಿದ ಕಟ್ಟಿಗೆಯ ತುಂಡನ್ನು ಹಸಿಕಟ್ಟಿಗೆ ಮಧ್ಯದಲ್ಲಿ ತೂರಿಸುತ್ತಿದ್ದಂತೆಯೇ ಬೆಂಕಿ ಧಗ್ಗನೆ ಹತ್ತಿತು. ಹಸಿಕಟ್ಟಿಗೆಗಳೂ ಬೆಂಕಿಯನ್ನು ಆವಗ್ರಹಿಸಿಕೊಂಡು ಉರಿಯತೊಡಗಿದವು ಆಗ ಗಂಗಮ್ಮ ಹೇಳಿದಳು: ಒಂದೇ ಒಂದು ಒಣಗಿದ ಕಟ್ಟಿಗೆಯಿಂದ ಇಷ್ಟೆಲ್ಲ ಹಸಿ ಕಟ್ಟಿಗೆಗಳು ಉರಿಯುವಂತೆ, ಜ್ಞಾನಿಯಾದ ಗುರುದೇವನ ಸನ್ನಿಧಿಯಲ್ಲಿ ಸಾಧಕರೆಂಬುವವರು ತಮ್ಮ ಅಜ್ಞಾನದ ತೇವವನ್ನು ಕಳೆದುಕೊಂಡು ಅರಿವಿನಿಂದ ಪ್ರಜ್ವಲಿಸುವರು."

ಸತ್ಸಂಗದ ಆವಶ್ಯಕತೆ

ನಂಜನಗೂಡಿನಲ್ಲಿ ಪ್ರವಚನ ನಡೆದಿತ್ತು. ಅತ್ಯುತ್ತಮ ಜಾತಿಯ ಮಾವಿನ ಹಣ್ಣುಗಳು, ಇನ್ನೂ ದೋರೆಗಾಯಿ ಇದ್ದಂತಹವನ್ನು, ಯಾರೋ ತಂದುಕೊಟ್ಟರು. ಕೊಡುವಾಗ "ಇನ್ನೂ ದೋರೆಗಾಯಿಯಾಗಿವೆ. ಸ್ವಲ್ಪ ಕಾವಿನಲ್ಲಿರಿಸಬೇಕು.

ಬೇಗ ಹಣ್ಣಾಗುತ್ತವೆ" ಎಂದು ಹುಲ್ಲನ್ನು ಕೊಟ್ಟರು. ಆಗ ನನಗನ್ನಿಸಿತು, ಮಾವಿನಕಾಯಿ ಇನ್ನೂ ದೋರೆಗಾಯಿ ಇದ್ದಾಗ ಅವು ಕಾವಿನಲ್ಲಿ ಇರಬೇಕು. ಇಲ್ಲವಾದರೆ ಕೊಳೆತು ಹೋಗಿ ತಿನ್ನಲು ಬಾರದಂತಾಗುವದು. ಅವು ಹಣ್ಣಾದ ಬಳಿಕ ಹುಲ್ಲಿನ ಪೊದೆಯಿಂದ ಹೊರತೆಗೆದು ಗಾಳಿಗೆ ಇರಿಸಿದರೂ ಏನಾಗದು. ಹಾಗೆಯೇ ಸಾಧಕರೆಂಬ ದೋರೆಗಾಯಿಗಳು ಶರಣರ ಸತ್ಸಂಗವೆಂಬ ಕಾವಿನಲ್ಲಿದ್ದರೇ ಪರಿಪಕ್ವವಾಗುವರು. ಪಕ್ವಗೊಳ್ಳುವದಕ್ಕೆ ಮೊದಲೇ ಲೌಕಿಕ ಪರಿಸರಕ್ಕೆ ಈಡಾದರೆ ಆದರ್ಶಗಳಿಂದ ದೂರ ಸರಿಯುವರು. ಮಾನಸಿಕ ಸ್ಥಿತಿಯ ಒಂದು ಹಂತವನ್ನು ಮುಟ್ಟಿದ ನಂತರ ಎಲ್ಲಿದ್ದರೂ ಪತನಗೊಳ್ಳರು.

ದೇವನಿಗಾಗಿ ಭಕ್ತನ ಕರೆ

ಒಬ್ಬ ಶ್ರೀಮಂತನನ್ನು ಕಾಣಲಿಕ್ಕೆ ನಾವು ಹೋಗುತ್ತೇವೆ. ಅವನ ಮನೆ ಬಾಗಿಲ ಮುಂದೆ ನಾಯಿಯಿದೆ ಎಚ್ಚರಿಕೆ ಎಂಬ ಫಲಕ. ಗೇಟನ್ನು ತೆರೆಯುತ್ತಿದ್ದಂತೆಯೇ ನಾಯಿಯ ಬಗುಳಾಟ. ನಾವು ಹೆದರದೆ ಕರೆಯಬೇಕು ಭವನದ ಮಾಲಿಕನನ್ನು. ಎಲ್ಲಿಯವರೆಗೆ? ನಮ್ಮ ಕರೆಯು ಕೇಳುವ ತನಕ. ಆಗ ಅವನು ಬಾಗಿಲನ್ನು ತೆರೆದು ನಮ್ಮನ್ನು ಕಂಡು, ನಾಯಿಯನ್ನು ಗದರುವನು. ನಾಯಿ ಬಾಲ ಅಲ್ಲಾಡಿಸುತ್ತ ಅವನೊಡನೆ ನಮ್ಮನ್ನೂ ಕರೆದೊಯ್ಯುವದು.

ಅದೇ ರೀತಿಯಲ್ಲಿ ದೇವನನ್ನು ಕಾಣಬಯಸುವ ನಾವು ಅವನನ್ನು ಕರೆಯ ತೊಡಗಬೇಕು. ಆಗ ಮಾಯೆಯ ನಾಯಿ ಕೂಗಲು ತೊಡಗುತ್ತದೆ. ನಾವು ಗಾಬರಿಗೊಂಡು ಬಿಟ್ಟು ಬಿಟ್ಟರೆ ದೇವನ ಸಂದರ್ಶನ ಸಾಧ್ಯವಿಲ್ಲ. ನಮ್ಮ ಕರೆ ಅವನಿಗೆ ಮುಟ್ಟುವ ತನಕ ನಾವು ಕೂಗುತ್ತಲೇ ಇರಬೇಕು. ಹೃತ್ಪೂರ್ವಕ ಕರೆ ಮುಟ್ಟಿದಾಗ ಅವನು ಮಾಯೆಯ ನಾಯಿಯನ್ನು ಗದರುವನು; ಆಗ ಅದು ತಲೆ ಬಾಗಿ ಸಹಕರಿಸುವದು. ನಾವು ದೇವನೊಡನೆ ಸಾಗಲು ಸಹಾಯ ಮಾಡುವುದು.

* * * *

ನ ಗೆ ಹ ನಿ

ಒಂದು ಶಾಲೆಯಲ್ಲಿ ಹೊಡೆಯುವ ಗಂಟೆ ಇರಲಿಲ್ಲ. ಶಿಕ್ಷಕರು ಕೋಟು ಮೈ ಮೇಲೆ ಹಾಕಿಕೊಂಡರೆ ಆಗ ಶಾಲೆಯ ವೇಳೆ ಮುಗಿಯುವದು, ವಿದ್ಯಾರ್ಥಿಗಳು ಚದುರಬೇಕು ಎಂಬ ಒಪ್ಪಂದವಾಗಿತ್ತು. ಒಂದು ದಿನ ಮೇಲಧಿಕಾರಿಗಳು ಆಕಸ್ಮಿಕವಾಗಿ ಬಂದರು. ಆಗ ಶಿಕ್ಷಕರು ಗೌರವ ಸೂಚಿಸುವ ಸಲುವಾಗಿ ಮೇಲೆದ್ದು ಕೋಟನ್ನು ತೊಡುತ್ತಿದ್ದಂತೆಯೇ ವಿದ್ಯಾರ್ಥಿಗಳು ಒಟ್ಟಿಗೆ ಹೋ ಎಂದು ಚೀಲಗಳನ್ನು ಹೆಗಲಿಗೇರಿಸಿ ಕಂಬಿ ಕಿತ್ತರು. ಅಧಿಕಾರಿಗಳು ಆಶ್ಚರ್ಯದಿಂದ ಶಿಕ್ಷಕರು ಪೆಚ್ಚಿನಿಂದ ನಿಂತರು.



ಹಿಂದಿನ ಸಂಚಿಕೆಯವರೆಗೆ

(ಧರ್ಮ ಪ್ರಸಾರ, ವಿದೇಶ ಸಂದರ್ಶನದ ಮಣಿಹ ಹೊತ್ತ ಪೂಜ್ಯ ಮಾತೆಯವರು ೧೯೭೬ ಮೇ ೧೪ರಂದು ತಾಯ್ನಾಡಿನಿಂದ ತೆರಳಿದ್ದರು. ಏಕಾಂಗಿನಿಯಾಗಿ ಅಪರಿಚಿತ ನಾಡಿಗೆ ಹೋದ ಅವರಿಗೆ ಪ್ರಾರಂಭದಲ್ಲಿ ಸ್ವಲ್ಪ ತೊಂದರೆಯಾದರೂ ಸ್ವಧೈರ್ಯದಿಂದ ಪರಿಹರಿಸಿಕೊಂಡು ಮುಂದೆ ಸಾಗಿದರು. ಈ ಲೇಖನ ಮಾಲಿಕೆಯಲ್ಲಿ ತಮ್ಮ ಅನುಭವಗಳನ್ನು ತತ್ತ್ವಜ್ಞಾನದೊಡನೆ ಮೇಳೈಸಿ ವಿವರಿಸುತ್ತಿದ್ದಾರೆ.)

ಧಾರಾವಾಹಿ-೧೦

—ಜಗದ್ಗುರು ಮಾತಾಜಿ.

ಸಮುದ್ರವನ್ನೆಂದೂ ನೋಡಿರದ ಯಾತ್ರಿಕನೋರ್ವ, ಅವರಿವರ ಮೂಲಕ ಕೇಳಿ ಸಮುದ್ರ ದರ್ಶನ, ಸ್ನಾನಗಳಿಗೆಂದು ಗೋಕರ್ಣಕ್ಕೆ ಬಂದ. ಬೃಹದಾಕಾರದ ಅಲೆಗಳು ಏಳುತ್ತ ಬೀಳುತ್ತ ಹಾಯುತ್ತ ತೇಲುತ್ತ ನರ್ತಿಸುತ್ತಿದ್ದುದನ್ನು ಕಂಡು ಬೆರಗುಗೊಂಡ, ಆ ಅಲೆಗಳು ತನ್ನನ್ನು ಕೊಚ್ಚಿಹಾಕದಿರವೆ? ಎಂದು ಸಂದೇಹಿಸಿ ಅವುಗಳೆಲ್ಲ ಅಡಗಿ ಶಾಂತವಾಗುವ ತನಕ ಮೀಯುವುದೇ ಬೇಡವೆಂದು ಕಾಯುತ್ತ ಕುಳಿತ. ಬೆಳಗಿನ ಆರೂವರೆಯಿಂದ ಮಧ್ಯಾಹ್ನ ಹನ್ನೊಂದಾದರೂ ಕಾಯುವುದನ್ನು ತೊರೆದು ಸ್ನಾನಕ್ಕಿಳಿಯಲಿಲ್ಲ. ಓರ್ವ ಮೀನುಗಾರ ಇದನ್ನು ಗಮನಿಸಿ ಪ್ರಶ್ನಿಸಿದ; "ತಾವಾರು, ಏಕಿಲ್ಲಿ ಬಂದಿರುವಿರಿ? ಎಷ್ಟು ಹೊತ್ತಿನಿಂದ ಹೀಗೆ ಕಾಯುತ್ತಿರುವಿರಿ?" ಆಗಂತುಕ ಹೇಳಿದ: "ಸಮುದ್ರದಲ್ಲಿ ಮೀಯಬೇಕಾಗಿದೆ, ಅಲೆಗಳನ್ನು ನೋಡಿ ಭಯವಾಗಿದೆ. ಅವೆಲ್ಲ ಅಡಗುವ ತನಕ ಕಾಯುತ್ತಿದ್ದು, ಅಡಗಿದ ನಂತರ ಸ್ನಾನ ಮಾಡೋಣವೆಂದುಕೊಂಡಿರುವೆ.

"ಅಯ್ಯೋ ಮಹಾರಾಯ; ಅಲೆಗಳು ಅಡಗುವುದಾವಾಗ? ಅಡಗುವವೇ? ನೊರೆ-ತೆರೆಗಳ ಅಬ್ಬರವಿಲ್ಲದೆ ಸಮುದ್ರವಿಲ್ಲದಿರಬಹುದೇ ಅವು ಬರುವವು, ಹೋಗುವವು ತನ್ಮಧ್ಯೆ ಬುದ್ಧಿವಂತಿಕೆಯಿಂದ ಮೀಯುವುದೇ ಜಾಣತನ."

ಜೀವನವು ಒಂದು ಸಮುದ್ರ, ಸುಖ-ದುಃಖ, ಕಷ್ಟ-ಕಾರ್ಪಣ್ಯ, ನೋವು-ನಲಿವುಗಳ ಅಲೆಗಳಿಂದ ಕೂಡಿದುದು, ಈ ಅಲೆಗಳು ನಿಲ್ಲಲಿ ಎಂಥರಾದೀತೆ? ಒಂದು ಬಂದು ದಡಕ್ಕೆ ಅಪ್ಪಳಿಸಿ, ತನ್ನ ಸಾವನ್ನು ಕಂಡುಕೊಂಡಿತು ಎನ್ನುವಾಗಲೇ ಇನ್ನೊಂದರ ಆಗಮನ; ಅದರ ಹಿಂದೆ ಮತ್ತೊಂದರ ಜನನ. ಇದೇ ಅನುಭವ ನನಗೆ. ಮಿಸೆಸ್ ಫುಲ್‌ಡರ್ ಒಬ್ಬಂಟಿಗಳಾದ ವಿಧವೆ. ಅವರ ಮಗ ಬಹು ದೊಡ್ಡ ವಿದ್ವಾಂಸ. ಯಾವಾಗಲಾದರೊಮ್ಮೆ ಬಂದು ಹೋದರೂ ಭಾರತಿಯ ಧರ್ಮ, ಯೋಗ, ತತ್ತ್ವಗಳ ಬಗ್ಗೆ ಆಳವಾದ ಚರ್ಚೆಗೆ ಅವಕಾಶ ಎಂದು ಒಂದು ಬಗೆಯ ತೃಪ್ತಿಪಟ್ಟುಕೊಳ್ಳುತ್ತಿರುವಾಗಲೇ ಇನ್ನೊಂದು ಸಮಸ್ಯೆಯ ಉದ್ಭವ. ಅದೆಂದರೆ ವಾರಾಂತ್ಯ ಬಂದರೆ ಆಕೆ ಶುಕ್ರವಾರ ಬೆಳಗ್ಗೆ ಮನೆ ಬಿಟ್ಟರೆ ತನ್ನ ಕಛೇರಿಯಿಂದ ಯಾರದೋ ಮನೆಗೆ ಹೋಗಿ, ಶನಿವಾರ ಭಾನುವಾರಗಳನ್ನು ಅಲ್ಲಿ ಕಳೆದು, ಸೋಮವಾರ ಅಲ್ಲಿಂದಲೇ ಆಫೀಸಿಗೆ ಹೋಗಿ ಸೋಮವಾರ ಸಂಜೆಗೆ ಮನೆ ಸೇರುತ್ತಿದ್ದುದು. ಒಂದು ವಾರದಲ್ಲಿ ಅರ್ಧ ದಿವಸಗಳನ್ನು ತನ್ನ ಸ್ನೇಹಿತರುಗಳ ಮನೆಯಲ್ಲಿ ಆ ತಾಯಿ ಕಳೆದು ಬಿಡುತ್ತಿದ್ದಳು. ಮೊದಮೊದಲು ನನಗೆ ಸಂತೋಷವೆನಿಸಿತು. ನಿರಾತಂಕವಾಗಿ ಓದಬಹುದೆಂದು. ಆದರೆ ಆಕೆ ಮಹಡಿಯ ಇನ್ನೊಂದು ಭಾಗವನ್ನು ಒಬ್ಬ ಫ್ರೆಂಚನಿಗೆ ಬಾಡಿಗೆ ಕೊಟ್ಟಳು. ಒಂದೇ ಸ್ನಾನದ ಕೋಣೆ, ಒಂದೇ ಅಡಿಗೆ ಮನೆ ಎಲ್ಲರಿಗೆ. ನನಗೆ ತುಂಬಾ ಮುಜುಗರ. ಒಂದೇ ಮನೆ, ತಾನೋರ್ವಳೇ ಇದ್ದುದರಿಂದ ಆಕೆ ಒಳ ಭಾಗದಿಂದ ಕೋಣೆಗಳಿಗೆ ಚಿಲಕವನ್ನೂ ಮಾಡಿಸಿರಲಿಲ್ಲ, ಮನೆಯೊಡತಿ ಆಕೆ; ಬಾಡಿಗೆಗೆ ಕೊಡಬೇಡ ಎನ್ನಲಾಗುವುದೆ? ಅತಿಥಿಯನ್ನಾಗಿ ಇರಿಸಿಕೊಂಡು ಗೌರವಿಸುದುದು ಸಾಲದೆಂಬಂತೆ ಆಕೆ ಮನೆ ಬಾಡಿಗೆ ಕೊಡಲು ಬೇಡವೆನ್ನಲಾದೀತೆ? ಮೌನವಾಂತೆ. ಭಾರತೀಯ ಸಂಸ್ಕೃತಿಯಲ್ಲಿ ಬೆಳೆದ ಮನಸ್ಸೆ ತುಂಬಾ ವಿಚಿತ್ರ. ರಾತ್ರಿ ಹತ್ತು ಆಗುತ್ತಿದ್ದಂತೆಯೇ ಬಾಗಿಲು ಮುಚ್ಚಿಕೊಂಡು ಚಿಲಕವಿಲ್ಲದ ಬಾಗಿಲನ್ನು ಭದ್ರ ಪಡಿಸಲು ತುಂಬಿದ ಸೂಟ್‌ಕೇಸ್‌ಗಳನ್ನು ಒಂದರ ಮೇಲೊಂದರಂತೆ ಜೋಡಿಸುತ್ತಿದ್ದೆ.

ಒಂದು ದಿನ ಟೆಲಿವಿಷನ್‌ನಲ್ಲಿ ಏನೋ ಸಿನಿಮಾ ಬಂದಿತೆಂದು ಕರೆಯಲು ಬಂದು ಬಾಗಿಲು ದೂಡಿದಳು. "ನಾನು ಬರವಣಿಗೆಯಲ್ಲಿರುವೆ; ನೋಡುವ ಇಚ್ಛೆಯಿಲ್ಲ" ಎಂದೆ. ದೂಡಿದರೂ ಬಾಗಿಲು ತೆರೆಯದುದನ್ನು ಕಂಡು ಆಶ್ಚರ್ಯಗೊಂಡು ಕೇಳಿದೆ. ನಾನು ವಸ್ತುಸ್ಥಿತಿ ತಿಳಿಸಿದಾಗ ಹೇಳಿದಳು: "ಭಾರತೀಯ ಸ್ತ್ರೀಯರು ಗಂಡಸರನ್ನು ಕಂಡರೆ ಅದೆಷ್ಟು ಭಯಪಡುವರು. ಅವರು ಸಲೀಸಾಗಿ ಪುರುಷರ ಮಧ್ಯೆ ಬೆರೆಯುವುದೇ ಇಲ್ಲ." "ಭಾರತೀಯರ ಮೌಲ್ಯಗಳು ನಿಮ್ಮವಕ್ಕಿಂತ ಭಿನ್ನವಾಗಿವೆ. ನಮ್ಮ ಬದುಕು, ಪರಿಸರ, ಪರಂಪರೆಯಲ್ಲಿ ನೈತಿಕತೆಗೆ ಉನ್ನತ ಸ್ಥಾನವಿದೆ. ಒಮ್ಮೆ ಯಾರೋ ಹೇಳುತ್ತಿದ್ದರು: ಕೆಲವು ಕಾರುಗಳು ಹೇಗೆ ಉತ್ಪಾದನೆಗೊಳ್ಳುತ್ತಿವೆ ಎಂದರೆ ಹಾರ್ನ್ ಒಂದನ್ನು ಬಿಟ್ಟು ಉಳಿದೆಲ್ಲ ಭಾಗಗಳು ಶಬ್ದ ಮಾಡುತ್ತವೆ. ಅದೇ ರೀತಿ ಈ ಸಂಸ್ಕೃತಿಯ ಬಹುಪಾಲು ಜನರಲ್ಲಿ ನೈತಿಕತೆ ಹೊರತು ಬಾಹ್ಯ ಸೌಲಭ್ಯಗಳಿಗೇ ಪರಮೋಚ್ಚ ಸ್ಥಾನ. ಭಾರತೀಯ ಸಂಸ್ಕೃತಿಯಲ್ಲಿ ಊಟ, ಬಟ್ಟೆ, ಬಾಹ್ಯ ಸೌಲಭ್ಯ, ವೈಜ್ಞಾನಿಕ ಪ್ರಗತಿ ಗೌಣ; ನೈತಿಕ ಮೌಲ್ಯಗಳ ಗಳಿಕೆ ಪ್ರಮುಖ."

ಅತಿಥೇಯಳು ಒಮ್ಮೊಮ್ಮೆ ಬಿಡುವ ಹೊಗೆಯ ವಾಸನೆಯಂತೂ ವಿಪರೀತ. ಆಕೆ ಸಿಗರೇಟನ್ನು ಸತತವಾಗಿ ಸೇದುವ "ಸರಪಳಿ ಧೂಮ್ರಪಾನಿ." ಆದರೆ ಒಂದು ಸುಪ್ರಭಾತದಲ್ಲಿ ಸುಗಂಧ ಶೃಂಗಾರ್ ಊದಿನ ಕಡ್ಡಿ ಹಚ್ಚಿದ್ದರೆ, ಎಂಥಾ ಉದ್ರೇಕಿಸುವ ಕೆಟ್ಟವಾಸನೆ ಎಂದಳು. ನನಗೆ ಆಶ್ಚರ್ಯವೆನಿಸಿತು; ತುಂಬಾ ನಗೆಯೂ ಬಂದಿತು. ಪಾಶ್ಚಿಮಾತ್ಯರಲ್ಲಿ ಆದರಿಸುವ ಭಾವ ಬೆಳೆದಿದ್ದರೂ ಸಂಪೂರ್ಣ ಭಿನ್ನ ಪರಿಸರದಲ್ಲಿ ಬೆಳೆದ ನನಗೆ ಅವರ ಆತಿಥ್ಯ ಅಸಹನೀಯವೆನಿಸುತ್ತಿತ್ತು. ಸ್ವತಂತ್ರವಾಗಿ ಇರುವುದೇ ಪರಮ ಲೇಸು. ಯಾರಾದರೂ ಆಮಂತ್ರಿಸಿದಾಗ ಹೋಗಿ ಬಂದು ಮಾಡಬಹುದು ಎನ್ನಿಸಿತು. ವಸತಿಯನ್ನು ಬದಲಿಸಲು ಉದ್ದೇಶಿಸಿರುವೆ ಎಂದು ಗೊತ್ತಾಗಿ ಉತ್ತರ ಭಾರತದ ಸದ್ಭಕ್ತರುಗಳು ತಮ್ಮಲ್ಲಿಗೆ ಬರಲು ಒತ್ತಾಯಿಸಿದರು. ಒಂದೆರಡು ಬಾರಿ ಅಲ್ಲಿಗೆ ಹೋದಾಗಲೇ ಬಿಡುವು ದೊರೆಯದಷ್ಟು, ಮಾತು, ಸೇವೆ, ಊಟ, ಭಜನೆ, ಸತ್ಸಂಗ. ಇದೇ ರೀತಿ ಆದರೆ "ನಾನು ತಾತ್ತ್ವಿಕ ಅಧ್ಯಯನ ಮಾಡಬೇಕು," ಎಂಬ ಆಸೆ ಸಂಪೂರ್ಣಗೊಳ್ಳದೆ ಭಕ್ತರ ಮನೆಯ ಊಟ ತೀರಿಸುವುದರಲ್ಲೇ ಎಲ್ಲವೂ ಮುಗಿದೀತು ಎಂದು ಅತ್ಯಂತ ಸೌಜನ್ಯದಿಂದ ನಿರಾಕರಿಸಿದ್ದೆ, "ಲಂಡನ್ ವಿಶ್ವವಿದ್ಯಾಲಯಕ್ಕೆ ತಮ್ಮ ಭಾಗ ತುಂಬಾ ದೂರ; ಕೇವಲ ಅರ್ಧ ಗಂಟೆಯ ಒಳಗಡೆ ಅಲ್ಲಿಗೆ ತಲ್ಪುವಂತಹ ಜಾಗಬೇಕು.".

ಅಲ್ಲಿ ಮನೆಗಳನ್ನು ಬಾಡಿಗೆ ಹಿಡಿಯುವದೂ ಸುಲಭ, ಬಿಡುವದೂ ಸುಲಭ, ಒಬ್ಬರೋ ಇಬ್ಬರೋ ಅಥವಾ ಸ್ವತಂತ್ರ ಮನೆಯೋ ಯಾವಾದರೂ ಸಿಕ್ಕುವವು. ಕೆಲವು ದಿನ ಪತ್ರಿಕೆಗಳ ವರ್ಗೀಕೃತ ಜಾಹಿರಾತು ಕಾಲಂ ನೋಡಿ ಕೇವಲ ಫೋನ್ ಮುಖಾಂತರ ನಿರ್ಧರಿಸಬಹುದು. ಒಬ್ಬ ಭಾರತೀಯ ಮುಸ್ಲಿಂ ಮತ್ತು ಅವನ ಹಾಲೆಂಡ್ ಪತ್ನಿಯ ಒಡೆತನದ ಒಂದು ಮನೆಯನ್ನು ನೋಡಿದೆ. ಬೃಹತ್ತಾದ ಭವನದಲ್ಲಿ ಅವರುಗಳು ಕೆಳಗೆ, ಮೇಲೆ ಅನೇಕ ಬಾಡಿಗೆದಾರರು. ಗಂಡ-ಹೆಂಡತಿ ಅತ್ಯಂತ ಸಹಾಯ ಪ್ರವೃತ್ತಿಯವರು. ನನ್ನನ್ನು ನೋಡುತ್ತಲೇ ಮಿ|| ಖಾನ್ ಸಂತೋಷಭರಿತರಾಗಿ ಬಂದೇ ತೀರಬೇಕೆಂದು ಒತ್ತಾಯಿಸಿದರು. ಸ್ವಲ್ಪ ಗದ್ಗದಿತರಾಗಿದ್ದರು. ಆ ಧ್ವನಿಯಲ್ಲಿ ಹಲವಾರು ಭಾವನೆಗಳು ಮಿಡಿಯುತ್ತಿದ್ದವು. ಥಟ್ಟನೆ ನನಗೆ ಭೈರಪ್ಪನವರ ಧರ್ಮಶ್ರೀ ಕಾದಂಬರಿಯ ಸತ್ಯ ನೆನಪಿನ ತೆರೆಯಲ್ಲಿ

ಕಾಣಿಸಿಕೊಂಡ. ಭಾರತದಲ್ಲಿ ಅವರ ಹಿರಿಯರು ಶ್ರೇಷ್ಠ ಹಿಂದುಗಳಾಗಿದ್ದು ಒತ್ತಡಕ್ಕೊಳಗಾಗಿ ಮುಸ್ಲೀಮರಾಗಿದ್ದು, ವಿದ್ಯಾಭ್ಯಾಸಕ್ಕಾಗಿ ಈ ವ್ಯಕ್ತಿ ಇಂಗ್ಲೆಂಡಿಗೆ ಬಂದು ತಾಯಿ-ತಂದೆ-ತನ್ನ ಧರ್ಮ ಎಲ್ಲ ತೊರೆದು ಅಲ್ಲಿಯ ಮಹಿಳೆಯನ್ನು ವಿವಾಹವಾಗಿದ್ದು, ಮಧ್ಯಮ ವಯಸ್ಸನ್ನು ದಾಟಿ ಇಳಿವಯಸ್ಸಿಗೆ ಕಾಲಿಡುತ್ತಿದ್ದ ಆ ಮನುಷ್ಯ ಈ ಎಲ್ಲಕ್ಕೂ ವಿಷಾದಿಸುವ ಛಾಯೆ ಮುಖದ ಮೇಲಿತ್ತು.

"ನೀವಿಲ್ಲಿ ಬಂದರೆ ಎಷ್ಟೋ ವಿಷಯ ಚರ್ಚಿಸಬಹುದು. ನನಗೂ ಹಿಂದೂ ತತ್ತ್ವ ಯೋಗ ಇವುಗಳಲ್ಲಿ ತೀವ್ರ ಆಸಕ್ತಿ. ವಿರುದ್ಧ ಮತ್ತು ವಿಭಿನ್ನ ಪರಿಸರಕ್ಕೆ ಸಿಕ್ಕಿ ಎಲ್ಲವೂ ಕಮರಿಹೋಗಿದೆ...." ಎಂದನು.

"ತಮಗೆ ಇಲ್ಲಿ ಸಂಪೂರ್ಣ ಸ್ವಾತಂತ್ರ್ಯವಿದೆ. ತೋಟವು ವಿಶಾಲವಾಗಿದೆ. ಮನೆಯಲ್ಲಿ ದೊಡ್ಡ ಗ್ರಂಥ ರಾಶಿ ಇದೆ; ಯಾವಾಗಬೇಕಾದರೂ ಟೆಲಿವಿಷನ್ ಸಹ ನೋಡಬಹುದು. ಬೇರಾವ ಬಾಡಿಗೆದಾರರೂ ಈ ಭಾಗ ಪ್ರವೇಶಿಸರು. ತಾವು ಮಾತಾಜಿಯಲ್ಲವೆ? ನಮ್ಮ ಪವಿತ್ರ ಭಾರತದ ಸಂದೇಶವನ್ನು ಬಿತ್ತರಿಸಲು ಬಂದವರು. ತಮಗೆ ಗೌರವ ಸಲ್ಲಿಸಬೇಕಾದುದು ನಮ್ಮ ಕರ್ತವ್ಯ. "ಖಾನರ ಮಾತು ಕೇಳಿ ಸಂತೋಷವಾಯಿತು. ಇಂದು ಇಂಗ್ಲೆಂಡಿನ ನಾಗರಿಕತ್ವ ಪಡೆದು, ಹಾಲೆಂಡು ಪತ್ನಿಯನ್ನು ಮದುವೆಯಾಗಿ, ಒಂದಾನೊಂದು ಕಾಲದಲ್ಲಿ ಮುಸ್ಲಿಮನಾಗಿ ಪರಿವರ್ತನೆಗೊಂಡಿದ್ದರೂ ಹಿಂದೂ ಅಭಿಮಾನ ರಕ್ತದಲ್ಲಿ ಹರಿಯುವ ಸುಳಿವು, ಭಾರತೀಯ ಸಂಸ್ಕೃತಿಯ ದಟ್ಟ ಛಾಯೆ ಆ ಮಾತುಗಳಲ್ಲಿತ್ತು.

ಮಿ॥ ಖಾನ್ ಮತ್ತು ಶ್ರೀಮತಿ ಈಡಾರ ಗ್ರಂಥ ಸಂಗ್ರಹ ನೋಡಿ ಆಶ್ಚರ್ಯವೆನಿಸಿತು. ಶ್ರೀಮತಿ ಫುಲ್‌ಡರ್‌ರವರ ಗ್ರಂಥ ರಾಶಿಯೂ ಅಷ್ಟೇ. ಹದಿನಾಲ್ಕು ಹನ್ನೆರಡು ಅಳತೆಯ ಎರಡು ಕೋಣೆಗಳನ್ನು ಆಕ್ರಮಿಸಿತ್ತು. ಆಕೆ ಚೈನ್ ಸ್ಮೋಕರ್ ಇರಲಿ, ಹಗಲಿರುಳು ತಿರುಗುವ ಸ್ವಭಾವದಾಕೆಯೇ ಇರಲಿ, ಪುಸ್ತಕಾಭಿರುಚಿ ಚೆನ್ನಾಗಿತ್ತು. ಆ ಜನಕ್ಕೆ ಎಷ್ಟೇ ಶ್ರೀಮಂತಿಕೆಯ ಪ್ರದರ್ಶನದ ವಸ್ತುಗಳಿದ್ದರೂ ನಡುಮನೆಯಲ್ಲಿ ಸಾಹಿತ್ಯ ಕೃತಿಗಳ ಜೋಡಣೆ ಇಲ್ಲದಿದ್ದರೆ ಅವಮಾನವೆಂದು ತಿಳಿಯುತ್ತಾರೆ. ಅದೇ ನಮ್ಮಲ್ಲಿ ಬಹುಪಾಲು ಶ್ರೀಮಂತರು ಸಾಹಿತ್ಯವೆಂದರೆ ಸಿಡಿಗುಟ್ಟುತ್ತಾರೆ. ಒಂದು ಊರಲ್ಲಿ ಪ್ರವಚನ ನಡೆದಿತ್ತು. ಕೋಟ್ಯಾಧೀಶ ಮಿಲ್ ಮಾಲಿಕರ ಬಳಿ ನೂರಾ ಇಪ್ಪತ್ತು ರೂಪಾಯಿಗಳ ಪುಸ್ತಕ ಸೆಟ್ ಒಯ್ದರೆ, "ಏನ್ರೀ, ಸಾಹಿತ್ಯಕ್ಕಾಗಿ ಇಷ್ಟು ಖರ್ಚು ಮಾಡಿದರೆ ಹೇಗೆ? ಇದೇ ಹಣವನ್ನು ಇನ್‌ವೆಸ್ಟ್ ಮಾಡಿದರೆ ಲಾಭವಾದರೂ ಬಂದೀತು...." ಎಂದು ಮಾರ್ನುಡಿದರಂತೆ. ಸಾಹಿತ್ಯಾಸಕ್ತಿ ಇದ್ದ ಬಡವರು ಸಾಲಮಾಡಿ ಪುಸ್ತಕ ತೆಗೆದುಕೊಂಡರೆ ಲಕ್ಷಾಧಿಪತಿ

ಯಾದ ಓರ್ವ ಪುಸ್ತಕದ ಹಣ ಕೊಡಲಿಲ್ಲ. ಆ ಶ್ರೀಮಂತನ ಬಳಿ ವಸೂಲು ಮಾಡಲಾರದೆ ನಮ್ಮವರೇ ಸೋಲಬೇಕಾಯಿತು. "ಮನುಷ್ಯ ತನಗಾಗಿ ಹಣ ಮಾಡಿಕೊಂಡ. ಆದರೆ ಹಣ ಇಂದು ತನಗಾಗಿ ಮನುಷ್ಯನನ್ನು ಮಾಡಿಕೊಳ್ಳುವ ಪರಿಸ್ಥಿತಿ." ಪಾಶ್ಚಿಮಾತ್ಯರಲ್ಲಿ ಸಾಹಿತ್ಯ, ವೃತ್ತ ಪತ್ರಿಕೆ, ಅಧ್ಯಯನ ಮುಂತಾದವುಗಳಲ್ಲಿ ಪ್ರೌಢ ಅಭಿರುಚಿ ಬೆಳೆದಿದೆ. ಅಂತೆಯೇ ಅವರಲ್ಲಿ ಮುದ್ರಣಕ್ಕೆ ಹಾಕುವಾಗ ಲಕ್ಷಾಂತರ ಪ್ರತಿ ಮುದ್ರಿಸುವರು. ನಮ್ಮಲ್ಲಿಯೋ "ಸಾಹಿತಿ, ನೀನು ಸಾಯುತಿ" ಎಂಬ ರಾಗ ಹಾಡುತ್ತ ಸಹಸ್ರಾರು ಅಚ್ಚುಹಾಕಿಸಿ ಮಾರುವುದರಲ್ಲಿ ಪಡಿಪಾಟಲು.

ನನಗೆ ಖಾನ್‌ರ ಮನೆಯ ವಾತಾವರಣ ತುಂಬಾ ಮೆಚ್ಚಿತು. ನಾರ್ತ್ ವೆಸ್ಟ್ ಲಂಡನ್ನಿನ ಟನ್‌ಮೌತ್ ರಸ್ತೆಯಲ್ಲಿರುವ ಅಲ್ಲಿಗೆ ವಸತಿಯನ್ನು ಸ್ಥಳಾಂತರಿಸಿದೆ. ವಿಶಾಲವಾದ ರಸ್ತೆ! ಇಕ್ಕೆಲಗಳಲ್ಲೂ ಛತ್ರಿಯಂತೆ ಬೆಳೆದ ವೃಕ್ಷದ ಸಾಲು, ಮಹಡಿಯ ಮೇಲಿನ ನನ್ನ ಕೋಣೆ ಪ್ರಶಾಂತ ಪರಿಸರದಲ್ಲಿತ್ತು. ಅಷ್ಟೇ ಸುಂದರವಾಗಿ ಅಲಂಕರಿಸಿದ್ದರು. ಶ್ರೀಮತಿ ಈಡಾ ಬಹಳ ಸುಸಂಸ್ಕೃತ ಗೃಹಿಣಿ; ಮನೆಯ ಅಂದವನ್ನು ಹೆಚ್ಚಿಸುವುದರಲ್ಲಿ ಮೈಯೆಲ್ಲ ಕಣ್ಣು ಆಕೆಗೆ. ಸುಸಜ್ಜಿತ ಕೋಣೆ. ವಿಶಾಲವಾದ ಕೋಣೆಯಲ್ಲೇ ಅಡಿಗೆಗೆ ಅನುಕೂಲ; ಕೋಣೆಯನ್ನು ಬೆಚ್ಚಗಿರಿಸುವ ಶಾಖ ಉತ್ಪಾದನಾ ಯಂತ್ರ. ಅಡಿಗೆಯನ್ನು ತಣ್ಣಗಿಡುವ ರಿಫ್ರಿಜಿರೇಟರ್. ಕೋಣೆ ಸಂಪೂರ್ಣ ಸ್ವತಂತ್ರ. ಯಾರ ಗೊಂದಲವೂ ಇಲ್ಲ. ಅಲ್ಲಿ ಕಳೆದ ವೇಳೆ ಒಂದು ರೀತಿಯ ತಪಸ್ಸೇ ಆಯಿತು. ಏಕಾಂತ; ಅಧ್ಯಯನ, ಪೂಜೆ, ಗಾಯನ! ಕಾರ್ಯಕ್ರಮ ಇದ್ದಾಗ ಮಾತ್ರ ಹೊರಗೆ ಹೋಗುವಿಕೆ. ವಿಶಾಲವಾದ ಕಿಟಕಿಯ ತೆರೆ ಸರಿಸುತ್ತಲೇ ಗಿಡಗಳ ಕುಳಿರ್ಗಾಳಿ. ಅವನ್ನು ಆಶ್ರಯಿಸಿಕೊಂಡಿದ್ದ ಹಕ್ಕಿಗಳ ಚಿಲಿಪಿಲಿ ನಾದ. ಎಷ್ಟೋ ವರುಷಗಳಿಂದ ಏಕಾಂತದಲ್ಲಿದ್ದು ಅಂತರ್ಮುಖಿಯಾಗಿ, ಸ್ವಲೀಲಾನಂದದಲ್ಲಿ ಸಾಧನ ಮಾಡಬೇಕೆಂಬ ಆಕಾಂಕ್ಷೆ ಈಗ ತೃಪ್ತಿಗೊಂಡಿತ್ತು. ಅಡಿಗೆ ಮಾಡಲು ಹೆಚ್ಚಿನ ಕಾಲ ಕಳೆಯದೆ ಹಣ್ಣು-ಹಾಲು, ಅಲ್ಲಿ ಸೋವಿಯಾಗಿ ಮತ್ತು ಥಂಡಿಯಾಗಿ ಸಿಕ್ಕುವ ಯೋಗರ್ಟ್ (ಬೇರೆ ಬೇರೆ ಹಣ್ಣು ಬೆರೆಸಿದ ಮೊಸರು) ತಿಂದು ಕಾಲ ಕಳೆಯತೊಡಗಿದೆ.

ಹೆಚ್ಚಾಗಿ ಹೊರಗೆ ಬರದೆ ಅಂತರ್ಮುಖಿಯಾಗಿರುತ್ತಿದ್ದ ನನ್ನ ಬಗ್ಗೆ ಶ್ರೀಮತಿ ಈಡಾರಿಗೆ ಆಶ್ಚರ್ಯ. "ಅದೆಂತು ಇರುವಿರಿ!" ಎಂದು ಉದ್ಗಾರ. ಈ ಅವಧಿಯಲ್ಲಿ ಸೋಮರ್‌ಸೆಟ್ ಮಾಮ್, ಚಾರ್ಲ್ಸ್‌ಡಿಕನ್ಸ್, ಷೇಕ್ಸ್‌ಪಿಯರರ ಸಾನೆಟ್ಸ್, ಮಾಡರ್ನ್ ಇಂಗ್ಲೀಷ್ ಕಥೆಗಳು, ಆಲ್ಡಸ್ ಹಕ್ಸೆಯ ಕೃತಿಗಳು ಕೆಲವು ತಾತ್ತ್ವಿಕ ಮತ್ತು ಧಾರ್ಮಿಕ ಉದ್ಗ್ರಂಥಗಳನ್ನು ಓದಲು ಅವಕಾಶವಾಯಿತು. ಆಗಾಗ ದೊಡ್ಡ ಪುಸ್ತಕ ಮಳಿಗೆಗಳನ್ನು ಸಂದರ್ಶಿಸಿ ಕೆಲವು ಗ್ರಂಥಗಳನ್ನು ಖರೀದಿಸಿದೆ.

ಒಮ್ಮೊಮ್ಮೆಯಂತೂ ಜ್ಞಾನ ಸರೋವರದಲ್ಲಿ ಮೀಯುತೊಡಗಿದರೆ ಹೊರಗಿನ ಲೋಕದ ಅರಿವೇ ಮೂಡುತ್ತಿರಲಿಲ್ಲ. "ಯಾವ ಜವಾಬ್ದಾರಿಗಳೂ ಇಲ್ಲದೆ ನಿಶ್ಚಿಂತೆಯಾಗಿ ಹೀಗೆ ಜ್ಞಾನಸುಧಾಪಾನದಲ್ಲಿ ಮೈಮರೆವುದೆಷ್ಟು ಹಿತ" ಎನ್ನಿಸುತ್ತಿತ್ತು.

ಜುಲೈ ೨೩ರ ಸೋಮವಾರದಂದು ವಿಶೇಷ ಕಾರ್ಯಕ್ರಮ. ಇಂದ್ರನಾಥರ ಯೋಗಕೇಂದ್ರದಲ್ಲಿ ನನ್ನ ಮತ್ತು ಮಾ ಯೋಗಶಕ್ತಿಯವರ ಸಂದರ್ಶನ ಮತ್ತು ಭಾಷಣ. ಗೋಂಡಿಯಾದಲ್ಲಿ ಕೇಂದ್ರ ಆಶ್ರಮ ಹೊಂದಿ, ಬಾಂಬೆಯಲ್ಲೂ ಒಂದು ಆಶ್ರಮ ಹೊಂದಿರುವ ಮಾ ಯೋಗಶಕ್ತಿ ಪೂರ್ವಾಶ್ರಮದಲ್ಲಿ ರಾಜಕೀಯ ಪಟುಗಳು, ಲೋಕಸಭೆಗೆ ಸ್ಪರ್ಧಿಸಿದ್ದವರು. ಕಾಲಾನಂತರದಲ್ಲಿ ರಾಜಕೀಯ ಜೀವನದಲ್ಲಿ ಬೇಸರಗೊಂಡು ಆಧ್ಯಾತ್ಮ ಪಥವನ್ನು ಪ್ರವೇಶಿಸಿದ್ದವರು. ಗೃಹಸ್ಥ ಜೀವನವನ್ನು ನಿರಾಕರಿಸಿ, ಪತಿಯನ್ನು ಮಕ್ಕಳನ್ನೂ ತೊರೆದು ಸನ್ಯಾಸವನ್ನು ಸ್ವೀಕರಿಸಿದ್ದರು. ಈರ್ವರ ಸಮಾವೇಶವಾದಾಗ ಬಹಳ ಹರ್ಷಿಸಿದರು. ಈಗಿನ ಕಾಲದಲ್ಲಿ ತ್ಯಾಗ ಮಾಡುವುದೇ ದುಸ್ತರ. ಎಂಥ ಸಣ್ಣ ವಯಸ್ಸಿನಲ್ಲಿ ತ್ಯಾಗ ಮಾಡಿ ಬಂದಿರುವಿರಿ. ಇದು ನಮ್ಮ ಹಿಂದೂ ಪರಂಪರೆಗೆ ಹೆಮ್ಮೆಯ ವಿಷಯ" ಎಂದರು. ಅವರ ಮತ್ತು ನನ್ನ ಭಾಷಣಗಳಾದವು. ವಿದೇಶಿ ಶ್ರೋತೃಗಳು ಬಹಳ ಸಂತೋಷಪಟ್ಟರು.

ಜುಲೈ ಇಪ್ಪತ್ತೆಂಟರಂದು ಇನ್ನೊಂದು ವಿಶೇಷ ಆಮಂತ್ರಣ. ಅದು ಆಲೆನ್ ಬಾಬ್ಬಿಂಗ್‌ಟನ್‌ರವರ ಯೋಗಕೇಂದ್ರಕ್ಕೆ. ಗೋಲ್ಡರ್ಸ್‌ಗ್ರೀನ್ ಎಂಬ ಸುಪ್ರಸಿದ್ಧ ರೈಲ್ವೆ-ನಿಲ್ದಾಣದಿಂದ ವಾಯುವ್ಯ ಲಂಡನ್‌ನಗರದ ಹೆಂಡನ್ ಬಡಾವಣೆಯ ಸನ್ನಿಗಾರ್ಡನ್ ರಸ್ತೆಯಲ್ಲಿ ಅವರ ಕೇಂದ್ರ. ಆಲೆನ್ ಅಲ್ಲಿ ಸುಪ್ರಸಿದ್ಧರಾದ ಹಠಯೋಗಿಗಳು. ಯೋಗಾಸನ ತರಬೇತಿಗಾರರು ಹೋಗಿ ಅಲ್ಲಿ ಯೋಗಾಸನಾಭ್ಯಾಸವನ್ನು ಜನಪ್ರಿಯಗೊಳಿಸಿದ ನಂತರ ಅಲ್ಲಿಯವರೇ ಆದ ಅಲೆನ್ ಬಾಬ್ಬಿಂಗ್‌ಟನ್‌ರವರು ಇನ್ನೊಂದು ನೂತನ ಪ್ರಯೋಗಕ್ಕೆ ತೊಡಗಿದರು. ಪಾಶ್ಚಿಮಾತ್ಯರು ಹುಟ್ಟಿನಿಂದಲೂ ನೆಲದ ಮೇಲೆ ಕುಳಿತು ಅಭ್ಯಾಸವಿಲ್ಲದವರು. ಹೀಗಾಗಿ ಅವರ ಕೈಕಾಲಿನ ಕೀಲುಗಳು ಬಿಗಿದುಕೊಂಡಿರುವದರಿಂದ ಬೇಗನೆ ಮಡಿಚಲು ಕಷ್ಟಕರ. ಹೀಗಾಗಿ ಅವರಿಗೆ ನೆಲದ ಮೇಲೆ ಕೂಡುವದಾಗಲಿ, ಸಿದ್ಧಾಸನ-ಪದ್ಮಾಸನಗಳಲ್ಲಿ ಧ್ಯಾನ-ಪ್ರಾಣಾಯಾಮ ಮುಂತಾದುವನ್ನು ಅಭ್ಯಸಿಸುವುದಾಗಲಿ ತ್ರಾಸದಾಯಕ. ಮತ್ತು ಯೋಗಾಸನ ಕಲಿಸುವಾಗ ಒಮ್ಮೆಗೆ ಪಶ್ಚಿಮೋತ್ತಾನಸನ, ಚಕ್ರಾಸನ ಮುಂತಾದುವನ್ನು ಹೇಳಿಕೊಡುವುದು ಮೂರ್ಖತನ. ಆದ್ದರಿಂದ ಆಲೆನ್‌ರವರು ಹಂತಹಂತವಾಗಿ ಯೋಗಾಸನ ಹೇಳಿಕೊಡುವ ಪದ್ಧತಿ ಆರಂಭಿಸಿದರು. ಪರಿಣಾಮವಾಗಿ ಹತ್ತಾರು ಕೇಂದ್ರಗಳು ಲಂಡನ್ ನಗರದಲ್ಲಿ ನಡೆಯುತ್ತಿರುವದಷ್ಟೇ ಅಲ್ಲ. ಇಂಗ್ಲೆಂಡಿನ ತುಂಬ ಇವರ ಶಾಖೆಗಳಿವೆ. Albion yoga Movement ಎಂದು ಹೆಸರಾಗಿದೆ.

ಯಾವುದನ್ನಾದರೂ ಪಾಶ್ಚಿಮಾತ್ಯರು ಶಿಸ್ತಿಗೆ ಒಳಪಡಿಸಬಲ್ಲರು ಎಂಬುದಕ್ಕೆ ಈ ಯೋಗಶಾಲೆಯೊಂದು ನಿದರ್ಶನ. "ನಮ್ಮ ಪುರಾತನರು ವಿಮಾನದಲ್ಲಿ ಹಾರಾಡುತ್ತಿದ್ದರು; ಗಣಿತದಲ್ಲಿ ಮೊದಲಿಗರು, ಶಸ್ತ್ರ ಚಿಕಿತ್ಸೆಯಲ್ಲಿ ಬಹಳ ಪ್ರಗತಿ ಸಾಧಿಸಿದ್ದರು ಎಂದು ಸ್ವಪ್ರಶಂಸೆ ಮಾಡಿಕೊಳ್ಳುತ್ತೇವೆ ನಾವು. ಅದೇನೆ ಎಂತೇ ಇರಲಿ; ಈಗಂತೂ ಈ ಎಲ್ಲ ವಿದ್ಯೆಗಳನ್ನು ಆ ನಾಡಿನವರಿಂದ ಕಲಿಯುತ್ತಿದ್ದೇವೆ. ಪುಣ್ಯಕ್ಕೆ ನಮ್ಮ ಯೋಗ, ಭಾಷೆ, ಧರ್ಮಗಳನ್ನು ಅಲ್ಲಿನವರಿಂದ ಕಲಿಯುವಂತಾಗದಿದ್ದರೆ ಸ್ವಲ್ಪ ಮರ್ಯಾದೆ ಉಳಿದೀತು! ಈಗ ಆಕ್ಸ್‌ಫರ್ಡ್, ಲಂಡನ್ ಮುಂತಾದ ಅನೇಕ ವಿಶ್ವವಿದ್ಯಾಲಯಗಳಲ್ಲಿ ಸಂಸ್ಕೃತ ಕಲಿಸಲಾಗುತ್ತಿದೆ. ಆ ವಿದ್ವಾಂಸರು ಬೇರೊಂದು ತೆರನಾಗಿ ಭಾಷಾಧ್ಯಯನ ಮಾಡಿಸುತ್ತಿರುವರು. ವಿಭಕ್ತಿ ಪ್ರತ್ಯಯಗಳನ್ನು ಬಾಯಿಪಾಠ ಮಾಡಿಸಿ ಕಷ್ಟಪಡಿಸದೆ ಭಾಷೆಯನ್ನು ಕಲಿಸಿ ವ್ಯಾಕರಣ ಕಲಿಸುತ್ತಾರೆ. ಯಾವ ದೇಶದ ವಿಶಿಷ್ಟ ಮೌಲ್ಯಗಳನ್ನು, ಪದ್ಧತಿಗಳನ್ನೇ ಆಗಲಿ ಬೇರೊಂದು ಸರಳ ಚೌಕಟ್ಟಿಗೆ ತೊಡಿಸಿ, ಅನುಷ್ಠಾನಕ್ಕೆ ತರುತ್ತಾರೆ. ಉದಾಹರಣೆಗೆ ಕೃಷಿಕಾಯಕವನ್ನೇ ತೆಗೆದುಕೊಳ್ಳೋಣ. ಕೃಷಿ ಪ್ರಧಾನ ದೇಶವೆಂದು ಹೆಮ್ಮೆಯಿಂದ ಬೀಗುವ ಭಾರತವು, ಆ ರಂಗದಲ್ಲಿಯೂ ಪಾಶ್ಚಿಮಾತ್ಯರಿಂದಲೇ ಕಲಿಯುತ್ತಿದೆ. ಅದೇ ರೀತಿ ಅತ್ಯಂತ ವ್ಯವಸ್ಥಿತವಾಗಿ ಯೋಗಾಭ್ಯಾಸವನ್ನು ಜನಪ್ರಿಯ ಮಾಡುವ (ಕೇವಲ ಕೆಲವೊಮ್ಮೆ ವ್ಯಾಪಾರದ ಮಟ್ಟಕ್ಕಿಳಿಯುವ) ಪ್ರಯತ್ನ ಅಲ್ಲಿ ಆಗುತ್ತಿದೆ.

ಅಭ್ಯಾಸಿಗಳು ವಿಶಿಷ್ಟ ವೇಳೆಗೆ ಬರುತ್ತಾರೆ; ಬಂದವರೇ ಹರಟೆಗೆ ತೊಡಗದೆ ಮೌನವಾಗಿ ಆಸನಕ್ಕೆ ತೊಡಗುತ್ತಾರೆ. ಆ ಮಂದಿರದಲ್ಲಿ ಮೆಲ್ಲಗಿನ ಧ್ವನಿಯಲ್ಲಿ ಭಕ್ತಿರಸಪ್ರಚೋದಕ ವಾದ್ಯಗಾನದ ತಟ್ಟೆ ತಿರುಗುತ್ತ ಹಾಡುತ್ತಿರುತ್ತದೆ. ಇನ್ನೂ ಕಲಿಯುವ ಕಾಲದಲ್ಲಿ ಆ ವಾದ್ಯದ ನಾದವಿರದೆ, ಶಿಕ್ಷಕನು ಮಾತನಾಡಬೇಕಾಗುತ್ತಿರುತ್ತದೆ. ಸೂಕ್ತ ಸಲಹೆ ನೀಡಲು ಎಲ್ಲರೂ ಕಲಿತು ಅಭ್ಯಸಿಸುವಾಗ ವಾದ್ಯದ ಮೃದು ಮಧುರ ನಾದವನ್ನು ಆಲಿಸುತ್ತಾ ಸಾಧನೆಗೈಯುತ್ತಾರೆ. ಯೋಗಾಸನದ ನಂತರ ಪ್ರಾಣಾಯಾಮ, ವಿಶ್ರಾಂತಿ, ಧ್ಯಾನ, ಧ್ಯಾನದ ಆರಂಭದಲ್ಲಿ ಒಂದು ಆಧ್ಯಾತ್ಮಿಕ ಗೀತೆಯ ವಾದ್ಯನಾದ. ಇದಕ್ಕಾಗಿ ಕಠೋಪನಿಷತ್ತು ಮಂತ್ರಗಳ ಎಲ್.ಪಿ. ರೆಕಾರ್ಡ್ ಧ್ವನಿಮುದ್ರಿಸಿದ್ದಾರೆ. ನನಗೂ ಒಂದನ್ನು ಸಮರ್ಪಿಸಿದ್ದಾರೆ. ತಂಬೂರಿಯ ಶ್ರುತಿ, ವೀಣೆಯ ಉಲಿ ಎರಡೂ ಮನಸ್ಸಿನ ಮಗುವಿಗೆ ಲಾಲಿಹಾಡಿ ಸಂತೈಸುವಂತೆನಿಸುತ್ತದೆ.

ಹಾಡ್ತಾ ಹಾಡ್ತಾ ಧ್ವನಿಮುದ್ರಿಕೆ ನಿಲ್ಲಿಸಿ ಕೇವಲ ಧ್ಯಾನದಲ್ಲಿ ತೊಡಗುತ್ತಾರೆ. ಧ್ಯಾನದ ನಂತರ ಅತಿಥಿಗಳ ಪ್ರವಚನ. ಅದರ ನಂತರ ಚರ್ಚೆ, ಪ್ರಶ್ನೋತ್ತರ ಮುಗಿಯುತ್ತಿದ್ದಂತೆಯೇ ಎಲ್ಲರೂ ಚದುರಿ ಬಿಡುವರು. ಹರಟೆ, ಆಡಿಕೊಳ್ಳುವಿಕೆ,

ಕುಹಕ-ಕುತ್ಸಿತಗಳಿಗೆ ಅವಕಾಶವೇ ಇಲ್ಲ. ನಮ್ಮಲ್ಲಿಯೇ ಪ್ರಾರ್ಥನೆ-ಪ್ರವಚನ, ಪುರಾಣ-ಹರಿಕಥೆ ಒಂದು ಗಂಟೆಯಾದರೆ ಪರಸ್ಪರ ಆಡಿ-ತೋಡಿಕೊಳ್ಳುವ ಸುದ್ದಿ ವಿನಿಮಯಗಳಿಗೆ ಕನಿಷ್ಟ ಒಂದೂವರೆ ಗಂಟೆ ಇಲ್ಲದಿದ್ದರಾದೀತೆ? ಅಂದು ನಾನು ಯೋಗದ ಕಲ್ಪನೆ ಬಗ್ಗೆ ಮಾತನಾಡುತ್ತ ಯೋಗಿರಾಜನಾದ ಮಹಾವಿಭು ಶಿವನು ಯೋಗಶಾಸ್ತ್ರದ ಆದ್ಯಜನಕನು. ಭಾರತದ ವೈಶಿಷ್ಟ್ಯ ಕೊಡುಗೆಯಾದ ಯೋಗ ಅವನಿಂದಲೇ ಆರಂಭವಾಗಿ ಪುರಾತನ ಕಾಲದಿಂದಲೂ ಆಚರಣೆಯಲ್ಲಿದೆ. ಶಿವನು ಐತಿಹಾಸಿಕ ಮಹಾಪುರುಷ ಬುದ್ಧ, ಏಸುಕ್ರಿಸ್ತರಂತೆ, ಎಂಬ ವಿಷಯ ತಿಳಿಸಿದಾಗ ಮೈಯೆಲ್ಲ ಕಣ್ಣಾಗಿ ವಿದೇಶಿ ಶ್ರೋತೃಗಳು ಕೇಳಿದರು. ಆಲೆನ್‌ರವರ ಮುಖ ವಿನೂತನ ಪ್ರಕಾಶದಿಂದ ಬೆಳಗಿತು. ಸುಮಾರು ನಲವತ್ತು ವರ್ಷಗಳ ಭವ್ಯಾಕಾರದ ವ್ಯಕ್ತಿ. ನೀರಸವಾದ ಆಂಗ್ಲರ ಬಿಳುಪು ಬಣ್ಣಕ್ಕೆ ಯೋಗಸಾಧನೆಯ ಕಳೆ, ಬೇರೊಂದು ಕಾಂತಿಯನ್ನು ನೀಡಿತ್ತು. ಉಕ್ಕಿನ ಮನುಷ್ಯನಂತೆ ಕಾಣುವ ಅವನು ಹಠಯೋಗ ಸಾಧಿಸಬಹುದಾದ ಸಿದ್ಧಿಗೆ ಜೀವಂತ ನಿದರ್ಶನವಾಗಿದ್ದ. ಕಾಂತಿಯುಕ್ತ ನಿಶ್ಚಲ ಕಣ್ಣುಗಳು ಅಂತರಂಗದ ಸಂಕಲ್ಪ ಶಕ್ತಿಯ ಪ್ರತೀಕಗಳಾಗಿದ್ದವು. ಇಷ್ಟೆಲ್ಲ ಸಿದ್ಧಿ, ಜನಪ್ರಿಯತೆ, ಪ್ರಚಾರ ಎಲ್ಲ ಪಡೆದಿದ್ದರೂ ಸ್ವಲ್ಪವಾದರೂ ಠೇಂಕಾರವಿಲ್ಲ. ವಿನಯ-ಸೌಜನ್ಯಗಳ ವಾಹಿನಿಗಳು ಮುಖದಲ್ಲಿ ಸಂಗಮಿಸಿದ್ದವು. "ನಮ್ಮಲ್ಲಿ ಸ್ವಲ್ಪ ಜನಪ್ರಿಯತೆ ಬಂದರೆ ಅಥವಾ ಏನು ಬೇಡ ಒಂದು ಚೂರು ಕಾವಿ ತೊಟ್ಟರೆ ಒಂದು ಸಾಮಾನ್ಯ ದಿಕ್ಕೇಡಿ ಮಠಕ್ಕೆ ಅಧಿಕಾರಿಯಾಗಿಬಿಟ್ಟರೆ, ವಿಲಕ್ಷಣ ಅಹಂನಿಂದ ಬೀಗುವ ಜನರೆಲ್ಲಿ ಈತ ಎಲ್ಲಿ" ಎಂದು ಆಶ್ಚರ್ಯವೆನಿಸದಿರದು.

ಅಲೆನ್ ಬಾಬ್ಬಿಂಗ್ ಟನ್ ಕುತೂಹಲದಿಂದ ನುಡಿದರು: "ಹಿಂದೂ ತತ್ತ್ವ ಜ್ಞಾನ-ಅನುಭವಗಳನ್ನು ಪುರಾಣೀಕರಿಸಿ ಬಗ್ಗಡಮಾಡಿ ಹೇಳುವ ಜನರನ್ನು ಕಂಡು ಬೇಸರವಾಗುತ್ತಿತ್ತು. ನಮಗದು ಬೇಕಿಲ್ಲ. ಫಿಲ್ಟರ್ (ಶುದ್ಧೀಕರಣ) ಆಗಿ ಬರಬೇಕಾಗಿದೆ. ತಾವು ಆ ಕಾರ್ಯ ಸಮರ್ಪಕವಾಗಿ ಮಾಡುತ್ತಿರುವಿರಿ. ನಾವು ಇಲ್ಲಿಯ ತನಕ ಗಂಗೆ-ಗೌರಿ ವಲ್ಲಭನಾದ ಶಿವನು ಕೇವಲ ಪೌರಾಣಿಕ ಕಲ್ಪನೆ (Mythological) ಎಂದುಕೊಂಡಿದ್ದೆವು. ಆಗ ನಾನು ಶಿವನು ಐತಿಹಾಸಿಕ ವ್ಯಕ್ತಿಯೆಂದು ಗೌರಿಶಂಕರ ಪ್ರದೇಶದಲ್ಲಿ ಮುಖ್ಯವಾಗಿದ್ದು ಶಿವರಾಜ್ಯವನ್ನು (ಹಿಮಾಲಯ)ಆಳುತ್ತಿದ್ದ. ಯೋಗದಲ್ಲಿ ಬಲ್ಲಿದನಾದ ಯೋಗಿರಾಜನು, ನರ್ತನದಲ್ಲಿ ಪಟುವಾದ ನಾಟ್ಯಯೋಗಿಯು ಗಾಯನದಲ್ಲಿ ಪರಿಣಿತನಾದ ನಾದಲೋಲನು ಎಂದು ವಿವರಿಸಿದಾಗ ಶ್ರೋತೃಗಳು ಆನಂದತುಂದಿಲರಾದರು. ಮತ್ತೊಮ್ಮೆ ತಮ್ಮ ಕೇಂದ್ರಕ್ಕೆ ಬರಬೇಕೆಂದು ಬಿನ್ನೈಸಿಕೊಂಡರು. ಸಂತಸದಿಂದ ಒಪ್ಪಿದೆ.

ಆಗಸ್ಟ್ ಒಂಡರಂದು ಸನಾತನ ಧರ್ಮ ಮಿಷನ್‌ನವರು ನನಗೆ ಮತ್ತು

ಮಾ ಯೋಗಶಕ್ತಿಗೆ ಆಮಂತ್ರಣ ನೀಡಿದ್ದರು. ಭಾರತದಿಂದ ಬರುವ ಸಾಧು ಸಂತರನ್ನು ಕರೆದು, ಗೌರವಿಸಿ ಅವರ ವಾಣಿಯನ್ನು ಕೇಳುವುದು ಅವರ ಪರಿಪಾಠ. ಇದು ನಿಜಕ್ಕೂ ಮೆಚ್ಚುಗೆಯಾಯ್ತು ನನಗೆ. ಏಕೆಂದರೆ ನಮ್ಮ ಸಮಾಜದಲ್ಲಿ ಓರ್ವಗುರುಗಳ ಶಿಷ್ಯರಾದ ಮಾತ್ರ ಇನ್ನೊಬ್ಬ ಗುರುಗಳನ್ನು ಗೌರವಿಸದಿರುವುದು; ಅನೇಕ ಬಾರಿ ಅಗೌರವಿಸುವುದು, ಪ್ರಸಂಗ ಹುಡುಕಿಕೊಂಡು ದ್ವೇಷಿಸುವದು ಬಹಳ ಸ್ವಾಭಾವಿಕ. ಒಂದು ಊರಿನಲ್ಲಿ ಪ್ರವಚನ ಮಾಡಿಸಬೇಕೆಂದು ಒಬ್ಬ ಮುಖಂಡರು ನಿರ್ಣಯಿಸಿ ಆಮಂತ್ರಿಸಿದ್ದರು. ಕರಪತ್ರ ಮುದ್ರಿಸಿ ಹಂಚಿದ್ದರೂ ಕೂಡ. ಅಷ್ಟರಲ್ಲಿ ಇವರೇ ಮುಂದಾಳತ್ವ ವಹಿಸಿರುವದು ಅವರ ಮನೆ ಗುರುಗಳಿಗೆ ಗೊತ್ತಾಗಿ ಅವಸರದ ಆಜ್ಞೆ ಬಂದಿತು. "ಎಲ್ಲಿ ಅವರ ಪ್ರತಿಭೆ ಬೆಳಕಿಗೆ ಬಂದು ತಮ್ಮ ಪ್ರಭಾವ ಕುಂಠಿತವಾದೀತೋ" ಎಂಬ ಭಯದಿಂದ, ಕಾರ್ಯಕ್ರಮ ರದ್ದುಪಡಿಸಲು ಸೂಚನೆ ನೀಡಿದರು. ತನ್ನ ಶಿಷ್ಯ ತನ್ನ ಸೊತ್ತು, ಆ ಕುರಿ ಎಂಥದೇ ಪ್ರಸಂಗದಲ್ಲಿ ತಪ್ಪಿಸಿಕೊಳ್ಳಬಾರದೆಂಬ ಕುತಂತ್ರ ಗುರುವಿನದಾದರೆ ಇಂಥ ಮತ್ಸರ, ಅನ್ಯರ ಪ್ರಗತಿ ಸಹಿಸಿಕೊಳ್ಳಲಾರದವನು ಗುರುವು ಹೌದೇ ಅಲ್ಲವೇ ಎಂಬ ಪಾರತಂತ್ರ್ಯ ಬುದ್ಧಿ ಶಿಷ್ಯನದು. ಅಂತೂ ಈ ಸಮಾಜದ ಪರಿಸ್ಥಿತಿ ಬಳ್ಳಿಗುರುಡರು ಸೇರಿ ಹಳ್ಳವನು ಬಿದ್ದಂತೆ. ತನಗೆ ದೀಕ್ಷೆ ನೀಡಿದ ಗುರು ದೀಕ್ಷಾ ಗುರು, ಉಳಿದವರು ಜ್ಞಾನಗುರುಗಳು ಎಂಬ ವಿಶಾಲ ಭಾವನೆಯಾಗಲಿ,

ಊರಿಂಗೆ ದಾರಿಯನು ಯಾರು ತೋರಿದರೇನು
ಸಾರಾಯಮಪ್ಪ ಮತವನರುಹುವ ಗುರು
ಯಾರಾದಡೇನು ಸರ್ವಜ್ಞ ||

ಎಂಬ ಗುಣಗ್ರಾಹಕ ದೃಷ್ಟಿಯಾಗಲಿ ಇಲ್ಲ. ಜಾತಿ ಪದ್ಧತಿಯ ವಿಷಗಳ್ಳಿ ಸಾಮಾನ್ಯ ಲೌಕಿಕರಲ್ಲಿ ಕಾಣುವುದು ಹೋಗಲಿ, ಗುರುಗಳಲ್ಲೂ ಅದನ್ನೇ ಅರಸಿದರೆ ಎಂಥ ಅಪ್ರಬುದ್ಧ ಸಮಾಜವಾದೀತು! ತನಗೆ ಸೀಮಿತ ಸಂಬಂಧ ಬೇಡವೆಂದೇ ಗುರುತ್ವದ ಪದವಿಗೇರಿರುವವನನ್ನು ಜಾತಿ ದೃಷ್ಟಿಯಿಂದ ಗೌರವಿಸುವುದು ಎಷ್ಟು ಹಾಸ್ಯಾಸ್ಪದ. ಉತ್ತರ ಭಾರತೀಯ ಹಿಂದುಗಳು ಕಾಷಾಯ ವಸ್ತ್ರ ಧರಿಸಿದ ಎಲ್ಲರನ್ನು ಗೌರವಿಸುವ ದೃಷ್ಟಿ ತಳೆದಿದ್ದಾರೆ ವಿನಾ ಇವನು ಯಾವ ಜಾತಿಯ ಸ್ವಾಮಿ ಎಂದು ಪ್ರಶ್ನಿಸಿ.. ಅದನ್ನು ತಿಳಿಯುವ ಗೊಡವೆಗೂ ಹೋಗರು.

ಮಾ ಯೋಗಶಕ್ತಿಯವರು ಮತ್ತು ನಾವು ರಾಮನಾಥ ಎಂಬುವ ವ್ಯಾಪಾರಸ್ಥರ ಕಾರಿನಲ್ಲಿ ಚಾಡ್‌ವೆಲ್‌ಹೀತ್ ಕಡೆಗೆ ಸಾಗಿದೆವು. ಶ್ರದ್ಧಾ-ಭಕ್ತಿ ಪೂರ್ಣವಾದ, ವೈಭವಪೂರಿತ ಸ್ವಾಗತ ದೊರೆಯಿತು. ಉಭಯತರ ಪಾದಗಳನ್ನು ಸ್ಪರ್ಶಿಸಿ ಗುಲಾಬಿ ದಳಗಳ ಮಾಲೆಗಳನ್ನರ್ಪಿಸಿ ಸಂಸ್ಥೆಯವರು ಬರಮಾಡಿಕೊಂಡರು.

(ಸಶೇಷ)

ಹೆಸರು ನೋಂದಾಯಿಸಿ !

—ಗೊ. ರು. ಚ.

ನಾವೊಂದು ಹೊಸ ಸಂಘ ಕಟ್ಟಿದ್ದೇವೆ,
ಅದಕ್ಕಿನ್ನೂ ಹೆಸರಿಟ್ಟಿಲ್ಲ.
ಸದಸ್ಯ ಸಂಗ್ರಹಣೆಗೆ, ಉದ್ದೇಶ
ವಿವರಣೆಗೆ
ಈಗ ತಾನೇ ಆರಂಭಿಸಿದ್ದೇವೆ.
ನಮ್ಮ ಸಂಘದ ಧ್ಯೇಯೋದ್ದೇಶಗಳೆಲ್ಲ
ಸಂಪೂರ್ಣ ಹೊಸದು !
ನಿಮಗೆ ಮನವರಿಕೆಯಾದರೆ
ಬನ್ನಿ, ಹೆಸರು ನೋಂದಾಯಿಸಿ,;
ನಿಮ್ಮ ಜೊತೆಯವರನ್ನೂ ಸೇರಿಸಿ !
ನಮ್ಮ ಸಂಘದಲ್ಲಿ.
ಅಜೀವ ಸದಸ್ಯರಿಗೆ ಅವಕಾಶವೇ ಇಲ್ಲ;
ಬೇಕಾಗಿರುವುದೆಲ್ಲ ಜೀವ(ಂತ)
ಸದಸ್ಯರು !
ಗೊತ್ತು ಮಾಡಿರುವ ಪ್ರವೇಶ ಶುಲ್ಕ
ಹೆಚ್ಚೇನಿಲ್ಲ, ಬರಿ 'ಇಚ್ಛೆ' !
ಇನ್ನು ಧ್ಯೇಯೋದ್ದೇಶ—
(aims and objectives)
"ಹತ್ತು ಜನ ಒಪ್ಪುವಂತೆ
ಅಚ್ಚು ಕಟ್ಟಾಗಿ 'ಸಾಯು'ವುದು !"
(ಸಾಯಿಸುವ ತಜ್ಞರೇ ನಮ್ಮಲ್ಲಿ
ದ್ದಾರೆ;
ಎಷ್ಟು ಜನರಿದ್ದರೂ
ಸಾಯಿಸಲು ಒಪ್ಪಿದ್ದಾರೆ !
ಅದಕ್ಕೆ ಮಾತ್ರ ಒಂದಿಷ್ಟು ಫೀಸು
ಕೊಡಬೇಕು:—
ಅದೂ ಹೆಚ್ಚಿಲ್ಲ; ಬರಿ ಕೆಚ್ಚು;
ಇಲ್ಲ ಹುಚ್ಚು!
ನಮ್ಮ ಧ್ಯೇಯೋದ್ದೇಶದ 'ಸಾವು'.
ಕಾಯದ ಕಣ್ಮರೆಯಲ್ಲ !
ಕಾಯದ ಅವಗುಣಗಳ ಕಣ್ಮರೆ)
ನಮ್ಮ ಸಂಘದಲ್ಲಿ ನೀವು
ಒಮ್ಮೆ ಸತ್ತಿರೆಂದರೆ,
ನಿಮಗೆ ಸಾವು ಸಮಸ್ಯೆಯೇ ಅಲ್ಲ ;
ಹೆಚ್ಚೇನು ? ನೀವು "ಸಾಯುವುದೇ
ಇಲ್ಲ!
ಇದೊಂದು ವಿಶೇಷ ಅವಕಾಶ !
ನಿಮ್ಮನ್ನೆಲ್ಲ ಸೇರಿಸಿಕೊಳ್ಳಬೇಕೆಂಬುದೇ
ನಮ್ಮ ಉದ್ದೇಶ.
ಇನ್ನೂ ನಿಮಗೆ ಅನುಮಾನವಿದ್ದರೆ
ಒಮ್ಮೆ ನಮ್ಮ ಸಂಘಕ್ಕೆ ಬನ್ನಿ ;
ಈಗಾಗಲೇ ಸತ್ತವರ ನೋಡಿ !
ಅಂತೂ ವಿಚಾರ ಮಾಡಿ ;
ನಿಮಗೆ ಮನವರಿಕೆಯಾದರೆ
ಬನ್ನಿ ; ಹೆಸರು ನೋಂದಾಯಿಸಿ !

* * *

ಲೋಕಪ್ರಜ್ಞೆಯ ಕರ್ಮಯೋಗಿ
ದೇಶಹಳ್ಳಿ ಜಿ. ನಾರಾಯಣ

—ಗೊ. ರು. ಚನ್ನಬಸಪ್ಪ

"ಅವರನ್ನು ಪೂರ್ಣ ನಂಬಬೇಡ; ಏಕೆಂದರೆ ಅವರು ಶೇಕಡ ೫೦ರಷ್ಟು ಮಾತ್ರ ಒಳ್ಳೆಯವರು. ಇವರನ್ನು ಪೂರ್ಣ ನಿಂದಿಸಬೇಡ; ಏಕೆಂದರೆ ಇವರು ಶೇಕಡ ೫೦ರಷ್ಟು ಮಾತ್ರ ಕೆಟ್ಟವರು."

—ಸದ್ಗುರು ಓಂಕಾರ್

ಇಬ್ಬರೂ ಪೂರ್ಣ ಒಳ್ಳೆಯವರಲ್ಲ. ಪ್ರತ್ಯೇಕವಾಗಿ ಇವರಿಂದ ಪೂರ್ಣ ಒಳ್ಳೆಯ ಕೆಲಸ ಸಾಧ್ಯವಿಲ್ಲ. ಆದರೆ ಶೇಕಡ ೫೦ ರಷ್ಟಿರುವ ಅವರ ಕೆಟ್ಟುದನ್ನು ಕೈಬಿಟ್ಟು, ಶೇಕಡ ೫೦ ರಷ್ಟಿರುವ ಇವರ ಒಳ್ಳೆಯದನ್ನು ಕೈಗೆತ್ತಿಕೊಂಡರೆ ಇಬ್ಬರಲ್ಲಿರುವ ಒಳ್ಳೆಯದೂ ಒಟ್ಟಿಗೆ ಸೇರುತ್ತದೆ. ಆಗ ಶೇಕಡ ೧೦೦ರಷ್ಟು ಕೆಲಸ ಸಾಧ್ಯವಾಗುತ್ತದೆ.

ಇಂತಹ ಸಾಧನೆಗೆ ಒಳ್ಳೆಯದನ್ನು ಗುರುತಿಸುವ ಗುಣ, ಸಂಘಟನೆಯ ಸಾಮರ್ಥ್ಯ, ನಿರ್ವಹಣೆಯ ನಿಷ್ಠೆ ಇವುಗಳ ಸೂಕ್ಷ್ಮ ಪ್ರಜ್ಞೆ ಬೇಕು; ಏರುಪೇರಿಲ್ಲದೆ ತಕ್ಕಡಿಯನ್ನು ಹಿಡಿಯುವ ಪ್ರಾಮಾಣಿಕತೆ ಬೇಕು. ಎಲ್ಲಕ್ಕಿಂತ ಮಿಗಿಲಾಗಿ ಒಳ್ಳೆಯದನ್ನು ಸಾಧಿಸುವ ಶ್ರದ್ಧೆ ಬೇಕು. ಲೋಕ ವ್ಯವಹಾರವೆಂದರೆ ಅದು.

ಅಂತಹ ಲೋಕವ್ಯವಹಾರದವರು ಶ್ರೀ ದೇಶಹಳ್ಳಿ ಜಿ. ನಾರಾಯಣ. ಸಾಮಾಜಿಕ ಕ್ಷೇತ್ರದಲ್ಲಿ ಇಂತಹವರು ವಿರಳ. ವ್ಯಕ್ತಿ ಬಲು ಸರಳ.

ಸಾಗರದಂತೆ

ನಾರಾಯಣ ಅವರು ನೋಟಕ್ಕೆ ಸರ್ವ ಸಾಧಾರಣ ವ್ಯಕ್ತಿ. ಆದರೆ ಅವರೇ ಒಂದು ಸಂಘಶಕ್ತಿ ! ಸಾರ್ವಜನಿಕ ಬದುಕಿನೊಡನೆ ಸುಮಾರು ೩೫ ವರ್ಷಗಳ ನಂಟು. ಕೆಲಸ ಮಾಡದಿದ್ದರೆ ಕಾಯಿಲೆ ಎನ್ನುವ ಈ ವ್ಯಕ್ತಿ ಬಿಡುವಿಲ್ಲದೆ ದುಡಿದು ಹಾಸಿಗೆ ಹಿಡಿದುದೂ ಉಂಟು ! ಮನದಲ್ಲಿ ಸದಾ ಶಾಂತಿ; ಕೃತಿಯಲ್ಲಿ ಭ್ರಾಂತಿಯಿಲ್ಲದ ಮೌನ ಕ್ರಾಂತಿ ! ತನ್ನ ಗರ್ಭದಲ್ಲಿ ಏನೆಲ್ಲ ಅಡಗಿಸಿಕೊಳ್ಳಬಲ್ಲ ಸಾಗರದಂತೆ ಶ್ರೀ ನಾರಾಯಣ!

ಕಾಲಿಡುವ ಮುನ್ನ ನೂರು ಬಾರಿ ಎಣಿಸುವ ಮುನ್ನೆಚ್ಚರ ; ಕಾಲಿಟ್ಟಮೇಲೆ ಕಲ್ಲು ಮುಳ್ಳಿದ್ದರೂ ಲೆಕ್ಕಿಸದ ಗಣಾಚಾರ ! 'ಅನುಭವದ ಅಲಗ ಅವಧಾನ ತಪ್ಪದೆ ಹಿಡಿವ ಭೃತ್ಯಾಚಾರ'! ಅದ್ಭುತ ಸನ್ನಿವೇಶ ಪ್ರಜ್ಞೆ. ಆ ಪ್ರಜ್ಞೆಯ ಸುತ್ತೇ ಅವರ ವ್ಯವಹಾರ—ಆಕ್ಸಿಲ್‌ಗೆ ಕೂಡಿಕೊಂಡು ಸುತ್ತುವ ಚಕ್ರದಂತೆ !

ಶ್ರೀ ನಾರಾಯಣ ಮಂಡ್ಯ ಜಿಲ್ಲೆಯ ಮದ್ದೂರು ತಾಲೂಕಿನವರು. ದೇಶಹಳ್ಳಿಯಲ್ಲಿ ಹುಟ್ಟಿದವರು (ಈಗ ದೇಶಕ್ಕೇ ಬೇಕಾದವರು !) ಅವರ ತೊಟ್ಟಿಲು ತೂಗಿದುದು ಸಾಮಾನ್ಯ ರೈತ ಕುಟುಂಬ. ಲಾಲಿ ಹಾಡಿದುದು ಹೊಲ ಗದ್ದೆಗಳ ಮೇಲೆ ಬೀಸಿದ ಗಾಳಿ (ಇದಕ್ಕಿಂತ ಹೆಚ್ಚೇನು ಬೇಕು ಹೇಳಿ!) ಹುಟ್ಟಿದ ವರ್ಷ ೧೯೨೪.

ಹೋರಾಟಗಾರ

ಚನ್ನಪಟ್ಟಣದಲ್ಲಿ ಹೈಸ್ಕೂಲ್ ವಿದ್ಯಾರ್ಥಿಯಾಗಿದ್ದಾಗಲೇ ಸ್ವಾತಂತ್ರ್ಯ ಚಳುವಳಿಯಲ್ಲಿ ಪ್ರವೇಶ. ಶಾಲೆಗೆ ಶರಣು. ಹಿರಿಯ ರಾಜಕಾರಣಿ ಹೆಚ್. ಕೆ. ವೀರಣ್ಣಗೌಡರ ಮಾರ್ಗದರ್ಶನ. ಮಹಾತ್ಮ ಗಾಂಧಿ ಅವರ ತತ್ತ್ವಗಳ ಅಧ್ಯಯನ. "ಕ್ವಿಟ್ ಇಂಡಿಯಾ" ಚಳುವಳಿಯಲ್ಲಿ ಕ್ರಿಯಾತ್ಮಕ ಪಾತ್ರ. ಪರಿಣಾಮವಾಗಿ ಬೆಳಗಾವಿ ಜೈಲಿನಲ್ಲಿ ಆತಿಥ್ಯ. ಹುಟ್ಟು ಹೋರಾಟಗಾರ ನಾರಾಯಣ ಅವರಿಗೆ ಜೈಲುವಾಸ ಬಂಧನವಾಗಲಿಲ್ಲ; ಹೊಸ ವಿಚಾರ ಮಂಥನಕ್ಕೆ ಸ್ಫೂರ್ತಿ ನೀಡಿತು. ಗಾಂಧೀಜಿ ಅವರ ರಚನಾತ್ಮಕ ಕಾರ್ಯಗಳತ್ತ ಒಲವು ಮೂಡಿಸಿತು.

ಶ್ರೀ ನಾರಾಯಣ ನಿಷ್ಠಾವಂತ ಕಾಂಗ್ರೆಸಿಗರಾಗಿ ಮುವ್ವತ್ತು ವರ್ಷ ದುಡಿದಿದ್ದಾರೆ. ಹಳೆಯ ಮೈಸೂರಿನಲ್ಲಿ ಜವಾಬ್ದಾರಿ ಸರ್ಕಾರಕ್ಕಾಗಿ ಹೋರಾಟ ನಡೆಯುತ್ತಿದ್ದಾಗ ಹಗಲಿರುಳೆನ್ನದೆ ಕಾಂಗ್ರೆಸ್ ಕಛೇರಿಯಲ್ಲಿ ಕೆಲಸ ಮಾಡಿದ್ದಾರೆ. ಆಗಿನ ಹೋರಾಟದ ಮುಖವಾಣಿಯಾಗಿದ್ದ "ವಾರ್ತಾ" ಪತ್ರಿಕೆಗೆ ಅವರೇ ಮ್ಯಾನೇಜರ್.

ಸ್ವಾತಂತ್ರ್ಯಾನಂತರ ಜೊತೆಯ ಕೆಲವು ಹೋರಾಟಗಾರರು ತಮ್ಮ ಹೋರಾಟಕ್ಕೆ "ಪ್ರತಿಫಲ" ಪಡೆಯುವ ಗಡಿಬಿಡಿಯಲ್ಲಿದ್ದಾಗ, ಈ ಸೌಜನ್ಯದ ವ್ಯಕ್ತಿ ಯಾವ ಸದ್ದುಗದ್ದಲವೂ ಇಲ್ಲದೆ ಚಾಮರಾಜಪೇಟೆಯಲ್ಲಿ ಸಣ್ಣ ಮುದ್ರಣಾಲಯವೊಂದನ್ನು ಆರಂಭಿಸುವ ಕೆಲಸದಲ್ಲಿ ತೊಡಗಿದ್ದರು. ಆಗ ಸರ್ಕಾರ ನಡೆಸುತ್ತಿದ್ದ ಪ್ರಮುಖರೆಲ್ಲರ ಪರಿಚಯವೂ ಇತ್ತು. ಆದರೆ ಅದರ 'ಲಾಭ' ಪಡೆಯಲು ಹೋಗಲಿಲ್ಲ.

ಸ್ವಾಭಿಮಾನಿ

ನಾರಾಯಣ ಸ್ವಾಭಿಮಾನಿ. ಹಿರಿದಾಗಿ ದೇಶಾಭಿಮಾನಿ. ಪ್ರಜಾಪ್ರಭುತ್ವದಲ್ಲಿ ಅಚಲ ವಿಶ್ವಾಸ. "ವ್ಯಕ್ತಿಗೆ ಘನತೆ-ಗೌರವಗಳು ಬರುವುದು ಅಧಿಕಾರದಿಂದಲ್ಲ ; ಆತನು ಸಲ್ಲಿಸುವ ಸೇವೆಯಿಂದ" ಎನ್ನುವ ಸಿದ್ಧಾಂತ!

ರಾಜಕಾರಣಿಯಾದರೂ ರಾಜಕಾರಣವನ್ನು ಜನಸೇವೆಗೆ ಪಳಗಿಸಿದ ಜಾಣ್ಮೆ. ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಅಧಿಕಾರ ಅಥವಾ ಸ್ಥಾನಮಾನದ ಸರ್ಪ ಕಚ್ಚಿದರೆ ಬಲು ಕಷ್ಟ. ಆದರಿಂದ ಅಹಂಕಾರದ ಅಮಲು ತಲೆಗೇರುತ್ತದೆ. ಮುಂದಾಲೋಚನೆ ಮರೆಯಾಗುತ್ತದೆ. ಆದರೆ ನಾರಾಯಣ ಇದಕ್ಕೆ ಅವಕಾಶ ಕೊಡಲಿಲ್ಲ. ಅಧಿಕಾರಕ್ಕೆ ಆಳಾಗಲಿಲ್ಲ ; ಸ್ಥಾನಮಾನಕ್ಕೆ ಸೋಲಲಿಲ್ಲ. ಅವರ ಬದುಕಿನಲ್ಲಿ ಅಧಿಕಾರವೇ ಅವರಿಗೆ ಆಳಾಗಿ ದುಡಿದಿದೆ ; ಸ್ಥಾನಮಾನವೇ ಶರಣಾಗಿದೆ!

ಬೆಂಗಳೂರು ನಗರ ಕಾರ್ಪೊರೇಷನ್ನಿಗೆ ನಾರಾಯಣ ಅವರಿಂದ ಸಂದ ಸೇವೆ ಸ್ಮರಣೀಯ. ಕಾರ್ಪೊರೇಷನ್ "ವರ್ಕ್ಸ್ ಕಮಿಟಿ" ಅಧ್ಯಕ್ಷತೆ ಸಾಮಾನ್ಯವಾಗಿ ವರ್ಷಕ್ಕೊಮ್ಮೆ ಬದಲಾವಣೆ. ಆದರೆ ನಾರಾಯಣರ ಅವಧಿ ನಾಲ್ಕು ವರ್ಷ. ಆ ಅವಧಿಯಲ್ಲಿ ನಗರಾಭಿವೃದ್ಧಿ ಕಾಮಗಾರಿ ವ್ಯವಸ್ಥೆಯಲ್ಲಿ ಹೊಸ ತಿರುವು. ಪ್ರತಿನಿಧಿ, ಅಧಿಕಾರಿಗಳ ಸಮನ್ವಯ. ವಿಭಾಗವಾರು ಯೋಜಿತ ಕಾರ್ಯಾನುಸರಣೆ. "ಮುಚ್ಚಿದ ಗುಂಡಿಯನ್ನೇ ಮತ್ತೆ ಮುಚ್ಚಿ ಬಿಲ್ ಮಾಡುವ ಕಾಮಗಾರಿ ಸಂಪ್ರದಾಯ"ಕ್ಕೆ ಕೊಡಲಿಪೆಟ್ಟು !

ಅವರು ಜಾರಿಗೆ ತಂದ ಕ್ರಮದ ಬಗ್ಗೆ "ಲಕ್ನೋ ಬುಲೆಟಿನ್"ನಲ್ಲಿ ಪ್ರಶಂಸೆಯ ಪ್ರಸ್ತಾಪ. ಅಖಿಲ ಭಾರತ ಮೇಯರುಗಳ ಸಮ್ಮೇಳನದಲ್ಲಿ ಮುಕ್ತಕಂಠದ ಸ್ವಾಗತ.

ಹೊಸ ಸಂಪ್ರದಾಯ

ಬೆಂಗಳೂರು ನಗರಕ್ಕೆ ಕಾವೇರಿಯನ್ನು ಕರೆತರುವಲ್ಲಿ ನಾರಾಯಣರ ಪ್ರಯತ್ನ ಕಡಮೆಯೇನಲ್ಲ. ಕಾವೇರಿ ಯೋಜನೆಗೆ ಅಡಿಪಾಯ ಬಿದ್ದಾಗ ಅವರೇ ಮೇಯರ್. ನಗರದ ಪ್ರಮುಖ ರಸ್ತೆಗಳಿಗೆ ಕನ್ನಡದ ಹಿರಿಯ ಸಾಹಿತಿಗಳ ನಾಮಕರಣ, ನಗರ ಮಹಾಸಭೆಯ ಕಾರ್ಯಾಲಯದ ಮುಂದೆ ಇತಿಹಾಸ ಪುರುಷ ಕೆಂಪೇಗೌಡರ ಪ್ರತಿಮೆಯ ಅನಾವರಣ, ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರಿಗೆ ಪೌರ ಸನ್ಮಾನ—ಹೀಗೆ ಅನೇಕ ಹೊಸ ಸಂಪ್ರದಾಯಗಳಿಗೆ ಕಾರಣ ಶ್ರೀ ನಾರಾಯಣ.

ನಗರ ಕಾರ್ಪೊರೇಷನ್ ಸೇವೆಯಲ್ಲಿ ಪಡೆದ ಅನುಭವ ಅಪಾರ. ಏಕಕಾಲದಲ್ಲಿ ಜನತೆ ಮತ್ತು ಅಧಿಕಾರಿಗಳೊಡನೆ ವ್ಯವಹಾರ. ಕರ್ನಾಟಕ ಗಡಿ ಕ್ರಿಯಾ ಸಮಿತಿ, ಬೆಂಗಳೂರು ಮೆಟ್ರೋ ಪಾಲಿಟನ್ ಮಂಡಳಿ, ಕನ್ನಡ ಭಾಷಾಭಿವೃದ್ಧಿ ಸಮಿತಿ, ಸರ್ಕಾರದ ನಾನಾ ಸಮಿತಿಗಳೇ ಅಲ್ಲದೆ ಮೈಸೂರು, ಬೆಂಗಳೂರು ವಿಶ್ವವಿದ್ಯಾನಿಲಯಗಳಲ್ಲಿ ಅವರ ಸೇವೆ ಸಂದಿದೆ. ಮುಖ್ಯರಾಗಿ, ಪೋಷಕರಾಗಿ, ಸದಸ್ಯರಾಗಿರುವ ಸ್ವಯಂ ಸೇವಾ ಸಂಘ ಸಂಸ್ಥೆಗಳೂ ಸಾಕಷ್ಟಿವೆ. ಎಲ್ಲ ಕಡೆಯೂ ಇವರಿಗೆ ಗೌರವದ ಸ್ಥಾನಮಾನ. ಯಾವುದರಲ್ಲೂ, 'ಹೆಸರಿಗೆ ಮಾತ್ರ' ಇದ್ದವರಲ್ಲ.

ಪತ್ರಿಕೋದ್ಯಮಿ

ಅವರು ಪತ್ರಿಕೋದ್ಯಮಿಗಳೂ.ಹೌದೆಂದರೆ ಸೋಜಿಗವೆನಿಸಬಹುದು. "ವಿನೋದ" -ಪತ್ರಿಕೋದ್ಯಮಕ್ಕೆ ಅವರು ನೀಡಿರುವ ಕಾಣಿಕೆ. ೧೯೫೦ರಷ್ಟು ಹಿಂದೆಯೇ ಪ್ರಕಟಣೆಯ ಆರಂಭ. ಅಂದಿನಿಂದ ಅವರೇ ಸಂಪಾದಕರು ಮತ್ತು ಪ್ರಕಾಶಕರು. "ವಿನೋದ" ಹಾಸ್ಯಕ್ಕಾಗಿ ಮೀಸಲಾದ ಮಾಸಪತ್ರಿಕೆ. ಹುಟ್ಟಿದಂದಿನಿಂದ ಒಂದು ಸಂಚಿಕೆಯೂ ತಪ್ಪದಂತೆ ಬೆಳೆದು, ಬೆಳ್ಳಿಹಬ್ಬ ಆಚರಿಸಿದ ಹೆಗ್ಗಳಿಕೆ. ಕನ್ನಡದಲ್ಲಿ ಸಧ್ಯಕ್ಕೆ ಇದೊಂದೇ ಹಾಸ್ಯ ಪತ್ರಿಕೆ.

ಗಂಭೀರವಾಗಿ ಕಂಡರೂ ನಾರಾಯಣ ಅವರು ವಿನೋದಪ್ರಿಯರೆಂಬುದಕ್ಕೆ 'ವಿನೋದ'ವೇ ಸಾಕ್ಷಿ. "ನಿಮ್ಮ ಪತ್ರಿಕೆ ಹೆಚ್ಚು ಪುಟಗಳಿಂದ ಮೈ ತುಂಬಿ ಬರಲಿ" ಎಂದರೆ, "ನೋಡಿದವರಿಗೆ ನಗೆ ಬರಬೇಕಾದರೆ ಬಡಕಲಾಗೇ ಇರಬೇಕು" ಎನ್ನುವ ವಿನೋದ !

ಪರಿಷತ್ತಿನ ಅಧ್ಯಕ್ಷತೆ

ಬೇರಾವ ಕ್ಷೇತ್ರದಲ್ಲಿ ನಾರಾಯಣರ ಸೇವೆ ಏನೇ ಇರಲಿ, ಅದೆಲ್ಲಕ್ಕೂ ಹೊನ್ನ ಕಳಶ-ಅವರು ನಿರ್ವಹಿಸಿದ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷತೆ. ಅವರ ಪ್ರಯತ್ನದ ಫಲವಾಗಿ ಗೂಡಿನ ಹಕ್ಕಿಯಾಗಿದ್ದ ಪರಿಷತ್ ಪಕ್ಷಿ ನಾಡಿನಲ್ಲೆಲ್ಲ ಹಾರಾಡಿತು ; ಸಾಹಿತ್ಯ ಸಂದೇಶ ಸಾರಿತು ! ನೋಡದವರೆಲ್ಲ ನೋಡಿದರು ; ಕೇಳದವರೆಲ್ಲ ಕೇಳಿದರು !

ಅದು ಹೇಗಾದೀತು ? ಅವರೇನು ಸಾಹಿತಿಯೇ ? ಯಾವ ಪುಸ್ತಕ ಬರೆದಿದ್ದಾರೆ ? ಸಂಸ್ಕೃತದ ಪರಿಚಯವಿದೆಯೆ ? ಇಂಗ್ಲಿಷ್ ಪದವಿ ಇದೆಯೆ ? (ಪ್ಯಾಂಟು ಧರಿಸುತ್ತಾರೆಯೆ ?!) ರಾಜಕಾರಣಿ ಎತ್ತ, ರಾಘವಾಂಕ ಎತ್ತ ? ಪುರಸಭೆ ಎಲ್ಲಿ, ಪರಿಷತ್ತು ಎಲ್ಲಿ ? ಇನ್ನು ಕನ್ನಡ ದೇಗುಲದ ಗತಿಯೇನು ?

ಇವು, ನಾರಾಯಣ ಅವರು ಪರಿಷತ್ತಿನ ಅಧ್ಯಕ್ಷ ಗಾದಿಗೆ ಸ್ಪರ್ಧಿಸಿದಾಗ ಸದ್ದು ಮಾಡಿದ ಪ್ರಶ್ನೆಗಳು. ಆಗ ನಾರಾಯಣರಲ್ಲಿ ಕೂಡಲೇ ಕೊಡುವ ಉತ್ತರಗಳಿರಲಿಲ್ಲ. ಆದರೆ, ಕ್ರಮೇಣ ಕೊಟ್ಟೇನೆಂಬ ವಿಶ್ವಾಸವಿತ್ತು.

ನಿಜ, ನಾರಾಯಣ ಶಬ್ದ-ಶಾಸ್ತ್ರ, ತರ್ಕ-ಆಗಮಗಳನ್ನು ಅಭ್ಯಾಸ ಮಾಡಿದವರಲ್ಲ; ಕಲಿ ಕಲಿತು ಉಲಿವ ಹವ್ಯಾಸದವರೂ ಅಲ್ಲ. ಅವರ ವಿದ್ಯೆ, ಪದವಿ ಎಲ್ಲ-ಲೋಕಾನುಭವ ; ವಾಸ್ತವ ಪ್ರಜ್ಞೆ.

ಅಧ್ಯಕ್ಷರಾಗುವ ಮುನ್ನವೇ ಪರಿಷತ್ತಿನ ಚಟುವಟಿಕೆಗಳ ನಿಕಟ ಗಮನ. ಕೆಲಸಮಾಡಲು ವಿಸ್ತಾರ ಅವಕಾಶವಿರುವುದನ್ನು ಕಂಡುಕೊಂಡ 'ಎಕ್ಸರೇ' ದೃಷ್ಟಿ.

ಅಧ್ಯಕ್ಷರಾದುದು ೧೯೭೭ರಲ್ಲಿ. ಅಲ್ಲಿಂದೀಚೆಗೆ ಅವರು ಮಾಡಿರುವ ಕೆಲಸ ಅದ್ಭುತ; ಅಪೂರ್ವ. ಪುರುಸೊತ್ತಿಲ್ಲದೆ ಪರಿಷತ್ತಿಗಾಗಿ ದುಡಿದವರು ಅವರೊಬ್ಬರೇ ಎಂದರೆ ಹೆಚ್ಚೇನಲ್ಲ.

ಕಾರ್ಯ ಸೂತ್ರ

ಕನ್ನಡ ಸಾಹಿತ್ಯ ಪರಿಷತ್ತು ಈಗ ನಾಡಿನಾದ್ಯಂತ ಮನೆ ಮಾತು. ಇಲ್ಲಷ್ಟೇ ಅಲ್ಲ; ಭಾರತದಲ್ಲೆಲ್ಲ. ಪರಿಷತ್ತನ್ನು ಈ ಎತ್ತರಕ್ಕೆ ಬೆಳೆಸಲು ನಾರಾಯಣ ಕೈಗೊಂಡ ಕ್ರಮ ಒಂದೆರಡಲ್ಲ.

ಯೋಚನೆ, ಯೋಜನೆ, ನಿರ್ವಹಣೆ-ಇವು ನಾರಾಯಣರ ಕಾರ್ಯಸೂತ್ರ. ಪರಿಷತ್ತು ಮೊಟ್ಟಮೊದಲಬಾರಿಗೆ ಪಡೆದುದು ತ್ರೈವಾರ್ಷಿಕ ಯೋಜನೆ; ನಂತರ ಪಂಚವಾರ್ಷಿಕಯೋಜನೆ.

ಯಾವ ಯೋಜನೆಯೇ ಇರಲಿ, ಸರ್ಕಾರದ ನೆರವು, ಸಾರ್ವಜನಿಕರ ಸಹಕಾರ ಪಡೆಯುವಲ್ಲಿ ನಾರಾಯಣ ಅವರದು ಸಿದ್ಧಹಸ್ತ! ತ್ರೈವಾರ್ಷಿಕ ಹಾಗೂ ಪಂಚವಾರ್ಷಿಕ ಯೋಜನೆಗಳು, ಕನ್ನಡ ನಿಘಂಟು, ಸಣ್ಣ ನಿಘಂಟು, ರತ್ನಕೋಶ, ಹಳಗನ್ನಡ ಕೃತಿಗಳ ಅನುವಾದ, ವಾರ್ಷಿಕ ಸಹಾಯ-ಹೀಗೆ ತಮ್ಮ ಅವಧಿಯಲ್ಲಿ ಪರಿಷತ್ತಿಗೆ ಸರ್ಕಾರದಿಂದ ಸುಮಾರು ಒಂದುಕೋಟಿ ರೂ.ಗಳ ನೆರವು ಒದಗಿಸಿಕೊಟ್ಟ ಸಾಹಸ.

ಈ ಲೇಖಕನ ನೆನಪಿನಲ್ಲಿದೆ: ಪರಿಷತ್ತಿನ ಸಭಾಂಗಣದಲ್ಲಿ ಒಂದು ಸಮಾರಂಭ. ಅಂದಿನ ಆರ್ಥಿಕ ಸಚಿವ ಶ್ರೀ ಎಂ. ವೈ. ಘೋರ್ಪಡೆ ಮುಖ್ಯ ಅತಿಥಿ. ಅವರು ತಮ್ಮ ಭಾಷಣದಲ್ಲಿ "ಪರಿಷತ್ತಿಗೆ ಕೊಟ್ಟ ಪ್ರತಿಯೊಂದು ಕಾಸೂ ಸಾರ್ಥಕವಾಗುತ್ತದೆಂಬ ವಿಶ್ವಾಸ ಸರ್ಕಾರಕ್ಕಿದೆ. ಆದ್ದರಿಂದ ಪರಿಷತ್ತಿಗೆ ಹಣದ ಕೊರತೆಯಾಗದಂತೆ ನೋಡಿಕೊಳ್ಳುವ ಭರವಸೆ ಕೊಡುತ್ತೇನೆ. ಅದರಲ್ಲೂ ನಾರಾಯಣ ಅವರಂತಹ ಅಧ್ಯಕ್ಷರಿರುವಾಗ ನಮಗೆ ಭಯವಿಲ್ಲ" ಎಂದಿದ್ದರು. ನಾರಾಯಣ ಅವರ ಪ್ರಾಮಾಣಿಕತೆಗೆ, ಕಾರ್ಯ ದಕ್ಷತೆಗೆ ಈ ಮಾತುಗಳು ಸಾಕೆಂದುಕಾಣುತ್ತದೆ.

ನೇರ ಅಭಿಪ್ರಾಯ

ಪರಿಷತ್ತಿನ ಸುವರ್ಣ ಮಹೋತ್ಸವ, ವಜ್ರಮಹೋತ್ಸವ ಮತ್ತು ದೆಹಲಿಯ ಸಾಹಿತ್ಯ ಸಮ್ಮೇಳನಗಳು ನಾರಾಯಣ ಅವರ ಸಂಘಟನಾ ಶಕ್ತಿಗೆ ಸುಂದರ ಸಾಕ್ಷಿಗಳು ; ಪರಿಷತ್ತಿಗೆ ಅಖಿಲ ಭಾರತ ಕೀರ್ತಿ ತಂದುಕೊಟ್ಟ ಸಾಹಿತ್ಯೋತ್ಸವಗಳು. ಕನ್ನಡ ಸಾಹಿತ್ಯ-ಸಂಸ್ಕೃತಿಗಳ ಹಿತಚಿಂತನೆಯ ಜೊತೆಗೆ ಸಮಗ್ರಭಾರತದ ಸೌಹಾರ್ದದ ದೃಷ್ಟಿ. ಪರಿಷತ್ತಿಗೆ ವಿಶ್ವವ್ಯಾಪ್ತಿ ಕೊಡುವ ಆಶಯ. ಈ ಉತ್ಸವಗಳಲ್ಲಿ

ಅವರು ಯೋಜಿಸಿದ 'ಅಂತರ ಭಾರತಿ' ವೇದಿಕೆ ಭಾಷಾಬಾಂಧವ್ಯ ಮತ್ತು ರಾಷ್ಟ್ರೀಯ ಭಾವೈಕ್ಯತೆಯ ಮಧುರ ಸಂಕೇತ.

ಇಷ್ಟಾದರೂ "ಪರಿಷತ್ತು ಕೇವಲ ಪಂಡಿತರ ಸೊತ್ತಾಗಬಾರದು. ಹಳ್ಳಿಯಿಂದ ದಿಳ್ಳಿಯವರೆಗೆ ಕನ್ನಡ ಸಾಹಿತ್ಯದ ಕಂಪು ಹರಡಬೇಕು. ಜನ ಸಾಮಾನ್ಯರೂ ಸಾಹಿತ್ಯದ ಸಂಪರ್ಕ ಪಡೆಯಬೇಕು. ಸಾಹಿತ್ಯ ಸೃಷ್ಟಿಸುವಾಗ ಅಂತಹ ಜನ ಸಾಮಾನ್ಯರನ್ನು ಸಾಹಿತಿಗಳು ದೃಷ್ಟಿಯಲ್ಲಿಟ್ಟುಕೊಳ್ಳಬೇಕು. ನಮಗೆ ಬೇಕಾಗಿರವುದು ಭಾವಲೋಕ ವಿಹಾರಕ್ಕಿಂತ ವಾಸ್ತವ ಲೋಕ ವಿಚಾರ" ಎನ್ನುವುದು ನಾರಾಯಣ ಅವರ ನೇರ ಅಭಿಪ್ರಾಯ.

ಪರಿಷತ್ತಿನ ಗ್ರಂಥ ಪ್ರಕಟಣಾ ಕಾರ್ಯದಲ್ಲಿ ನಾರಾಯಣ ಅವರು ಅಧ್ಯಕ್ಷರಾಗಿದ್ದ ಅವಧಿ ಒಂದು ಅದ್ವಿತೀಯ ದಾಖಲೆ. ಪರಿಷತ್ತು ಆರಂಭವಾದ ೫೫ ವರ್ಷಗಳಲ್ಲಿ ಒಟ್ಟು ೫೦ ಗ್ರಂಥಗಳು ಪ್ರಕಟಣೆಯಾಗಿದ್ದರೆ, ಈಚಿನ ಎಂಟೊಂಬತ್ತು ವರ್ಷಗಳಲ್ಲಿ ೨೫೦ ಗ್ರಂಥಗಳ ಪ್ರಕಟಣೆ. ಪ್ರತಿಯೊಂದು ಪ್ರಕಾರದಲ್ಲಿ ಪ್ರಾತಿನಿಧ್ಯ. ಸಾಮಾನ್ಯ ಓದುಗರಿಗಾಗಿ ೨೦ ಹಳೆಗನ್ನಡ ಸಾಹಿತ್ಯ ಕೃತಿಗಳ ಸರಳಾನುವಾದ ಪ್ರಕಟಣೆ ಒಂದು ವಿಶೇಷ ಕಾರ್ಯ.

ಪ್ರಥಮ ದಾಖಲೆ

ಸಂಘಟನೆಗೆ ಮತ್ತೊಂದು ಹೆಸರು ನಾರಾಯಣ. ಯುವ ಬರಹಗಾರರ ಶಿಬಿರ, ಮಹಿಳಾ ಲೇಖಕಿಯರ ಗೋಷ್ಠಿ, ವಯಸ್ಕರ ಶಿಕ್ಷಣ ತರಗತಿಗಳು, ಪರಿಷತ್ತಿನ ಜಿಲ್ಲಾ ಶಾಖೆಗಳ ರಚನೆ, ಅಂತರರಾಷ್ಟ್ರೀಯ ಮಹಿಳಾ ವರ್ಷಾಚರಣೆ, ಗಮಕ ಸಮ್ಮೇಳನ, ಕೀರ್ತನ ಸಮ್ಮೇಳನ, ಜನಪದ ಕಲಾವಿದರ ಸಮ್ಮೇಳನ, ಸಾಹಿತ್ಯ ಪ್ರಸಾರ ಕಾರ್ಯ, ಪುಸ್ತಕ ಪ್ರದರ್ಶನ-ಇವೆಲ್ಲ ಅವರ ಸಂಘಟನಾ ಸಾಮರ್ಥ್ಯದ ಫಲಶ್ರುತಿ. ಪರಿಷತ್ತಿನ ಇತಿಹಾಸದಲ್ಲಿ ಇವೆಲ್ಲ ಪ್ರಥಮ ದಾಖಲೆಗಳು.

ಅನುಕೂಲ ಒದಗಿದಾಗ ಸಾಹಿತ್ಯ ಸಮ್ಮೇಳನ ನಡೆಸುವುದನ್ನು ಬಿಟ್ಟರೆ ಉಳಿದಂತೆ ಮೌನವಾಗಿರುತ್ತಿದ್ದ ಪರಿಷತ್ತಿನ ಕಾರ್ಯಾಲಯ ಈಗ ನಿತ್ಯಚಟುವಟಿಕೆಗಳ ಕೇಂದ್ರ. ಪರಿಷತ್ತಿನ 'ಸರಸ್ವತೀ ಭಂಡಾರ' ಈಗ ಆಕರ ಗ್ರಂಥಗಳ, ಆಸಕ್ತ ಓದುಗರ ಮಹಾಸಾಗರ. ಸ್ಥಿರಪುಸ್ತಕ ಪ್ರದರ್ಶನ, ಓಲೆಗರಿಗಳ ಸಂಗ್ರಹ, ಶಾಸನಗಳ ಅಧ್ಯಯನ, ಜಾನಪದ ಸಂಗ್ರಹ, ಗಮಕ ತರಗತಿಗಳು, ಕನ್ನಡ ಶೀಘ್ರಲಿಪಿ ತರಗತಿಗಳು, ಸಭೆ-ಸಮಾರಂಭಗಳು ಹೀಗೆ ನಿರಂತರ ಕಾರ್ಯಚಟುವಟಿಕೆಗಳು.

ನಾರಾಯಣ ಅವರು ಅಧ್ಯಕ್ಷರಾದ ಮೇಲೆ ಮನೆಗಿಂತ ಪರಿಷತ್ತಿನ ಕಾರ್ಯಾಲಯದಲ್ಲಿದ್ದುದೇ ಹೆಚ್ಚು. ಪರಿಷತ್ತಿನ ಕಾರ್ಯವೆಂದರೆ ಅಷ್ಟು ಮೆಚ್ಚು. ಯಾವ ಕೆಲಸ

ಹಿಡಿದರೂ ಪಟ್ಟುಹಿಡಿದು ಮುಗಿಸುವ ಶ್ರದ್ಧೆ. ಇಂದು ನಾವು ಕಾಣುವ ಪರಿಷತ್ತಿನ ಸುಂದರ ಸುವರ್ಣ ಮಹೋತ್ಸವ ಕಟ್ಟಡದ ಕೀರ್ತಿ ಅವರಿಗೇ ಸಲ್ಲಬೇಕು. ಅವರು ವಜ್ರಮಹೋತ್ಸವ ಕಟ್ಟಡಕ್ಕೂ ಶಂಕುಸ್ಥಾಪನೆ ಮಾಡಿಸಿದ್ದಾರೆ.

ಜಾನಪದ ಅಭಿವೃದ್ಧಿ

ನಾರಾಯಣ ಅವರ ಮತ್ತೊಂದು ಮಹತ್ ಸಾಧನೆ ಜಾನಪದ ಅಭಿವೃದ್ಧಿಯ ಯೋಜನೆ. "ಏನು ವಿಚಿತ್ರ ? ಪರಿಷತ್ತು ವಿದ್ವಾಂಸರ ವೇದಿಕೆ. ಇಲ್ಲಿಗೆ ಅನಕ್ಷರಸ್ಥರ ವಿಷಯವೇಕೆ"? ಎಂದು ಕೆಲವರು ಹುಬ್ಬೇರಿಸಿದುದೂ ಉಂಟು. ಆದರೂ ನಾರಾಯಣ ಹಿಂದೆ ಸರಿಯಲಿಲ್ಲ. ಆ ಕಾರ್ಯದಲ್ಲಿ ಈ ಲೇಖಕನನ್ನು ಬಳಸಿಕೊಂಡರು. ಆಗ ಅವರಿತ್ತ ಪ್ರೋತ್ಸಾಹ, ಸಹಕಾರಗಳು ಹೃದಯ ತುಂಬುವಂತಹವು.

ಕನ್ನಡ ಜಾನಪದದ ಇತಿಹಾಸದಲ್ಲೇ ನಡೆಯದ ಕೆಲಸ. ಪ್ರಪ್ರಥಮ ಬಾರಿಗೆ ಇಡೀ ನಾಡಿನ ಜನಪದ ಕಲೆಗಳ ಮಾಹಿತಿ ಸಂಗ್ರಹ, ಜಿಲ್ಲಾ ಮತ್ತು ರಾಜ್ಯಮಟ್ಟದ ಕಲಾಮೇಳ, ಗ್ರಂಥ ಪ್ರಕಟಣೆ, ಸಾಕ್ಷ್ಯ ಚಿತ್ರ ತಯಾರಿಕೆ, ಜನಪದ ಕಲಾವಿದರ ಮಾಸಾಶನಕ್ಕಾಗಿ ಸರ್ಕಾರಕ್ಕೆ ಶಿಫಾರಸು-ಹೀಗೆ ಬೃಹತ್ ಪ್ರಮಾಣದ ಕೆಲಸ ನಡೆದಿದೆ.

ವ್ಯವಹಾರ ಜಾಣ್ಮೆಯ ಒಂದು ವಿಶ್ವವಿದ್ಯಾನಿಲಯ ಶ್ರೀ ನಾರಾಯಣ. ಎಲ್ಲರೊಡನೆಯೂ ಒಂದೇ ಬಗೆಯ ಸರಸ-ಸಜ್ಜನಿಕೆ. ಕೈಹಿಡಿದ ಕೆಲಸಕ್ಕೆ ನಿಷ್ಠೆಯ ಗೊಬ್ಬರ, ಪ್ರಾಮಾಣಿಕತೆಯ ನೀರು ಎರೆದು, ಕಳೆ ತೆಗೆದು ಬೆಳೆಬೆಳೆಯುವ ಕೃಷಿ ಕಲೆ. ಎಂತಲೇ ಅವರ ಕೆಲಸಕ್ಕೆ ಅಷ್ಟು ಬೆಲೆ !

ವಿಚಾರಧಾರೆ

"ನಮ್ಮ ವಯಸ್ಕರಲ್ಲಿ ಸಾಕ್ಷರತೆ ಬೆಳೆಯುವುದು ಬಹು ಮುಖ್ಯ. ಅದರಿಂದ ಅವರಲ್ಲಿ ಭಾಷೆ-ಸಾಹಿತ್ಯಗಳ ಅಭಿಮಾನ ಮೂಡುತ್ತದೆ. ತಮ್ಮ ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಅವರು ಮಹತ್ವ ಕೊಡುತ್ತಾರೆ."

"ನಮ್ಮ ಸಾಮಾಜಿಕ ಜೀವನವೆಲ್ಲ ಕೆಟ್ಟಿದೆ ಎಂದು ನಾನು ಒಪ್ಪಲಾರೆ. ಶುಭ್ರ ಬಟ್ಟೆಯ ಮೇಲೆ ಬಿದ್ದ ಕೆಸರು ಪ್ರಧಾನವಾಗಿ ಕಾಣುವಂತೆ, ಸಾಮಾಜಿಕ ಕ್ಷೇತ್ರದ ಅನಿಷ್ಟಗಳೇ ಎದ್ದು ಕಾಣುತ್ತವೆ. ಇದರಿಂದ ಹತಾಶರಾಗಬೇಕಾಗಿಲ್ಲ. ಅನಿಷ್ಟಗಳನ್ನು ಸಂಪೂರ್ಣ ನಿವಾರಣೆ ಮಾಡಲು ಸಾಧ್ಯವೂ ಇಲ್ಲ. ಆದರೆ, ಅವು ಹರಡದಂತೆ ನೋಡಿಕೊಳ್ಳುವುದು ಧಾರ್ಮಿಕ ಹಾಗೂ ನೈತಿಕ ಶಿಕ್ಷಣಗಳಿಂದ ಸಾಧ್ಯವಿದೆ".

"ನಾವು ದುಡಿಮೆಗೆ ಮೊದಲು ಗಮನ ಕೊಡಬೇಕು. ಸಂಪತ್ತಿನ ಗಳಿಕೆಯ ಜೊತೆಗೆ ನೈತಿಕ ಮೌಲ್ಯದ ಗಳಿಕೆಯೂ ಮುಖ್ಯ. ಇದಕ್ಕೆ ಶರಣರ ವಚನಗಳು ನಮಗೆ ಮಾರ್ಗದರ್ಶಕ.

ಆರ್ಥಿಕ, ಧಾರ್ಮಿಕ ಮತ್ತು ಸಾಮಾಜಿಕ ಪ್ರಗತಿಗೆ ಬಸವಣ್ಣನವರ ಕಾಯಕ ತತ್ತ್ವ ಆದರ್ಶಪೂರ್ಣ. ಬಸವಣ್ಣನವರ ಈ ಮಹಾತತ್ತ್ವವನ್ನು ಮನಗಂಡ ಮೇಲೆಯೇ ರಾಷ್ಟ್ರ ಕವಿ ಕುವೆಂಪು ಅವರು ಪರಿಷತ್ತಿಗೆ ನೀಡಿದ್ದ ಮೂಲ ನಾಡಗೀತೆಗೆ ಬಸವಣ್ಣನವರ ಹೆಸರನ್ನು ಸೇರಿಸಿದ್ದು. ಹಿಂದೆ ಶರಣರು ಕ್ರಾಂತಿ ನಡೆಸದಿದ್ದರೆ ಸಾಹಿತ್ಯ ಮತ್ತು ಸಾಮಾಜಿಕ ದೃಷ್ಟಿಯಿಂದ ನಾವು ಇನ್ನೂ ಬಹಳ ಹಿಂದುಳಿಯುತ್ತಿದ್ದೆವು."

ಇದು ನಾರಾಯಣ ಅವರ ವಿಚಾರಧಾರೆ.

ಕರ್ತವ್ಯಶೀಲತೆ

ನಾರಾಯಣ ಅವರು ನಿಂದೆಗೆ ಎಂದೂ ಹಿಂಜರಿದವರಲ್ಲ. 'ಕಿಡಿಕಿಡಿ ಕೆದರಿದರೆ ಎನಗೆ ಹಸಿವು ತೃಷೆ ಅಡಗಿತೆಂಬೆನು' ಎನ್ನುವ ಅಕ್ಕಮಹಾದೇವಿಯ ನಿಷ್ಠೆ. 'ಕಾಯದ ಕಳವಳಕ್ಕಂಜಿ ಕಾಯಯ್ಯ' ಎನ್ನದ ಶರಣಧರ್ಮದ ಕೆಚ್ಚು. 'ಏರಿ ಕಟ್ಟುವುದು ನಮ್ಮ ಕೆಲಸ, ನೀರು ತುಂಬುವುದು ನಿಸರ್ಗದ ಕೆಲಸ' ಎನ್ನುವ ಕರ್ತವ್ಯಶೀಲತೆ.

'ಗುರುವಾದಡೆಯೂ ಕಾಯಕದಿಂದಲೇ ಮುಕ್ತಿ' ಎನ್ನುವ ಶರಣವಾಣಿಯಂತೆ ಅಧ್ಯಕ್ಷರಾಗಿದ್ದರೂ ಸಾಮಾನ್ಯ ಕಾರ್ಯಕರ್ತರಂತೆ ದುಡಿದವರು ಶ್ರೀ ನಾರಾಯಣ. ವಹಿಸಿಕೊಂಡ ಕೆಲಸವನ್ನು ಇಷ್ಟೊಂದು ಅರ್ಪಣ ಮನೋಭಾವದಿಂದ ಮಾಡುವವರು ಅಪರೂಪ. ಕರ್ಮಯೋಗದ ಪರಮ ರಹಸ್ಯ ನಾರಾಯಣರಲ್ಲಿ ನಿಜರೂಪ!

ಧರ್ಮಪತ್ನಿಯ ಹೆಸರು ಶ್ರೀಮತಿ ಯಶೋದಮ್ಮ. ನಾಲ್ಕು ಮಕ್ಕಳಲ್ಲಿ ಮೂರು ಗಂಡು. ಬಂಧು-ಬಳಗದವರಿಂದ ಸದಾ ತುಂಬಿದ ಮನೆ. ನಗರದಲ್ಲಿದ್ದರೂ ನಗರದ 'ಬಿನ್ನಾಣ'ಕ್ಕೆ ಒಳಗಾಗದ ಸರಳ ಜೀವನ!

ನಾರಾಯಣ ಪರಿಶುದ್ಧ ಸಾಮಾಜಿಕ ಜೀವಿ. 'ಬೆಟ್ಟದಡಿಯ ಹುಲ್ಲಾಗಿ, ಮನೆಗೆ ಮಲ್ಲಿಗೆಯಾಗಿ, ದೀನದುರ್ಬಲರಿಗೆ ಜೇನು ಸಕ್ಕರೆಯಾಗಿ' ಎಲ್ಲರಿಗೂ ಬೇಕಾದ ಲೋಕಾನುಭಾವಿ!

> ಜೀವನವೆಂಬುದು ಹಿಂತಿರುಗಿ ಬರುವ ಟಿಕೆಟ್ (Return Ticket) ತೆಗೆದುಕೊಂಡು ಪರದೇಶ ಪ್ರಯಾಣಮಾಡಿದಂತೆ, ಇಂದಿಲ್ಲ ನಾಳೆ ಹಿಂತಿರುಗಲೇ ಬೇಕು.
>
> —ಡಾ|| ಎಂ.ಸಿ. ಮೋದಿ

ಲಿಂಗಾಯತ ಧರ್ಮ ಮತ್ತು ಕರ್ಮಸಿದ್ಧಾಂತ

ವಿಶ್ವಗುರು ಬಸವಣ್ಣನವರೇ ಆದ್ಯರಾಗಿ ಪ್ರಾರಂಭವಾದ ಲಿಂಗಾಯತ ಧರ್ಮದ ಸಂವಿಧಾನವು ಕರ್ಮಸಿದ್ಧಾಂತವನ್ನು ಒಪ್ಪುವದೆ? ಸರಿಯಾದ ತಾತ್ತ್ವಿಕ ಅಧ್ಯಯನ (philosophical study) ನಡೆಯದಿರುವದರಿಂದ ಈ ಬಗ್ಗೆ ಒಬ್ಬೊಬ್ಬರು ಒಂದೊಂದು ರೀತಿ ಬರೆಯುತ್ತಾರೆ. ತಮಗೆ ತಿಳಿದಂತೆ ಪ್ರತಿಪಾದಿಸುತ್ತಾರೆ. ಇಂಥ ಪ್ರತಿಪಾದನೆಗಳು ಇನ್ನೂ ಹೆಚ್ಚು ಹೆಚ್ಚಿನ ಗೊಂದಲಗಳನ್ನು ಜನತೆಯ ತಲೆಯಲ್ಲಿ ಹುಟ್ಟಿಸುತ್ತವೆ. ಮೈಸೂರಿನಿಂದ ಹೊರಡುವ ಶರಣ ಸಂತಾನ ಎಂಬ ತ್ರೈಮಾಸಿಕದ ಸಂಪಾದಕರು ಪತ್ರಿಕೆಯ ಅಕ್ಟೋಬರ್ ಸಂಚಿಕೆಯಲ್ಲಿ ಒಂದು ಪ್ರಶ್ನೆಗೆ ಉತ್ತರಿಸುತ್ತ ೩ನೆಯ ಪುಟದಲ್ಲಿ, ಪ್ರಶ್ನೆ ವಿಭಾಗವಲ್ಲಿ ಹೀಗೆ ಹೇಳುತ್ತಾರೆ.

ಪ್ರಶ್ನೆ : ಪೂರ್ವಜನ್ಮ ಒಪ್ಪುತ್ತೀರಾ? (ಸ್ವರ್ಗನರಕಗಳ ಕಲ್ಪನೆಒಪ್ಪುತ್ತೀರಾ?)

ಉ : ಪೂರ್ವಜನ್ಮವನ್ನು ಶರಣರು ವಿಶಿಷ್ಟಾರ್ಥದಲ್ಲಿ ಒಪ್ಪುತ್ತಾರೆ. ಅದೀಕ್ಷಿತವಾದ ಪ್ರಾಕೃತನೆನಿಸಿದ ಮಾಂಸ ಶರೀರವೇ "ಪೂರ್ವಜನ್ಮ" ವೆನಿಸುತ್ತದೆ. ದೀಕ್ಷಿತನಾಗಿ ಪ್ರಾಕೃತ ಜನ್ಮವನ್ನು ನೀಗಿಕೊಂಡು ಲಿಂಗಶರೀರಿಯಾದ ಲಿಂಗವಂತನಿಗೆ ಪುನರ್ಜನ್ಮದ ಪ್ರಶ್ನೆಯೇ ಉದ್ಭವಿಸುವುದಿಲ್ಲ. "ಅಜಾತ" "ಅಯೋನಿಜ"ನಾದ ದೀಕ್ಷಾನ್ವಿತನು ಜನನದೊಡನೆ ಮರಣವನ್ನೂ ನೀಗಿಕೊಂಡಿರುವುದರಿಂದ 'ಸತ್ತು ಮತ್ತೆ ಹುಟ್ಟುವ' ಗೊಂದಲ ಅವನಿಗಿಲ್ಲ. ಅವನ ಸಕಲ ವಿಧಿ ನಿಷೇಧ ಕರ್ತವ್ಯ ತ್ಯಾಜ್ಯಗಳನ್ನು ಲಿಂಗಶರೀರದಲ್ಲಿಯೇ ನಡೆಸಿ, ಕೃತಕೃತ್ಯನಾಗುವುದರಿಂದ ಅವನಿಗೆ ಪುನರ್ಜನ್ಮವೆಂಬ ಮಾತೇ ಹಾಸ್ಯಾಸ್ಪದವೆನಿಸುತ್ತದೆ. ಹಿಂದೂ ಪೌರಾಣಿಕ ಪೌರೋಹಿತ ಕಲ್ಪನೆಯ ಪೂರ್ವಜನ್ಮ ಪುನರ್ಜನ್ಮಗಳನ್ನಂತೂ ಶರಣರು ಸುತರಾಂ ಒಪ್ಪುವುದಿಲ್ಲ! ಪೂರ್ವಜನ್ಮದ ಪಾಪವೆಂಬ ವ್ಯಥೆ; ಈ ಜನ್ಮದಲ್ಲಿ ಅಸಾಧ್ಯವೆಂಬ ನಿರಾಸೆ; ಪುನರ್ಜನ್ಮದಲ್ಲಿ ಪ್ರಯತ್ನಿಸೋಣವೆಂಬ ಉಪೇಕ್ಷೆ ಪಲಾಯನವಾದಗಳಿಂದ "ಪುರುಷ ಪ್ರಯತ್ನ" ನಿಶ್ಶೇಷವಾಗಿ ನಿರ್ಮೂಲವಾಗಿ ಹೋಗುತ್ತದೆ. ಆದುದರಿಂದ ಶರಣರು ಪೂರ್ವಜನ್ಮ ಪುನರ್ಜನ್ಮಗಳನ್ನು ವಾಚಾಮಗೋಚರವಾಗಿ ಖಂಡಿಸಿ "ಪುರುಷ ಪ್ರಯತ್ನ"ವನ್ನೇ ಎತ್ತಿ ಹಿಡಿಯುತ್ತಾರೆ.

ಪ್ರಶ್ನೆಕಾರರು "ನೀವು ಒಪ್ಪುತ್ತೀರಾ ?" ಎಂದು ಕೇಳಿದ್ದಕ್ಕೆ "ನನ್ನ ಅಭಿಪ್ರಾಯ ಹೀಗಿದೆ" ಎಂದು ಹೇಳಿದ್ದರೆ ನಾವು ಈ ವಿಷಯದ ಪ್ರಸ್ತಾಪ ಮಾಡಬೇಕಾಗಿರುತ್ತಿರ

ಲ್ಲಿಲ್ಲ. 'ಶರಣರು ಹೀಗೆ ಹೇಳುತ್ತಾರೆ' ಎಂದು ಸಂಪಾದಕರು ಪ್ರಸ್ತಾಪಿಸಿರುವುದರಿಂದ ತಾತ್ತ್ವಿಕ ವಿವರಣೆ ನೀಡುವುದು ಅನಿವಾರ್ಯ ಮತ್ತು ಅವಶ್ಯ.

ಎರಡನೆಯದಾಗಿ, ಅನೇಕರಿಗೆ "ಲಿಂಗಾಯತ ಧರ್ಮವು ಕರ್ಮಸಿದ್ಧಾಂತವನ್ನು ಒಪ್ಪುವುದೇ ಇಲ್ಲವೆ?" ಎಂಬ ಸಂದಿಗ್ಧತೆಯಿದೆ. ಮೂರನೆಯದಾಗಿ ಲಿಂಗಾಯತ ಧರ್ಮವೇ ಹೇಳಿರಲಿ, ಅಥವಾ ವೈದಿಕ ಧರ್ಮವೇ ಹೇಳಿರಲಿ-'ಕರ್ಮಸಿದ್ಧಾಂತವನ್ನು ಒಪ್ಪುವುದು ಸರಿಯೇ ಅಲ್ಲವೆ? ಒಪ್ಪಬೇಕೇ ಬಿಡಬೇಕೆ?' ಎಂಬ ಬಗ್ಗೆಯೂ ಸಂದೇಹ ಇದೆ. ಈ ಎಲ್ಲ ವಿಷಯಗಳನ್ನು ಇಲ್ಲಿ ಪ್ರಸ್ತಾಪಿಸಬಯಸಿರುವೆ.

ಭಾರತೀಯ ಜನ್ಯ ಎಲ್ಲ ಧರ್ಮಗಳು-ನಿರೀಶ್ವರವಾದಿ ಧರ್ಮ (ಜೈನ ಮತ್ತು ಬೌದ್ಧ)ಗಳೇ ಇರಲಿ, ಸೇಶ್ವರವಾದಿ ಧರ್ಮಗಳೇ ಇರಲಿ (ವೈದಿಕ, ಸಿಖ್, ಲಿಂಗಾಯತ, ಶೈವ, ವೈಷ್ಣವ) ಎಲ್ಲವೂ ಕರ್ಮಸಿದ್ಧಾಂತವನ್ನು ತಪ್ಪದೇ ಒಪ್ಪಿವೆ. ಭಾರತೀಯ ಧರ್ಮಗಳು ತಮ್ಮ ತಮ್ಮಲ್ಲಿ ಅನೇಕ ವ್ಯತ್ಯಾಸಗಳನ್ನು ಒಳಗೊಂಡಿದ್ದರೂ, 'ಓಂಕಾರ', 'ಕರ್ಮಸಿದ್ಧಾಂತ' 'ಆತ್ಮನ ಅಸ್ತಿತ್ವ' 'ಮುಕ್ತಿ' ಈ ವಿಷಯಗಳಲ್ಲಿ ಒಮ್ಮತದಿಂದಿವೆ.

ಕರ್ಮಸಿದ್ಧಾಂತವೆಂದರೇನು ?

ಪ್ರತಿಯೊಬ್ಬ ಮಾನವನಿಗೆ ಈಗಿನ ಜನ್ಮವಷ್ಟೇ ಅಲ್ಲ, ಅನೇಕ ಜನ್ಮಗಳಿವೆ. ಈಗಿನ ಜನ್ಮಕ್ಕೆ ಮೊದಲಿಗೆ ಹಲವಾರು, ಅನಂತ ಜನ್ಮಗಳಿವೆ, ಮತ್ತು ಅವನು ಯಾವುದೇ ಅಧ್ಯಾತ್ಮ ಸಾಧನೆ ಮಾಡದೆ, ಗುರುಕಾರುಣ್ಯ ಪಡೆಯದೆ ಮರಣ ಹೊಂದಿದರೆ ಪುನರ್ಜನ್ಮಗಳೂ ಸಹ ಇವೆ. ಮಾನವ ತಾನು ಮಾಡಿರುವ ಪಾಪ-ಪುಣ್ಯಗಳಿಗೆ ತಕ್ಕಂತೆ ಜನ್ಮ ಧರಿಸಲೇ ಬೇಕು ಎನ್ನುವುದೇ ಕರ್ಮಸಿದ್ಧಾಂತ. ಇದರ ಪ್ರಕಾರ ಈಗಿನ ಜನ್ಮ ಪೂರ್ವಜನ್ಮದ ಕಾರ್ಯ, ಪ್ರತಿಫಲ; ಮುಂದಿನ ಜನ್ಮಕ್ಕೆ ಕಾರಣ. ಈಗಿನದು ನಮಗೆ ೫ನೇ ಜನ್ಮ ಎಂದುಕೊಂಡರೆ ಇದು ನಾಲ್ಕನೆ ಜನ್ಮದ ಫಲ (Fruit) ಮುಂದಿನ ಜನ್ಮಕ್ಕೆ ಬೀಜ (Seed). ಈ ಕಾರ್ಯ-ಕಾರಣಗಳ ವಿವರಣೆಯೇ ಕರ್ಮ ಸಿದ್ಧಾಂತ.

ಕರ್ಮಸಿದ್ಧಾಂತ ಅಥವಾ ಮಾನವನ ಜೀವಕ್ಕೆ ಅನೇಕ ಜನ್ಮಗಳಿವೆ ಎಂಬ ಸಿದ್ಧಾಂತದಲ್ಲಿ, ಬಸವಣ್ಣನವರೇ ಆದಿಯಾಗಿ ಎಲ್ಲ ಶರಣರಿಗೆ ನಂಬುಗೆ ಇದೆ. ಜನ್ಮ ಜನ್ಮಾಂತರಗಳ ಸರಪಳಿ ಕತ್ತರಿಸಲೆಂದೇ ಅಧ್ಯಾತ್ಮ ಸಾಧನೆ, ಗುರುಕಾರುಣ್ಯ, ಯೋಗ ಸಾಧನೆಗಳ ಅವಶ್ಯಕತೆಯನ್ನವರು ಒತ್ತಿ ಹೇಳುತ್ತಾರೆ.

ಭವಪಾಶ ಭವಬಂಧನವಾದ ಕಾರಣವೇನಯ್ಯ
ಹಿಂದಣ ಜನ್ಮದಲ್ಲಿ ಲಿಂಗವ ಮರೆದೆನಾಗಿ
ಹಿಂದಣ ಸಿರಿಯಲ್ಲಿ ಜಂಗಮವ ಜರಿದೆನಾಗಿ
ಅರಿದೊಡೀ ಸಂಸಾರವ ಹೊದ್ದಲೀವೆನೆ
ಕೂಡಲ ಸಂಗಮದೇವಾ !

ಅನೇಕ ಎಳೆಗಳು ಸೇರಿ ಒಂದು ಹಗ್ಗವಾಗುವಂತೆ, ಮಾನವನು ಮಾಡುವ ವಿವಿಧ ಕಲ್ಪನೆ, ಕಾರ್ಯ, ಸಂಸ್ಕಾರಗಳು ಸೇರಿ ಭವದ ಪಾಶ ನಿರ್ಮಾಣವಾಗುತ್ತದೆ, ಜೀವಿಯನ್ನು ಬಂಧಿಸುತ್ತದೆ. ಈ ಬಂಧನಕ್ಕೆ ಕಾರಣಗಳೇನು ? ಹಿಂದಣ ಜನ್ಮದಲ್ಲಿ ದೇವನನ್ನು ಮರೆದುದು; ಹಿಂದಣ ಸಂಪದದಲ್ಲಿ ಜ್ಞಾನಿಗಳನ್ನು, ಮಹಾತ್ಮರನ್ನು ಜರಿದುದು, ಬಂಧನಕ್ಕೆ ಈ ಎರಡು ಕಾರಣಗಳನ್ನು ಕಂಡುಕೊಂಡ ನಂತರ: ಅವಕ್ಕೆ ಮತ್ತೆ ಅವಕಾಶ ಕೊಡದ ಬಳಿಕ ಇನ್ನು ಜನ್ಮಗಳಿಗೆ ಅವಕಾಶವೆಲ್ಲಿಯದು ? ಹೀಗೆ ಬಸವಣ್ಣನವರು ಅನೇಕ ಜನ್ಮಗಳಲ್ಲಿ ಈ ಜೀವಿಯು ಹಾಯ್ದು ಬಂದಿದೆ ಎಂಬುದನ್ನು, ಈಗಲಾದರೂ ಎಚ್ಚೆತ್ತುಕೊಳ್ಳದಿದ್ದರೆ ಮುಂದೆಯೂ ಈ ಕೋಟಲೆಗೆ ಒಳಗಾಗಲೇ ಬೇಕೆಂಬುದನ್ನು, ಒಪ್ಪುತ್ತಾರೆ. ಅವರ ಇನ್ನೂ ಕೆಲವು ಹೇಳಿಕೆಗಳನ್ನು ಗಮನಿಸುವಾ.

೧. ಹಿಂದೆ ನಾನಾ ಯೋನಿಯಲ್ಲಿ ಬಂದೆನೆಂಬ ಹೇಯವಿಲ್ಲ
ಮುಂದೆ ಮುಕ್ತಿಯಾಗಬೇಕೆಂಬ ಯುಕ್ತಿಯಿಲ್ಲ.

೨. ಕಟ್ಟೆದಿರಿನಲ್ಲಿ ಶಿವಭಕ್ತನ ಕಂಡು
ದೃಷ್ಟಿಯಾರೆ ಶರಣೆಂದಡೆ,
ಹುಟ್ಟೇಳು ಜನ್ಮದ ಪಾಪ ಬಿಟ್ಟುಹೋಹುದು ನೋಡಾ
—ಬ.ಷ.ವ ೧೪೦

೩. ಜನ್ಮಜನ್ಮಕ್ಕೆ ಹೋಗಲೀಯದೆ ಸೋಹಂ ಎಂದೆನಿಸದೆ
ದಾಸೋಹಂ ಎಂದೆನಿಸಯ್ಯಾ
ಬ.ಷ.ವ. ೪೭೩

೪. ಮುನ್ನಿನ ಜನ್ಮದಲ್ಲಿ ಗುರುಲಿಂಗ ಜಂಗಮವ
ಪೂಜಿಸಲರಿಯದ ಕಾರಣ ಬಹುಜನ್ಮಕ್ಕೆ ತಂದಿಕ್ಕಿದೆಯಯ್ಯಾ
ಬ.ಷ.ವ. ೪೩೨

೫. ಅರಿಯದೆ ಜನನಿಯ ಜಠರದಲ್ಲಿ ಬಾರದ ಭವಂಗಳಲ್ಲಿ ಬಂದೆ ತಂದೆ !
ಬ.ಷ.ವ ೨೧

೬. ದೇವನ ಪ್ರಸಾದ ಸಾನ್ನಿಧ್ಯದಿಂದ ಭವಜನ್ಮ
ಕರ್ಮ ಪಂಚಭೂತಪೂರ್ವನಾಸ್ತಿ. ಅಶಿ

ಅಕ್ಕಮಹಾದೇವಿಯು ತನ್ನೊಂದು ವಚನದಲ್ಲಿ ಸ್ಪಷ್ಟವಾಗಿ ಹೇಳುತ್ತಾಳೆ :

ಒಂದಲ್ಲ ಎರಡಲ್ಲ ಮೂರಲ್ಲ ನಾಲ್ಕಲ್ಲ
ಎಂಭತ್ತು ನಾಲ್ಕು ಲಕ್ಷ ಯೋನಿಯೊಳಗೆ ಬಂದೆ ಬಂದೆ !
ಬಾರದ ಶುಭಾಶುಭಂಗಳ ಉಂಡೆ ಉಂಡೆ
ಹಿಂದಣ ಜನನವೇನಾದೊಡಾಗಲಿ
ಮುಂದೆ ನೀ ಕರುಣಿಸಾ ಚನ್ನಮಲ್ಲಿಕಾರ್ಜುನ ||

ಈ ಭವ ಅಥವಾ 'ಪುನರಪಿ ಜನನಂ ಪುನರಪಿ ಮರಣಂ' ಎಂಬ ಭವದ ಸರಪಳಿಗೆ 'ಸಂಸಾರ'ವೆಂದೂ ಶರಣರು ಸಂಬೋಧಿಸುತ್ತಾರೆ.

ಸಂಸಾರವೆಂಬುದೊಂದು ಹಗೆಯಯ್ಯ ತಂದೆ.
ಎನ್ನ ವಂಶ ವಂಶದಪ್ಪದೆ ಅರಸಿಕೊಂಡು ಬರುತ್ತಿದೆಯಯ್ಯ
ಎನ್ನುವನರಸಿಯರಸಿ ಹಿಡಿದು ಕೊಲ್ಲುತ್ತಿದೆಯಯ್ಯಾ !
ನಿಮ್ಮ ಮರೆಹೊಕ್ಕೆ ಕಾಯಯ್ಯ ;
ಎನ್ನ ಬಿನ್ನಪವನವಧಾರು, ಚನ್ನಮಲ್ಲಿಕಾರ್ಜುನಾ."

ಸಂಸಾರ-ಭವ ಎಂಬ ಶತ್ರುವು ಜೀವಾತ್ಮನನ್ನು ವಂಶವಂಶದಪ್ಪದೆ, ಜನ್ಮ ಜನ್ಮಾಂತರದಲ್ಲಿ ಬೆನ್ನಟ್ಟಿ ಬರುತ್ತಿದೆ. ಹೆಚ್ಚು ಹೆಚ್ಚು ವಶಮಾಡಿಕೊಂಡು ಪತನ ಗೊಳಿಸುತ್ತಿದೆ. ನಿಸ್ಸಹಾಯಕನಾದ ದುಗುಡಗೊಂಡ ಜೀವಿಯು ಕರ್ಮಾಧ್ಯಕ್ಷನಾದ, ಭವದ ರಾಟಾಳಕ್ಕೆ ಸಿಗದೆ ದಾಂಟನಿಂದ ಏಕೈಕ ಶಕ್ತಿ ದೇವರ ಮರೆಹೋಗುವನು.

ಎಲ್ಲಿಯವರೆಗೆ ಅರಿವು ಮೂಡಿಲ್ಲವೋ, ಅಜ್ಞಾನದ ಪೊರೆ ಹರಿದಿಲ್ಲವೋ, ಪುಣ್ಯ-ಪಾಪಗಳ ನಿತ್ಯಾನಿತ್ಯ ಪ್ರಜ್ಞೆ ಇಲ್ಲವೋ, ಅಲ್ಲಿಯ ತನಕ ಜೀವಾತ್ಮವು ಅನೇಕ ಜನ್ಮಗಳಲ್ಲಿ ಬರಲೇ ಬೇಕು. ಈ ತಿರುಗಣಿ ಮಡುವಿನಿಂದ ಪಾರುಮಾಡಬಲ್ಲ ಏಕೈಕ ಶಕ್ತಿ ದೈವಾನುಗ್ರಹ. ಅದಕ್ಕಾಗಿ ಪರಮ ಪ್ರಭುವಿನಲ್ಲಿ ಶರಣುಹೊಕ್ಕರು ಶರಣರು. ಈ ವಿಚಾರವನ್ನು ಶಿವಯೋಗಿ ಸಿದ್ಧರಾಮೇಶ್ವರರ ವಾಣಿಯಲ್ಲಿ ಕೇಳಿ :

ಪುಣ್ಯ-ಪಾಪಂಗಳ ಅರಿಯದ ಮುನ್ನ ಅನೇಕ ಭವಂಗಳಲ್ಲಿ
ಬಂದು ನಿಮ್ಮ ನಿಲವನರಿಯದೆ ಕೆಟ್ಟೆನಯ್ಯಾ
ಇನ್ನು ನಿಮ್ಮ ಶರಣುಹೊಕ್ಕೆನಾಗಿ ನಾ ನಿಮ್ಮವನೆಂದು
ಅಗಲದಂತೆ ಮಾಡಾ ಅಯ್ಯಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

ಈ ಭವರೋಗಕ್ಕೆ ಚಿಕಿತ್ಸೆ ಮಾಡಬಲ್ಲ ವಿಭುನೆಂದರೆ ಪರಮಾತ್ಮ. ಅಂತೆಯೇ ಅವನನ್ನು "ಭವರೋಗ ವೈದ್ಯ"ನೆಂದು ಭಾವಿಸಿ ಜೀವಿಯು ಮೊರೆಹೋಗುತ್ತಾನೆ. ಹೀಗೆ ಪುನರ್ಜನ್ಮ-ಪೂರ್ವಜನ್ಮ ಸಿದ್ಧಾಂತ ಅಥವಾ ಕರ್ಮಸಿದ್ಧಾಂತವನ್ನು ಶರಣರು ಒಪ್ಪುತ್ತಾರೆ. ಬದುಕನ್ನು ಸಾರ್ಥೈಸಿಕೊಳ್ಳುವ ದಿವ್ಯಜ್ಞಾನ ಪಥದಲ್ಲಿ ನಡೆದು, ಗುರುಕಾರುಣ್ಯ ಪಡೆದು, ಲಿಂಗಧಾರಿಯಾಗಿ ಆತ್ಮಾನುಭೂತಿ ಪಡೆದ ನಿಜ "ಲಿಂಗಾಯತ"ನಿಗೆ ಪುನರ್ಜನ್ಮವಿಲ್ಲ. ಏಕೆಂದರೆ ಅವನಲ್ಲಿ ಭವಕ್ಕೆ ಬೀಜವಿಲ್ಲ. ಪಾಪ-ಪುಣ್ಯಗಳ ಸಂಸ್ಕಾರಗಳನ್ನು ಜ್ಞಾನಾಗ್ನಿಯಲ್ಲಿ ಅವನು ಹುರಿದುಕೊಂಡು ಬಿಡುವ ಕಾರಣ ಹುಟ್ಟಲಿಕ್ಕೆ ಬೇಕಾಧ ದ್ರವ್ಯ (Stuff) ಅವನಲ್ಲಿ ಇಲ್ಲದಂತಾಗುತ್ತದೆ.

ಕೇವಲ ನೆಪ ಮಾತ್ರಕ್ಕೆ ಲಿಂಗಾಯತ ಎನಿಸಿಕೊಂಡ ಮಾತ್ರಕ್ಕೆ, ತಂದೆಯು ಲಿಂಗಾಯತ ತಾನೂ ಲಿಂಗಾಯತ, ಲಿಂಗಧಾರಣೆಯಾಗಿರಲಿ ಬಿಡಲಿ ಎಂದರೆ ಇಂಥವರೆಲ್ಲ ಪುನರ್ಜನ್ಮ ತಪ್ಪಿಸಿಕೊಳ್ಳಲು ಸಾಧ್ಯವೆ ? ಒಂದು ವೇಳೆ ಲಿಂಗಧಾರಿಯಾಗಿಯೂ ಅದರ ಕಳೆಯನ್ನಾಗಲಿ, ಪ್ರಕಾಶವನ್ನಾಗಲೀ ಅನುಭವಿಸದ, ಮನ ಘನವಾಗದ ಮನುಜ ಮುಕ್ತಿವಂತನಾಗಬಲ್ಲನೆ ? ವ್ಯಾಖ್ಯೆಗೆ ತಕ್ಕಂತಹ ಲಿಂಗಾಯತರು ಎಷ್ಟು ಜನ ಸಿಕ್ಕಬಲ್ಲರು ? ಹೀಗೆ ಲಿಂಗಾಯತರಿಗೆಲ್ಲ ಪುನರ್ಜನ್ಮವೇ ಇಲ್ಲ ಎನ್ನುವುದು ವಿಡಂಬನಾತ್ಮಕ ಎನಿಸದೆ ? ಶರಣ ತತ್ತ್ವದ ಪ್ರಕಾರ (ಎಲ್ಲ ಭಾರತೀಯ ಧರ್ಮಗಳ ಪ್ರಕಾರವೂ ಸಹ) ಈ ಆತ್ಮನಿಗೆ ಪುರಾತನ ಇತಿಹಾಸವಿದೆ. ಇದು ಹಲವು ಬಾರಿ ದೇಹ ತೊಟ್ಟು ಬಂದು ಕರ್ತೃವಾಗಿ ಕರ್ಮಕ್ಕೆ ಕಾರಣವಾಗಿದೆ. ಜ್ಞಾತೃವಾಗಿ ಪ್ರಕಾಶಿಸುತ್ತದೆ, ಭೋಕ್ತೃವಾಗಿ ಅನುಭವಿಸುತ್ತದೆ. ನಮ್ಮ ಈಗಿನ ಜನ್ಮಕ್ಕೆ ಹಿಂದೆ ಸಾಕಷ್ಟು ಇತಿಹಾಸವಿದೆ. ಈಗಿನದರಲ್ಲಿಯಾದರೂ ಎಚ್ಚೆತ್ತುಕೊಂಡು ಮುಕ್ತಿ, ಹೊಂದದಿದ್ದರೆ ಭವಿಷ್ಯದಲ್ಲೂ ಜನ್ಮಧಾರಣೆ ಇರಬಲ್ಲದು. ಜಾಗೃತರಾದರೆ ಇಲ್ಲಿಯೇ ಈಗಲೇ ಜನನ-ಮರಣ ಸಂಕೋಲೆಗೆ ತಡೆ.

"ಶರಣ ಸಂತಾನ"ದ ಸಂಪಾದಕರು ತಿಳಿಸಿರುವಂತೆ ಕರ್ಮಸಿದ್ಧಾಂತ ಪೌರಾಣಿಕ ಪೌರೋಹಿತ ಕಲ್ಪನೆಯೆ ? ಇದು ತಾತ್ತ್ವಿಕ ಸಿದ್ಧಾಂತ. ಪುರೋಹಿತರ ಕೈಯಲ್ಲಿ ಸಿಕ್ಕು ಅನಾಹುತಕ್ಕೆ ಕಾರಣವಾಗಿದೆ. ಈ ರೀತಿ ಎಲ್ಲಾ ರಂಗಗಳಲ್ಲಿಯೂ ಆಗಿದೆ.

ಉದಾ :

ಸಂಗೀತವು ನಾದಯೋಗಿಯಲ್ಲಿ ಹುಟ್ಟಿ ಗಾಯಕನಲ್ಲಿ ಬೆಳೆದು ಕೊರವರಲ್ಲಿ ಸಾಯುವುದು. ನೃತ್ಯವು ನಾಟ್ಯಾಚಾರ್ಯನಲ್ಲಿ ಹುಟ್ಟಿ ನರ್ತಕರಲ್ಲಿ ಬೆಳೆದು ಕ್ಯಾಬರೆಯಲ್ಲಿ ಸಾಯುವದು. ಧರ್ಮವು ಅನುಭಾವಿಗಳಲ್ಲಿ ಹುಟ್ಟಿ ಪಂಡಿತರಲ್ಲಿ ಬೆಳೆದು ಪುರೋಹಿತರಲ್ಲಿ ಸಾಯುವದು. ಯಾವ ಪ್ರಸಂಗಗಳನ್ನು ಎಂದಿಗೂ ಬದಲು ಮಾಡಲು ಬರದೋ

ಅವು ಹಿಂದಿನ ಕರ್ಮಗಳ ಪ್ರತಿಫಲ. ಹುಟ್ಟುಗುರುಡತ್ವ, ಕುರೂಪ, ಕೆಟ್ಟ ರೋಗಗಳು ಮುಂತಾದವು. ಜಾತಿಯಾಗಲಿ, ಶ್ರೀಮಂತಿಕೆ-ಬಡತನಗಳಾಗಲಿ ಕರ್ಮಫಲಗಳಲ್ಲ; ಹೇಗೆಂದರೆ, ಓರ್ವ ಶೂದ್ರನೆಂದು ಕರೆಸಿಕೊಳ್ಳಲ್ಪಡುವವನು ಅಥವಾ ಅಸ್ಪೃಶ್ಯನೆನಿಸಿಕೊಳ್ಳುವವನು ಬಸವ ಧರ್ಮ ದೀಕ್ಷಾಬದ್ಧನಾದರೆ ಅವನ ಜಾತಿಯಳಿದು ಭಕ್ತತ್ವ, ಗುರುತ್ವ, ಜಂಗಮತ್ವಗಳು ಪ್ರಾಪ್ತವಾಗುವವು. ಭಾರತೀಯ ರಾಜಕೀಯ ಸಿದ್ಧಾಂತದಲ್ಲಿ ಒದಲಾವಣೆಗಳಾಗಿ ಅಸಮಾನತೆ ತೊಡೆದರೆ ಬಡತನ-ಶ್ರೀಮಂತಿಕೆಯ ಭೇದಗಳೆಲ್ಲಿ?

ಆರ್ಥಿಕ ಅಸಮಾನತೆ ಹೇಳಲು, ಜಾತಿವಾದ ಪುಷ್ಟೀಕರಿಸಲು ಕರ್ಮಸಿದ್ಧಾಂತ ಬಳಕೆಯಾದುದು ಭಾರತದಲ್ಲಿ ವಿಪರೀತಕ್ಕೆ ಕಾರಣವಾಯಿತು. "ಶರಣ ಸಂತಾನ" ಸಂಪಾದಕರು ಭಾವಿಸಿರುವಂತೆ ಅದು ನಿರಾಶಾವಾದವಲ್ಲ (Pessimism), ಸಂಪೂರ್ಣ ಆಶಾವಾದ ; ಪುರುಷ ಪ್ರಯತ್ನಕ್ಕೆ ಸಂಪೂರ್ಣ ಸ್ಥಾನ ಕೊಡುವದು. "Man is the architect of his own future". "ಬಿತ್ತಿದ ಬೆಳೆಯನ್ನು ಅವನು ಉಣ್ಣಲೇ ಬೇಕು". ಮಾನವನ ಪಾಪ-ಪುಣ್ಯಗಳಿಗೆ ತಕ್ಕಂತೆ ನ್ಯಾಯ ನೀಡುವ ದೈವೀನೀತಿಯೊಂದಿದೆ. ತನ್ನ ಪಾಪಗಳಿಗೆ ತಕ್ಕ ದುಃಖವನ್ನು ಕರ್ತೃ ಅನುಭವಿಸಲೇ ಬೇಕು ; ಸಜ್ಜನನಿಗೆ ಸುಖ ಇದ್ದೇ ಇದೆ. ಅದು ವಿಶ್ವನಿಯಮ ; ಲೋಕದ ನ್ಯಾಯಾಲಯದಲ್ಲಿ, ಸಮಾಜದಲ್ಲಿ ಶಿಕ್ಷೆ ತಪ್ಪಿಸಿಕೊಂಡ ಪಾಪಿ, ಶಿವನ ನ್ಯಾಯಾಲಯದಿಂದ ತಪ್ಪಿಸಿಕೊಳ್ಳಲಾರ. ತನ್ನ ಕರ್ಮಗಳ ಮೊತ್ತದ ಒತ್ತಡವೇ ದೈವ (Fate). ಮನಸ್ಸು ಮಾಡಿದರೆ ಇನ್ನು ಮುಂದಾದರೂ ಬದುಕನ್ನು ತಿದ್ದಿಕೊಳ್ಳಲವಕಾಶವಿದೆ. ಪುನರ್ಜನ್ಮ ಒಪ್ಪದ ಕ್ರೈಸ್ತ ಸಿದ್ಧಾಂತದಲ್ಲಿ ಒಂದೇ ಒಂದು ಅವಕಾಶ. ಅದನ್ನು ಕಳೆದುಕೊಂಡರೆ ನಿತ್ಯನರಕ (Eternal damnation). ಭಾರತೀಯ ಕರ್ಮಸಿದ್ಧಾಂತದಲ್ಲಿ ಹಾಗಲ್ಲ. ಭರವಸೆಯ ಆಶಾಕಿರಣ ದಿಗಂತದಲ್ಲಿ ಚಿರಂತನ. ಇದು ಪಲಾಯನವಾದ ಹೇಳುವದೆಂಬುದಕ್ಕಿಂತ ಕರ್ಮಸಿದ್ಧಾಂತವು ಕಷ್ಟ, ನಿರಾಸೆ, ವಿಘ್ನ-ಈ ಮುಂತಾದ ಎಲ್ಲ ಅಲೆಗಳನ್ನು ಛೇದಿಸಿ ಬಾಳದೋಣಿಯನ್ನು ಮುಂದೆ ತಳ್ಳುವ ಹುಟ್ಟುಗೋಲು.

ಶರಣರು ಪೂರ್ವಜನ್ಮವೆಂಬ ಶಬ್ದವನ್ನು ಪೂರ್ವಾಶ್ರಮ, ಪೂರ್ವಜೀವನವೆಂಬ ಅರ್ಥದಲ್ಲಿಯೂ ಬಳಸಿರುವರು. ಉದಾ :

೧. ಪೂರ್ವಜನ್ಮವಳಿದು ಪುನರ್ಜಾತನಾದ ಬಳಿಕ

೨. ಗುರುಕರುಣವಾದುದಕ್ಕೆ ಯಾವುದು ಚಿಹ್ನೆ? ಹಿಂದಣದನ್ನು ಬಿಟ್ಟು ಮುಂದೆ ಹಿಡಿಯಬೇಕು.

೩. ಹಿಂದಣ ಜನ್ಮದ ಚಿಹ್ನ ಬಿಡದನ್ನಕ್ಕ ನಿಮ್ಮುಮ ಪೂಜಿಸಿ ಏವೆನಯ್ಯಾ ?

೪. ಪೂರ್ವಜನ್ಮ ನಿವೃತ್ತಿಯಾಗಿ ಗುರುಕರುಣವಿಡಿದವಂಗೆ ಬಂಧನವೆಲ್ಲಿಯದೋ ?

ಈ ಎಲ್ಲ ಬಸವಣ್ಣನವರ ಉಕ್ತಿಗಳಲ್ಲಿ ಪೂರ್ವಜನ್ಮವೆಂದರೆ ಮಾನಸಾಂತರದ ಮುಂಚಿನ ಜೀವನ (Pre-conversion state) ಎಂಬರ್ಥ. ಬದುಕಿನಲ್ಲಿ ಅಧ್ಯಾತ್ಮ ಬದಲಾವಣೆಯಾದಾಗ ಮುಂಚಿನ (Pre) ಮತ್ತು ನಂತರದ (Post conversion state)ನಲ್ಲಿ ಒದಲಾವಣೆ ಬರಬೇಕು. ಇಲ್ಲವಾದರೆ ಅದು ಯಾಂತ್ರಿಕ ಕ್ರಿಯೆಯೇ ವಿನಾ ಆತ್ಮವಿಕಾಸದ ಕ್ರಿಯೆಯಲ್ಲ.

ಹೀಗೆ ಪೂರ್ವಜನ್ಮ (ಮಾನಸಾಂತರದ ದೀಕ್ಷಾಬೋಧೆಯ ಮೊದಲಿನ ಬದುಕು) ಪುನರ್ಜನ್ಮ (ದೀಕ್ಷಾನಂತರದ ಅಥವಾ ಮಾನಸಾಂತರದ ನಂತರದ ಬದುಕು ಎಂಬ ಅರ್ಥದಲ್ಲಿ) ಶಬ್ದಗಳು ಬಳಕೆಯಾಗಿದ್ದರೂ ಇಷ್ಟಕ್ಕೇ ಅರ್ಥವು ಸೀಮಿತವಾಗಿಲ್ಲ. ಶರಣರು ಕರ್ಮಸಿದ್ಧಾಂತ ಒಪ್ಪುತ್ತಾರೆ. ಹಾಗೆ ಒಪ್ಪುವರೆಂದೇ ಅಷ್ಟಾವರಣ ಧಾರಣೆ, ಷಟ್‌ಸ್ಥಲ ಆಚರಣೆ, ಶಿವಯೋಗ ಸಾಧನೆ ಮುಂತಾದ ಅಧ್ಯಾತ್ಮಿಕ ಮೌಲ್ಯಗಳಿಗೆ ಬೆಲೆಯುಂಟು.

(ಸಶೇಷ)

....

ಪ್ರವಚನದ ಬಗ್ಗೆ ಅಭಿಪ್ರಾಯ

ಓಂ ಶ್ರೀ ಗುರುಬಸವಲಿಂಗಾಯ ನಮಃ

ಜಗದ್ಗುರು ಶ್ರೀ ಶ್ರೀ ಶ್ರೀ ಪೂಜ್ಯ ಮಾತಾಜಿಯವರ ಪಾದಪದ್ಮಂಗಳಿಗೆ.

ಚಂದಕವಾಡಿ ದಾಸೋಹಮಠದ ವೇ|| ಬ್ರಂ|| ಶ್ರೀ ಬಸಪ್ಪಸ್ವಾಮಿಗಳು ಮಾಡುವ ಶರಣಾರ್ಥಿಗಳು.

ಅದಾಗಿ ನಾವು ತಮ್ಮ ನಾಮಾಂಕಿತವನ್ನು ಕೇಳಿದ್ದೆವು ನೋಡಿರಲಿಲ್ಲ. ತಾವು ಚಾಮರಾಜನಗರಕ್ಕೆ ಆಗಮಿಸಿ ಪ್ರವಚನವನ್ನು ಪ್ರಾರಂಭಿಸಿದ ಮೇಲೆ ಪೂಜ್ಯ ಮಾತಾಜಿಯವರು ಹೇಗಿದ್ದಾರೆಯೋ ನೋಡಬೇಕೆಂಬ ಕುತೂಹಲದಿಂದ ನಾನೇ ಬಂದು ತಮ್ಮ ಪ್ರವಚನವನ್ನು ಕೇಳಿದೆ. ಹಾಗೂ ದರ್ಶನಾಶೀರ್ವಾದವನ್ನು ಪಡೆದೆ. "ನಾನು ಅಕ್ಕ ಮಹಾದೇವಿಯವರನ್ನೇ ನೋಡುತ್ತಿದ್ದೇನೆ, ಅವರ ಬಾಯಿಂದಲೆ ಪ್ರವಚನ ಕೇಳುತ್ತಿದ್ದೇನೆ" ಎನ್ನುವ ಹಾಗಾಯ್ತು. ಆ ಮೇಲೆ ಪ್ರತಿ ದಿನವೂ ಚಾಮರಾಜನಗರಕ್ಕೆ ಬಂದು ಒಂದು ತಿಂಗಳು ತಮ್ಮ ಪ್ರವಚನವನ್ನು ಕೇಳಿದೆ. ತಮ್ಮ ಪ್ರವಚನವನ್ನು ಕೇಳಿದ ನಾನು ಪುಂಗಿಯ ನಾದವನ್ನು ಕೇಳಿದ ನಾಗರ ಹಾವಿನಂತೆ ನನ್ನನ್ನು ನಾನೇ ಮರೆತೆ. ಆಧ್ಯಾತ್ಮ ವಿಚಾರವಾಗಿ ನಾನು ಎಷ್ಟು ಕೇಳಬೇಕೆಂದು ಬಯಸಿದ್ದೆನೋ ಅಷ್ಟನ್ನು ತಮ್ಮಿಂದ ಕೇಳಿ ಪುನೀತನಾದೆ.

ನನ್ನ ಮನಸ್ಸಿನಲ್ಲಿ ಹತ್ತಾರು ವರ್ಷಗಳಿಂದಲೂ ಆತ್ಮವಿಚಾರವಾಗಿ ಬೇಕಾದಷ್ಟು ಪ್ರಶ್ನೆಗಳು ಮೂಡುತ್ತಿದ್ದವು; ಯಾರಿಂದಲೂ ಉತ್ತರ ಸಿಕ್ಕಿರಲಿಲ್ಲ. ನನ್ನ ಪ್ರಾರ್ಥನೆ ಶಿವನಿಗೆ ಮುಟ್ಟಿತೋ ಎಂಬಂತೆ ಲಕ್ಷ್ಮಿ, ಪಾರ್ವತಿ, ಸರಸ್ವತಿ, ಈ ತ್ರಿಮಾತೆಯರ ಸ್ವಸ್ವರೂಪವನ್ನು ಹೊಂದಿದ ತಮ್ಮಿಂದ ಉತ್ತರ ದೊರೆಯಿತು. ಹಗಲಿರುಳೂ ಕನಸು ಮನಸಿನಲ್ಲಿಯೂ ತಮ್ಮ ಪ್ರವಚನವನ್ನು ಕೇಳುತ್ತಲೇ ಇದ್ದೇನೆ. ನನ್ನ ಯಾವ ಜನ್ಮದ ಶಿವ ಪೂಜಾ ಫಲದಿಂದಲೋ ತಮ್ಮ ದರ್ಶನಾಶೀರ್ವಾದವನ್ನು ಪಡೆದ ನಾನೇ ಧನ್ಯನು. ತಮಗೆ ಉನ್ನತ ಮಟ್ಟದಲ್ಲಿ ಬರೆಯುವಷ್ಟು ಶಕ್ತಿ ನನಗಿಲ್ಲ. ತೊದಲು ನುಡಿಯಲ್ಲಿ ಬರೆದಿರುತ್ತೇನೆ ತಪ್ಪುಗಳಿದ್ದರೆ ಕ್ಷಮಿಸಬೇಕಾಗಿ ಪ್ರಾರ್ಥನೆ.

ಓಂ ಶಾಂತಿಃ ಶಾಂತಿಃ ಶಾಂತಿಃ

ಇತೀ ತಮ್ಮ

ವೇ|| ಬ್ರಂ|| ಶ್ರೀ|| ಬಸಪ್ಪಸ್ವಾಮಿಗಳು

* * * *

Edited by Jagadguru Mate Mahadevi, Published by Viswakalyana Mission, 24, II Block, Chord Road Rajajinagar Bangalore-10. Phone: 82335 Printed by Subramanya Press, Bangalore-40.

ವಿಶ್ವಕಲ್ಯಾಣ ಮಿಷನ್ನಿನ

ಸುಯಿಧಾನ ಸುಗ್ರಂಥ ಮಾಲೆಯು ಲಭ್ಯವಿರುವ ಗ್ರಂಥಗಳು

			ರೂ. ಪೈ.
೧.	ದೇವಾಪೂಜಾ ವಿಧಾನ	ಸ್ವಾಮಿ ಲಿಂಗಾನಂದ	೨-೫೦
೨.	ವಿರಹ ತರಂಗ	ಮಾತೆ ಮಹಾದೇವಿ	೩-೦೦
೩.	ಬಸವ ತತ್ತ್ವ ದರ್ಶನ	,,	೧೮-೦೦
೪.	ಚೆನ್ನಮಲ್ಲಾದ್ರಿಯ ಚಿತ್ಕಳೆ	ಸ್ವಾಮಿ ಲಿಂಗಾನಂದ	೬-೦೦
೫.	ಸಾಮೂಹಿಕ ಪ್ರಾರ್ಥನೆ	ಸಂ : ಮಾತೆ ಮಹಾದೇವಿ	೦-೫೦
೬.	ಹಿಂದೂ ಯಾರು ?	,,	೦-೫೦
೭.	ಬಸವ ವಚನ ಸುಧಾ	ಸಂ : ಮಾತೆ ಮಹಾದೇವಿ	೨-೦೦
೮.	ವಚನಾಮೃತ	ಸ್ವಾಮಿ ಲಿಂಗಾನಂದ	೨-೦೦
೯.	ಕಲ್ಯಾಣ ಕ್ರಾಂತಿ	ಮಾತೆ ಮಹಾದೇವಿ	೩-೫೦
೧೦.	ದೇವರ ಮಕ್ಕಳು	,,	೨-೫೦
೧೧.	ಪತಿತೋದ್ಧಾರಕ	,,	೧-೫೦
೧೨.	ಲಿಂಗಾಯತ ಧರ್ಮ ಕೈಪಿಡಿ	,,	೨-೫೦
೧೩.	ಲಿಂಗಾಯತ ಧರ್ಮ ಸ್ಥಾಪಕರಾರು ?	ಬಿ. ಸಿ. ಜವಳಿ	೪-೦೦
೧೪.	ಬಸವಣ್ಣನವರ ವಚನ ಪದ ಪ್ರಯೋಗ ಕೋಶ	ಎಸ್. ಆರ್. ಗುಂಜಾಳ	೫೦-೦೦
೧೫.	ದೇವನೆಡೆಗೆ	ಮಾತೆ ಮಹಾದೇವಿ	೧-೦೦
೧೬.	ಹೆಪ್ಪಿಟ್ಟ ಹಾಲು (ಸಾ. ಕಾದಂಬರಿ)	,,	೧೬-೦೦
೧೭.	Revolution in Kalyana	Mate Mahadevi	೫-೦೦
೧೮.	A Guide to Lingayatism	,,	೬-೦೦
೧೯.	Emblem of God	Swami Lingananda	೬-೦೦
೨೦.	ಅಧ್ಯಾತ್ಮ ಮತ್ತು ಮಹಿಳೆ	ಮಾತೆ ಮಹಾದೇವಿ	೧-೦೦
೨೧.	ತರಂಗಿಣಿ (ಅಕ್ಕಮಹಾದೇವಿಯ ಕಾದಂಬರಿ)	,,	೩೩-೦೦
೨೨.	ವಿಶ್ವ ವಿಭೂತಿ ಬಸವಣ್ಣ	,,	೪.೦೦
೨೩.	Lingaytism	,,	೩-೦೦
೨೪.	ವಿಶ್ವ ಕಲ್ಯಾಣ ಗೀತೆ	ಸಂ : ,,	೩-೦೦
೨೫.	ಮಾತೃ ಹರಕೆ	,,	೩-೦೦
೨೬.	Mataji A Profile		೦-೫೦
೨೭.	ವಿಶ್ವಕಲ್ಯಾಣ ಮಿಷನ್ ಸಿಂಹಾವಲೋಕನ ಮತ್ತು ಪಕ್ಷಿನೋಟ	ಶಿ. ಚಂದ್ರಕಂಠಿ	೦-೫೦
೨೮.	ಧರ್ಮಕ್ರಾಂತಿಯ ದಿವ್ಯಜ್ಯೋತಿ	ಗೋ.ರು.ಚ.	೦-೫೦
	ಬಸವಣ್ಣ, ಅಕ್ಕಮಹಾದೇವಿ, ಗುರೂಜಿ, ಮಾತಾಜಿಯವರ ಭಾವಚಿತ್ರಗಳು ಪ್ರತಿಯೊಂದಕ್ಕೆ		೧-೫೦
	ಲಿಂಗಾಯತ ಯಾರು ? (೦-೨೫) ವಿಶ್ವ ವಿಭೂತಿ ಬಸವಣ್ಣ (ಚಾರ್ಟ್)		೦-೫೦



Correspond to : Phone : 82335

BASAVA MANTAPA

No. 24, Chord Road, 2nd Block, Rajajinagar